ಎಸ್.ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿಗಳ ಅಧ್ಯಯನ

ಈ ನಿಬಂಧವನ್ನು ಕನ್ನಡ ವಿಶ್ವವಿದ್ಯಾನಿಲಯಕ್ಕೆ ಎಂ.ಫಿಲ್. (ಕನ್ನಡ) ಪದವಿಗಾಗಿ ಅರ್ಪಿಸಲಾಗಿದೆ.

ಸಂಶೋಧಕ

ಪುರುಷೋತ್ತಮ.ಹೆಚ್.ಬಿ

ನೋಂದಣಿ ಸಂಖ್ಯೆ : KRSMKS - 00635

ಮಾರ್ಗದರ್ಶಕರು

ಡಾ॥ ಚಂದ್ರಪ್ಪ

ಕರ್ನಾಟಕ ಸಂಘ (ರಿ), ಮಂಡ್ಯ
ಎಂ.ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ
(ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿದೆ)
ಮಂಡ್ಯ

೨೦೧೨ – ೨೦೧೩

1069

1069

AKSHARA GRANTHALAYA
ACC.NO. 048877

1069

1069

ಎನ್.ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿಗಳ ಅಧ್ಯಯನ

ಈ ನಿಬಂಧವನ್ನು ಕನ್ನಡ ವಿಶ್ವವಿದ್ಯಾನಿಲಯಕ್ಕೆ ಎಂ.ಫಿಲ್. (ಕನ್ನಡ) ಪದವಿಗಾಗಿ ಅರ್ಪಿಸಲಾಗಿದೆ.

ಸಂಶೋಧಕ

ಪುರುಷೋತ್ತಮ ಹೆಚ್.ಬಿ

ನೋಂದಣಿ ಸಂಖ್ಯೆ : **KRSMKS – 00635**

ಮಾರ್ಗದರ್ಶಕರು

ಡಾ॥ ಚಂದ್ರಪ್ಪ

ಕರ್ನಾಟಕ ಸಂಘ (ರಿ), ಮಂಡ್ಯ
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿದೆ)
ಮಂಡ್ಯ

೨೦೧೨ – ೨೦೧೩

8K0.9
PUR n
048877

ದೃಢೀಕರಣ ಪತ್ರ

"ಎನ್. ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿಗಳ ಅಧ್ಯಯನ " ಎಂಬ ವಿಷಯದ ಮೇಲೆ ಈ ನಿಬಂಧನವನ್ನು ಹಂಪಿ ಕನ್ನಡ ವಿಶ್ವವಿದ್ಯಾನಿಲಯದ **ಎಂ.ಫಿಲ್. (ಕನ್ನಡ)** ಪದವಿಗೆ ೨೦೧೨-೨೦೧೩ನೇ ಸಾಲಿನಲ್ಲಿ ವಿದ್ಯಾರ್ಥಿಯಾದ ಪುರುಷೋತ್ತಮ.ಹೆಚ್.ಬಿ.ಯವರು ನನ್ನ ಮಾರ್ಗದರ್ಶನ ಹಾಗೂ ಮೇಲ್ವಿಚಾರಣೆಯಲ್ಲಿ ಬರೆದು ಒಪ್ಪಿಸುತ್ತಿದ್ದಾರೆಂದೂ ಹಾಗೂ ಈ ವಿಷಯದ ಬಗ್ಗೆ ಬೇರೆ ಯಾರಿಗೂ ನಾನು ಮಾರ್ಗದರ್ಶನ ಮಾಡಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 29-7-13
ಸ್ಥಳ : ಚುಂಡೆ

ಮಾರ್ಗದರ್ಶಕರ ಸಹಿ
ಡಾ॥ ಚಂದ್ರಪ್ಪ
ಪ್ರಾಧ್ಯಾಪಕರು, ಕನ್ನಡ ವಿಭಾಗ
ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು
ಚನ್ನರಾಯಪಟ್ಟಣ, ಹಾಸನ ಜಿಲ್ಲೆ.

ಡಾ.ಚಂದ್ರಪ್ಪ
ಸಹ ಪ್ರಾಧ್ಯಾಪಕರು
ಮುಖ್ಯಸ್ಥರು, ಕನ್ನಡ ವಿಭಾಗ,
ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು
ಚನ್ನರಾಯಪಟ್ಟಣ, ಹಾಸನ ಜಿಲ್ಲೆ.

ಪ್ರಮಾಣ ಪತ್ರ

"ಎನ್.ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿಗಳ ಅಧ್ಯಯನ" ಎಂಬ ವಿಷಯದ ಮೇಲೆ ಈ ನಿಬಂಧವನ್ನು ಡಾ॥ಚಂದ್ರಪ್ಪರವರ ಮಾರ್ಗದರ್ಶನದಲ್ಲಿ ನನ್ನ ಸಂಶೋಧನೆಯ ಫಲವಾಗಿ ರಚಿಸಲ್ಪಟ್ಟು ಕನ್ನಡ ವಿಶ್ವ ವಿದ್ಯಾನಿಲಯದ **ಎಂ.ಫಿಲ್.(ಕನ್ನಡ)** ಪದವಿಗೆ ಅರ್ಪಿಸುತ್ತಿದ್ದೇನೆ.

ಈ ನಿಬಂಧವನ್ನು ಹಿಂದಿನ ವರ್ಷಗಳಲ್ಲಿ ಯಾರು ಇಲ್ಲಿಯವರೆಗೆ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿಲ್ಲವೆಂದು ನಾನು ಇಲ್ಲಿ ಪ್ರಮಾಣೀಕರಿಸುತ್ತಿದ್ದೇನೆ.

ದಿನಾಂಕ : ೨೬-೦೭-೨೦೧೩

ಸ್ಥಳ : ಮಂಡ್ಯ

ಪುರುಷೋತ್ತಮ ಹೆಚ್.ಬಿ.

ಪುರುಷೋತ್ತಮ ಹೆಚ್.ಬಿ.
ಎಂ.ಫಿಲ್. ಸಂಶೋಧನಾ ವಿದ್ಯಾರ್ಥಿ
ನೋಂದಣಿ ಸಂಖ್ಯೆ : **KRSMKS – 00635**

ಎನ್. ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿಗಳ ಅಧ್ಯಯನ
ಪರಿವಿಡಿ

	ಪುಟ ಸಂಖ್ಯೆ
ಅಧ್ಯಾಯ–೧	
ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ	೧
ಅಧ್ಯಾಯ–೨	
ಪತ್ತೇದಾರಿ ಕಾದಂಬರಿ ಪ್ರಕಾರ ಬೆಳೆದು ಬಂದ ದಾರಿ	೮
ಅಧ್ಯಾಯ–೩	
ಎನ್. ನರಸಿಂಹಯ್ಯನವರ ಜೀವನ ಮತ್ತು ಸಾಹಿತ್ಯ	೧೨
ಅಧ್ಯಾಯ–೪	
ಎನ್. ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿಗಳ ವಿಶ್ಲೇಷಣೆ	೨೬
ಅಧ್ಯಾಯ–೫	
ಭಾಷಾ ಶೈಲಿ ಮತ್ತು ನಿರೂಪಣಾ ವಿಧಾನ	೪೨
ಅಧ್ಯಾಯ–೬	
ಎನ್. ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿ ಮತ್ತು ಪಾಶ್ಚಾತ್ಯ ಪತ್ತೇದಾರಿಗಳ ನಡುವಿನ ಸಂಬಂಧ	೫೦
ಅಧ್ಯಾಯ–೭	
ಎನ್. ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿ ಮತ್ತು ಪಾಶ್ಚಾತ್ಯ ಪತ್ತೇದಾರಿ ಸಿನಿಮಾಗಳ ನಡುವಿನ ಸಂಬಂಧ	೫೪
ಅಧ್ಯಾಯ–೮	
ಎನ್. ನರಸಿಂಹಯ್ಯ ಕಾದಂಬರಿಗಳಲ್ಲಿ ಬರುವ ಪತ್ತೇದಾರಿ ವಿಧಾನದಲ್ಲಿ ಬರುವ ಕೆಲವು ತಂತ್ರಗಳು	೫೮
ಅಧ್ಯಾಯ–೯	
ಉಪಸಂಹಾರ	೬೩
ಅಧ್ಯಾಯ–೧೦	
ಗ್ರಂಥಋಣ	೬೭

ಅಧ್ಯಾಯ-೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪ್ರತಿಯೊಂದು ಸಂಶೋಧನಾ ವಿಷಯವನ್ನು ವೈಜ್ಞಾನಿಕ ನೆಲೆಗಟ್ಟಿನ ಆಧಾರದ ಮೇಲೆ ವಿಶ್ಲೇಷಿಸಿದಾಗ ಕೆಲವು ಪ್ರಮುಖ ಅಂಶಗಳು ಮತ್ತು ವಿಷಯಗಳು ನಮಗೆ ಗೋಚರವಾಗುತ್ತವೆ. ಅಲ್ಲದೆ ಸಾಹಿತ್ಯದ ವಿವಿಧ ಆಯಾಮಗಳು ಅರಿವಾಗುತ್ತವೆ. ಸಾಹಿತ್ಯದ ಪೂರ್ವ ಹಿನ್ನೆಲೆಯಿಂದ ನಂತರ ಬದಲಾವಣೆಯಾದಂತೆ ಸಮಾಜದ ಹಾದು ಹೋದ ವ್ಯವಸ್ಥೆಯನ್ನು ತಿಳಿಯಬಹುದು. ಎಷ್ಟೋ ಸಾರಿ ನಮ್ಮ ಅರಿವಿಲ್ಲದೆ ಸಾಹಿತ್ಯದ ವಿಷಯಾಂಶಗಳು ಸಮಾಜದ ಸ್ತರಗಳ ನಡುವೆ ಬೆರೆತು ಹೋಗಿರುತ್ತವೆ. ಸಾಹಿತ್ಯ ಕೃತಿಗಳನ್ನು ರಚಿಸುವ ಕವಿಯ ಮನಃಸ್ಥಿತಿಯು ಹೇಗಾದರೂ ಇರಲಿ, ಉಳಿದಂತೆ ಅವನೊಬ್ಬ ಸಮಾಜ ಜೀವಿ. ವ್ಯಕ್ತಿ ಮತ್ತು ಸಮಾಜಗಳೆರಡೂ ಜೀವಂತ ವ್ಯವಸ್ಥೆಗಳಾದುದರಿಂದ ಅವುಗಳ ಪರಸ್ಪರ ಪ್ರಭಾವ ಬೀರದೆ ಇರಲಾರವು. ಉಪ್ಪುನೀರಿನ ನಡುವೆ ಬದುಕುವ ಮೀನಿಗೆ ನೀರಿನ ಉಪ್ಪುತನ ಒಂದು ಗಮನೀಯವಾದ ಸಂಗತಿಯೆನಿಸುವುದಿಲ್ಲ. ಹಾಗೆಯೇ ತಾನು ಅತ್ಯಂತ ಖಾಸಗಿ, ವೈಯಕ್ತಿಕ ಎಂದು ತಿಳಿದಿರುವ ಸತ್ಯಗಳೂ ಕೂಡಾ ತನ್ನ ಸಾಮಾಜಿಕ ಪರಿಸರದ ಫಲಿತಗಳೇ ಎಂಬುದನ್ನು ಕವಿಯು ಗ್ರಹಿಸದಿದ್ದರೂ ಅದು ಸತ್ಯವೇ. ಸಮಾಜದಲ್ಲಿ ನಡೆಯುವ ಏರಿಳಿತಗಳ ನೆಲೆಯೂ ಮಾನವನ ವೈಯಕ್ತಿಕತೆಯಲ್ಲಿ ಸೇರಿಕೊಂಡಿರುತ್ತದೆ. ಸಮಾಜವು ಎಲ್ಲೆಡೆ ಸುರಿಯುವ ಮಳೆಯಾದರೆ, ವೈಯಕ್ತಿಕತೆಯು ಬೀಜದ ಗುಣವನ್ನು ಅವಲಂಬಿಸಿ ಮೇಲೆ ಜಿಗಿಯುವ ಬೆಳೆ. ಆದ್ದರಿಂದ ಒಂದೇ ಪರಿಸರವು ಹಲವು ಕವಿಗಳಲ್ಲಿ ಅವರದೇ ಆದ ವಿಶಿಷ್ಟ ಅಭಿವ್ಯಕ್ತಿಯನ್ನು ಪ್ರೇರಿಸಬಹುದು.

ತನ್ನ ಕಾಲದ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಕವಿ ಮತ್ತು ಅವನ ತಕ್ಷಣದ ಪರಿಸರವು ತಳೆಯುವ ನಿಲುವು ಮೌಲಿಕವಾಗುತ್ತದೆ.

"ಸಾಹಿತ್ಯ (ಸಮಾಜ)ಜೀವನದ ಪ್ರತಿಬಿಂಬ"[೧] ಎಂದು ಹಡ್ಸನ್ ಕವಿ ಹೇಳಿರುವ ಮಾತು ಅಕ್ಷರ ಸಹ ಸತ್ಯವಾದುದು.

ನಮ್ಮ ಸಾಹಿತ್ಯ ಗ್ರಂಥಗಳನ್ನು ಅಭ್ಯಾಸ ಮಾಡಿದಾಗ ಅವು ರಚಿತವಾದ ಕಾಲದ ಜೀವನವನ್ನು ಒಳಗೊಂಡಿರುವುದು ಸಹಜವಾಗಿಯೇ ಅರಿವಾಗುವುದಲ್ಲದೆ, ಈ ಬದುಕು ಕಾಲಕಾಲಕ್ಕೆ ಮಾರ್ಪಾಡಾಗಿರುವುದನ್ನು ಗುರುತಿಸಬಹುದಾಗಿದೆ. ಅಂದಂದಿನ ಸಮಾಜ, ವ್ಯಕ್ತಿಯ

ಬದುಕು, ಅಂದಿನ ಮೌಲ್ಯ, ರಾಜಕೀಯ ಜೀವನ, ಪತ್ತೇಗಾರಿಕೆ ಹೀಗೆ ಹತ್ತು ಹಲವು ಅಂಶಗಳನ್ನೊಳಗೊಂಡಿರುವ ಸಾಹಿತ್ಯ ಜೀವನದ ಗತಿಯಲ್ಲಿಯ ಮಾರ್ಪಾಡುಗಳನ್ನು ಎತ್ತಿ ತೋರಿಸುತ್ತದೆ. "ಮಾನವ ಸಮಾಜದ ಸಂಸ್ಕೃತಿಯ ಬೆಳವಣಿಗೆಗಳನ್ನು ಕಾಣಬಹುದಾಗಿದೆ. ಅವನ ಬದುಕಿನ, ಭಾಷೆಯ, ಸಂಸ್ಕೃತಿಯ ವ್ಯತ್ಯಾಸಗಳನ್ನೆಲ್ಲಾ ಇಂಥ ಸಾಹಿತ್ಯದಿಂದ ಗುರುತಿಸಬಹುದಾಗಿದೆ" ಎಂದು ವಿವರಿಸಿದ ಡಾ॥ ಜಿ.ಎಸ್.ಶಿವರುದ್ರಪ್ಪನವರು "ಸಾಹಿತ್ಯವನ್ನು ಜೀವನ ಗತಿಬಿಂಬ"[೧] ಎಂದು ಗುರುತಿಸುತ್ತಾರೆ.

ಭಾರತೀಯ ಸಾಮಾಜಿಕ ಬದುಕನ್ನು ಅವಲೋಕಿಸಿದಾಗ ವೇದಗಳ ಕಾಲದಿಂದಲೂ ಮಾನವ ವಿವಿಧ ರೀತಿಯ ಗೂಢಚಾರ ಪದ್ಧತಿಯನ್ನು ಹೊಂದಿರುವುದು ತಿಳಿದು ಬರುತ್ತದೆ. ಇದಕ್ಕಿಂತಲೂ ಪ್ರಾಚೀನ ಅಂದರೆ ರಾಮಾಯಣ, ಮಹಾಭಾರತದ ಕಾಲದಲ್ಲಿ ಆಳ್ವಿಕೆ ನಡೆಸುತ್ತಿದ್ದ ರಾಜರು ತಮ್ಮ ಆಸ್ಥಾನದ ಒಂದು ಭಾಗವಾಗಿದ್ದ ಗೂಢಾಚಾರ ಪದ್ಧತಿ ಹೊಂದಿರುವುದು ತಿಳಿದು ಬರುತ್ತದೆ,

ಆ ಒಂದು ಅಧ್ಯಯನದ ವಿಷಯದ ಉದ್ದೇಶ ಪತ್ತೇದಾರಿ ಎನ್ನುವಂತಹ ವಿಚಾರ ಹೇಗೆ ಮಾನವನ ಬದುಕಿನೊಂದಿಗೆ ಸಮ್ಮಿಳಿತಗೊಂಡಿದೆಂಬುದಕ್ಕೆ ಅದು ಯಾರಿಗೂ ಕಾಣದ ಹಾಗೆ ನಡೆದುಕೊಂಡು ಬಂದಿದೆ. ಸಾಮಾನ್ಯನಿಗೆ ರಾಜನ ಗೂಢಾಚಾರ/ಪತ್ತೇದಾರಿಕೆಯ ವಿಚಾರದ ಅರಿವು ಇರುತ್ತಿರಲಿಲ್ಲ. ಇದು ಕೇವಲ ಕೆಲವು ವರ್ಗದವರಿಗೆ, ಗೊತ್ತಿತ್ತೆಂದು ಕೆಲವರು ಮಾತ್ರ ಭಾವಿಸಿದ್ದರು. ಆದರೆ ಇಂದೂ ಇದರ ವ್ಯವಸ್ಥೆ ಒಂದು ದೊಡ್ಡ ಸ್ವರೂಪವನ್ನೇ ಪಡೆದುಕೊಂಡಿದೆ.

ರಾವಣನಿಂದ ಅಪಹರಿಸಲ್ಪಟ್ಟ ಸೀತಾಮಾತೆಯನ್ನು ಹುಡುಕಲು ಸಮಸ್ತ ಕವಿ ವೀರರು ಸುಗ್ರೀವನಿಂದ ನೇಮಿಸಲ್ಪಟ್ಟರು. ಸಮುದ್ರವನ್ನು ಹಾರಿ ಲಂಕಾದ್ವೀಪವನ್ನು ಸೇರಿ ಸೀತಾ ದೇವಿಯೆಲ್ಲಿರುವಳೆಂದು, ಪತ್ತೆ ಮಾಡಿ ಹಿಡಿದ ಆಂಜನೇಯನ ಕಾರ್ಯವು ಒಂದು ರೀತಿ ಪತ್ತೆದಾರಿಯೆನಿಸಲಿಲ್ಲವೆ? ಹೀಗೆ ಇಂದು ಈ ವಿಚಾರವನ್ನು ಅಂದರೆ ಪತ್ತೆದಾರಿ ಎನ್ನುವ ಅಂಶ ಕಾದಂಬರಿಗಳಲ್ಲಿ ಹೇಗೆ ಬೆಳೆದು ಬಂದಿದೆ. ಅದರ ಹುಟ್ಟು, ವಿಚಾರ, ವಿಶ್ಲೇಷಣೆ ಮೊದಲಾದವುಗಳನ್ನು ಇಲ್ಲಿ ಅಧ್ಯಯನ ಮಾಡುತ್ತೇವೆ.

೧.೧ ಕಾದಂಬರಿಗಳಲ್ಲಿ ಕಂಡು ಬರುವ ಮೂಲಾಂಶಗಳು:

ಪತ್ತೇದಾರಿ ಕಾದಂಬರಿಗಳಲ್ಲಿ ಇರುವ ಪತ್ತೆ ಹಚ್ಚುವಿಕೆ ವಿಧಾನವು "ಪಾಶ್ಚಾತ್ಯ ವಿದ್ವಾಂಸರ ಪರಿಶ್ರಮದ ಫಲ" ಎಂದು ಹೇಳಬಹುದು. ಅಂದರೆ, ಮೊದಲಿಗೆ ಪತ್ತೇದಾರಿ ಕಾದಂಬರಿಗಳ ರಚನೆ ಪಾಶ್ಚಾತ್ಯರಿಂದ ಪ್ರಾರಂಭವಾಯಿತು. ಸಾಮಾನ್ಯವಾಗಿ ಈ ಕಾದಂಬರಿಗಳಲ್ಲಿ ಕಂಡು ಬರುವ ಮೂಲಾಂಶಗಳೆಂದರೆ, ಮಾನವನ ಸ್ವಭಾವದ ವಿಕೃತ ರೂಪ ಹೇಗೆಲ್ಲ ಸಮಾಜದಲ್ಲಿ ಬೆರಕೆಯಾಗಿದೆ. ಅವನ ಮನೋಅಭಿಲಾಷೆ ಹೆಚ್ಚಾದಾಗ, ಕಡಿಮೆಯಾದಾಗ, ನಡೆಯುವ ಘೋರ ಕೃತ್ಯಗಳನ್ನು ಸ್ವಭಾವ, ನಡವಳಿಕೆಗಳನ್ನು ಇಲ್ಲಿ ಅಧ್ಯಯನಿಸುತ್ತೇವೆ. ಮನುಷ್ಯನ ಮನಸ್ಸು ವಿಕೃತವಾದುದು. ಅದರ ಮೂಲ ನಿಯಂತ್ರಣವನ್ನು ಅರಿಯುವುದು ಅಸಾಧ್ಯದ ಮಾತು. ಸಮಾಜದಲ್ಲಿ ಇದರಿಂದ ಯಾವ ರೀತಿಯ ಪರಿಣಾಮ, ಪ್ರಭಾವ ಬೀರಿವೆ ಎಂಬುದನ್ನು ಅಧ್ಯಯನ ದೃಷ್ಟಿಯಿಂದ ಅಭ್ಯಸಿಸುತ್ತೇವೆ. ಮಾನವ ಶಾಸ್ತ್ರವನ್ನು (Antropology) ಅಧ್ಯಯನ ಮಾಡಿದರೆ ಅನಾದಿಕಾಲದಿಂದ ಇಂದಿನ ನಾಗರೀಕತೆಯ ಮಾನವನ ನಡವಳಿಕೆ ಹೇಗೆ ವ್ಯಕ್ತಗೊಂಡಿದೆಯೆಂಬುದನ್ನು, ವಿವಿಧ ಮಜಲುಗಳಲ್ಲಿ ಅಧ್ಯಯನ ಮಾಡುವಂತೆಯೆ, ಪತ್ತೇದಾರಿ ಕಾದಂಬರಿಗಳಲ್ಲಿ ಈ ವಿವಿಧ ಮಜಲುಗಳನ್ನು ಅಧ್ಯಯನಿಸುವ ಪ್ರಮುಖ ಮೂಲಾಂಶವಾಗಿದೆ.

೧.೨ ಪತ್ತೇದಾರಿ ಕಾದಂಬರಿ ಎಲ್ಲೆ ಹಾಗೂ ಸಮಕಾಲೀನತೆ

ಪತ್ತೇದಾರಿ ಕಾದಂಬರಿಗಳಲ್ಲಿ ಬರುವ ವಿಷಯ ವಸ್ತುವಿನ ಎಲ್ಲೆ ಮನುಷ್ಯ, ಸಮಾಜ, ಸಂಬಂಧಗಳ ನಡುವಿನ ವಿಚಾರವನ್ನು ಒಳಗೊಂಡಿರುತ್ತದೆ. ಭೂಮಿಯಲ್ಲಿರುವ ಪಂಚಭೂತಗಳು ಹೇಗೆ ಶಾಶ್ವತವಾಗಿರುತ್ತವೆಯೋ, ಹಾಗೆಯೇ ಸಾಹಿತ್ಯದ ಒಳಗಿನ ವಿಚಾರಗಳಲ್ಲಿ ಬರುವ ಪತ್ತೇದಾರಿ ವಿಷಯ ವಸ್ತುವಿನ ಎಲ್ಲೆ ವಿಶಾಲವಾದುದು. ಮನುಷ್ಯನು ಈ ಭೂಮಿಯ ಮೇಲೆ ಇರುವ ತನಕ ಈ ವಿಚಾರಗಳೂ ಇರುತ್ತವೆ. ಮಾನವನ ನಡವಳಿಕೆಯ ಜೊತೆ-ಜೊತೆಯಲ್ಲಿಯೇ ಅವನ ಸ್ವಭಾವ ಸಿದ್ಧದಿಂದುಂಟಾದ ತಪ್ಪುಗಳನ್ನು ಹುಡುಕುವುದೇ ಒಂದು ಕಾಯಕವಾಗುತ್ತದೆ.

ಅಜ್ಞಾತವಾಸದಲ್ಲಿದ್ದ ಪಾಂಡವರನ್ನು ಹುಡುಕಲು ದುರ್ಯೋಧನನು ಐನೂರು ಜನ ಮಲ್ಲರ ಸಹಿತ ಜೀಮೂತವಾಹನನ್ನು ಕಳುಹಿಸಲು ಯಾರನ್ನು ಪತ್ತೆ ಮಾಡುವುದಕ್ಕಾಗಿ ಹೊರಬಿದ್ದರೋ, ಅವನಿಂದಲೇ ಅವರೆಲ್ಲ ಹತರಾದರು. ರಾವಣನ ಕಳ್ಳತನವನ್ನು ಆಂಜನೇಯನು ಪತ್ತೆಮಾಡಿ ಹಿಡಿದ. ತಲೆಮರೆಯಿಸಿಕೊಂಡು ವೇಷಾಂತರದಿಂದಿದ್ದ ಭೀಮ(ವಲಲ)ನಿಂದ ಮಲ್ಲರ ಸಂಗಡ ಜೀಮೂತವಾಹನನು ಹತನಾದ. ಈ ವಿಷಯಗಳಿಂದ

ಪ್ರಾರಂಭವಾಗಿ ಇಂದಿನ ನಾಗರೀಕತೆಯ ಮನುಷ್ಯನ ಲಲಾಸೆಯ ಕೃತ್ಯಗಳ ತನಕ ವಿಷಯ ವಸ್ತುವಿನ ಮಜಲು ವ್ಯಾಪಿಸಿಕೊಂಡಿದೆ. ಈಗಿನ ಸಮಾಜದಲ್ಲಿ ನಡೆಯುವ ಅಪರಾಧ ಕೃತ್ಯ, ಸೂಕ್ಷ್ಮ ವ್ಯವಹಾರಗಳ ಕೃತ್ಯ, ಮಾನವೀಯ ಸಂಬಂಧ ಇವೆಲ್ಲ ವಿಚಾರಗಳನ್ನು ಅಧ್ಯಯನ ಮಾಡುತ್ತೇವೆ. ಕೇವಲ ಕಾದಂಬರಿಕಾರನ ಮಾನಸಿಕ ಸ್ಥಿತಿಗತಿಯನ್ನು ಮಾತ್ರ ಅಧ್ಯಯನಿಸುವುದಲ್ಲ, ಎಲ್ಲಾ ರೀತಿಯಿಂದಲೂ ವಿಚಾರವನ್ನು ತಾಳೆ ಮಾಡಿ ಪರೀಕ್ಷಿಸುತ್ತೇವೆ.

ಎನ್.ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿಗಳ ಅಧ್ಯಯನದ ವಿಷಯವ್ಯಾಪ್ತಿ ವಿಶಾಲವಾಗಿದ್ದರೂ, ಅದರ ಸಾರವನ್ನು ಈ ಸಂಶೋಧನಾ ವಿಷಯದಲ್ಲಿ ಅಧ್ಯಯನಿಸಲಾಗಿದೆ. ಅಲ್ಲದೆ ಸಾಹಿತ್ಯವಾಗಿ ಕಂಡು ಬರುವ ಮೂಲಾಂಶಗಳನ್ನು ವಿಶ್ಲೇಷಿಸಿ ತಿಳಿಸಲಾಗಿದೆ. ಎಷ್ಟೋ ವಿಚಾರಗಳು ಕೆಲವು ಬಾರಿ ಒಂದೇ ರೀತಿಯಲ್ಲಿ ಕಂಡಬಂದರೂ, ಅದರ ಒಳಸಾರವನ್ನು ಕಾದಂಬರಿಗಳಲ್ಲಿ ಒಳಹೊಕ್ಕಿ ನೋಡಿದಾಗ, ಅದರ ತುಲನಾತ್ಮಕ ವಿಶ್ಲೇಷಣೆ ಅನಾವರಣ ಗೊಳ್ಳುತ್ತದೆ. ಅದೇ ರೀತಿ ಈ ಸಂಶೋಧನಾ ವಿಷಯದಲ್ಲಿ ನಾವು ತಿಳಿಯಬಹುದು. ಅಲ್ಲದೆ ಈ ವಿಷಯದ ಜೊತೆಗೆ ಪಾಶ್ಚಾತ್ಯ ಸಾಹಿತ್ಯದ ಸಮ್ಮಿಳಿತ ಪತ್ತೇದಾರಿ ಕಾದಂಬರಿಗಳಲ್ಲಿ ಹೇಗೆ ಪ್ರಭಾವ ಬೀರಿದೆ. ಪಾಶ್ಚಾತ್ಯ ಸಿನಿಮಾ ಮತ್ತು ಪಾಶ್ಚಾತ್ಯ ಪತ್ತೇದಾರಿ ಕಾದಂಬರಿ ನಡುವಿನ ಸಂಬಂಧದಿಂದ ಕಲೆ ಹಾಕಿರುವ ಮಾಹಿತಿ ಒಂದು ವಿಷಯ ಮತ್ತೊಂದು ವಿಷಯದೊಂದಿಗೆ ಬೆಳೆದುಕೊಂಡಿರುವುದನ್ನು ಇಲ್ಲಿ ಪತ್ತೇ ಹಚ್ಚಬಹುದಾಗಿದೆ.

ಆಧುನಿಕ ಮಾನವ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆದ ನಿಗೂಢ ಕೃತ್ಯಗಳನ್ನು ಪತ್ತೇದಾರಿಕೆಯಿಂದ ಅನೇಕ ವೀರರು ಭೇದಿಸಿ ಸಾಫಲ್ಯತೆಯನ್ನು ಪಡೆದುಕೊಂಡ ರೀತಿಯ ಬಗ್ಗೆ ಕೂಲಂಕಷವಾಗಿ ಅಧ್ಯಯನಿಸಿ ತಿಳಿದುಕೊಳ್ಳುವುದು ಪ್ರಮುಖವಾದ ಜವಾಬ್ದಾರಿಯಾಗಿದೆ.

೧.೩ ಅಧ್ಯಯನದ ದೃಷ್ಟಿಯಿಂದ ಅರಿವು ಮತ್ತು ಜಾಗೃತಿ

"ಎಲ್ಲಿಯವರೆಗೆ ಮೋಸ ಹೋಗುವವನು ಇರುತ್ತಾನೆಯೋ ಅಲ್ಲಿಯವರೆಗೆ ಮೋಸ ಮಾಡುವವನು ಇರುತ್ತಾನೆ" ಎನ್ನುವ ಮಾತು ಅಕ್ಷರಸಹ ಸತ್ಯವಾದುದು. ಈ ಅಧ್ಯಯನದಲ್ಲಿ ತಿಳಿದುಕೊಳ್ಳುವ ಪ್ರಮುಖ ವಿಚಾರ ಸಾಮಾನ್ಯ ಪ್ರಜ್ಞೆ, ಕೆಲವು ಬಾರಿ ಮನುಷ್ಯ ಈ ಜ್ಞಾನದ ತಿಳುವಳಿಕೆ ಸರಿಯಾಗಿ ಇಲ್ಲದ ಕಾರಣ ಅನಾಹುತಗಳು ಸಾಯುವ ತನಕ ತಿಂದು ತೇಗಿದಂತೆ, ಅವನನ್ನು ಕಮರಿ ಹಾಕುತ್ತವೆ. ಈ ಕಾದಂಬರಿಗಳ ಅಧ್ಯಯನ ಉದ್ದೇಶ ಜನರಲ್ಲಿ ಸಾಮಾನ್ಯ

ತಿಳುವಳಿಕೆ ಮತ್ತು ನಡೆಯುವ ಘಟನಾವಳಿಗಳ ಜಾಗೃತಿಯನ್ನು ತಿಳಿಸುವುದು. ಅಧ್ಯಯನ ವಿಷಯ ವಸ್ತುವಿನಲ್ಲಿ ಸಾಮಾನ್ಯ ಜನರಿಗೆ ಕೆಲವರು ನಡೆಸುವ ದೌರ್ಜನ್ಯವನ್ನು ಇಲ್ಲಿ ಮನದಟ್ಟು ಮಾಡಲಾಗುವುದು. ಅಲ್ಲದೆ ಕೊನೆಯ ಅಧ್ಯಾಯದಲ್ಲಿ ಪತ್ತೇದಾರಿಯ ವಿಧಾನದ ಕೆಲವು ತಂತ್ರಗಳ ಬಗ್ಗೆ ಹೇಳಹೊರಟಿದ್ದೇನೆ. ಆದ್ದರಿಂದ ಈ ಅಧ್ಯಯನ ಅರಿವು ಮತ್ತು ಜಾಗೃತಿ ಸಮಾಜದ ಪ್ರತಿಯೊಬ್ಬನು ಅರಿತಾಗ ಅವನ ಮುಂದಿನ ದಾರಿಯಲ್ಲಿ ಎದುರಾಗುವ ಎಡರು-ತೊಡರುಗಳನ್ನು ಅರಿತು ನಡೆಯಬಹುದಾಗಿದೆ. ಅಲ್ಲದೆ ಈ ಜ್ಞಾನ ಅತ್ಯಂತ ಮೌಲಿಕವಾದುದಾಗಿದೆ. ಇವರ ಎಲ್ಲಾ ಕಾದಂಬರಿಗಳಲ್ಲಿ ನಡೆಯುವ ಸಾಮಾನ್ಯವಾಗಿರುವ ಪ್ರತಿಯೊಂದು ಮಾಹಿತಿಗಳನ್ನು ಕೆಳಗಿನ ಅಧ್ಯಾಯದಲ್ಲಿ ತಿಳಿಸಿದ್ದೇನೆ. "ಅರಿತವರ ಗತಿ ಸುಲಭ ಹರಿಯ ಪೂಜೆ"[೧] ಕನಕದಾಸರು ಹೇಳಿರುವಂತೆಯೇ ಕಾದಂಬರಿಯಲ್ಲಿರುವ ವಿಷಯಗಳನ್ನು ಚೆನ್ನಾಗಿ ಮನದಟ್ಟು ಮಾಡಿಕೊಂಡರೆ ಮನುಷ್ಯ ಕೆಲವು ತಪ್ಪು ನಡವಳಿಕೆಯನ್ನು ವಿಶ್ಲೇಷಣಾತ್ಮಕವಾಗಿ ತಿಳಿದುಕೊಳ್ಳುವುದು ಸುಲಭವಾಗುತ್ತದೆ. ಕಾದಂಬರಿಕಾರನು ಸಾಧ್ಯವಾದಷ್ಟು ಸಮಾಜದಲ್ಲಿ ನಡೆದ ವಿಚಾರಗಳನ್ನೇ ತಿಳಿಸ ಹೊರಟಿದ್ದಾರೆ. ಕೆಲವು ಬಾರಿ ನಡೆಯದ ಘಟನೆಗಳು ತಿಳಿಯದೆ ನಡೆದು ಹೋಗುವುದು ಮನುಷ್ಯನ ಮಾನಸಿಕಗೊಂದಲ, ಕ್ರೂರತೆ ಎಲ್ಲವು ನೇರವಾಗಿ ಪರಿಣಾಮ ಬೀರುತ್ತವೆ.

ಸಾಹಿತ್ಯ ರಂಗಭೂಮಿಯಲ್ಲಿ ನರ್ತನ ಮಾಡುತ್ತಿರುವ ಸಾಹಿತಿಗಳಲ್ಲಿವರು ಪತ್ತೇದಾರಿಯಲ್ಲೇನಿದೆ? ಪತ್ತೆಯೊಂದು ಕಡೆ, ದಾರಿಯೊಂದು ಕಡೆ ಎಂದು ಹೇಳಿರುವರಲ್ಲದೆ, ಸಾಮಾಜಿಕ ಕಾದಂಬರಿಗಳು ಉತ್ತಮ ಮಟ್ಟದ ಕಾದಂಬರಿಗಳೆಂತಲೂ, ಅವುಗಳ ರಚನೆಯು ಬಹಳ ಕಷ್ಟ ಸಾಧ್ಯವೆಂತಲೂ, ಪತ್ತೇದಾರಿ ಕಾದಂಬರಿಗಳು ನೀಚ ರೀತಿಯ ಕಾದಂಬರಿಗಳೆಂತಲೂ, ಅವುಗಳನ್ನು ಸೃಷ್ಟಿಸುವುದು ಬಹುಸುಲಭವೆಂತಲೂ ಅಭಿಪ್ರಾಯಪಡಲು ಸಾಕಾದಷ್ಟು ಭಾವನಾಪೂರ್ಣ ವಿಚಾರಗಳು ಬಂದಿವೆ. ಬರುತಲ್ಲೂ ಇವೆ.

ಸಾಮಾಜಿಕ, ಪತ್ತೇದಾರಿ ಕಥೆಗಳ ರಚನೆಯ ವಿಚಾರವಾಗಿ ವಿಮರ್ಶಿಸಿ ನೋಡುವುದಾದರೆ ಪತ್ತೇದಾರಿ ಕಥಾ ರಚನೆಯ ಸಾಮಾಜಿಕ ಕಾದಂಬರಿಗಳ ಕಥಾ ರಚನೆಗಿಂತಲೂ ತೊಡಕೆಂದೇ ಹೇಳಬಹುದು.

ಸಾಮಾಜಿಕ ಕಾದಂಬರಿಗಳನ್ನು ಬರೆಯಲು ಯಾವುದಾದರೊಂದು ಸಾಮಾನ್ಯ ಸಂಸಾರದ ಆಗುಹೋಗುಗಳನ್ನು ನೋಡಿಯೋ ಅಥವಾ ಕೇಳಿಯೋ ಆ ನೈಜ ಕಥೆಗೆ ವಿವಿಧ

೧. ಜನಪ್ರಿಯ ಕನಕ ಸಂಪುಟ, ಕನ್ನಡ ಸಂಸ್ಕೃತಿ ನಿರ್ದೇಶನಾಲಯ ಪುಟ ೩೪

ರೂಪಾಂತರಗಳನ್ನು ಕೊಟ್ಟು ಹೃದಯಂಗಮವಾಗುವಂತೆ ಅಳವಡಿಸಿ ಬರೆದರೆ ಆ ಕಾದಂಬರಿಯು ಓದುಗರ ಏಕೆ ಸರ್ವರ ಆದರಣೆಯನ್ನು ಪಡೆಯುತ್ತದೆ. ಸಾಂಸಾರಿಕ ಕಷ್ಟ ಸುಖಗಳಲ್ಲಿ ಈಜಾಡುತ್ತಿರುವ ಪ್ರಪಂಚಕ್ಕೆ ಅಂತಹ ಕಾದಂಬರಿಗಳು ಮಾರ್ಗದರ್ಶಕ ಮಾಣಿಕ್ಯಗಳೆಂದು ಭಾವಿಸಲು ಅವಕಾಶವಾಗುತ್ತದೆ. ಅದರೊಂದು ಮಾತು ಸಾಮಾಜಿಕ ಕಥೆಗಳಿಗೆ ರಚನೆಗಾರರ ಸಮಯೋಚಿತ ಅನುಕರಣೆಯ ಬುದ್ಧಿ ಕುಶಲತೆಯೇ ವಿಶೇಷತೆಯೆಂದರೆ ತಪ್ಪಾಗದು. ಕಥೆಯನ್ನು ಯಾವ ಮಾರ್ಗದಲ್ಲಿ ಬೇಕಾದರೂ ಕೊಂಡೊಯ್ಯಬಹುದು. ಹೇಗೆ ಬೇಕಾದರೂ ಬೆಳೆಯಿಸಬಹುದು. ಎಲ್ಲಿ ಬೇಕೆಂದರಲ್ಲಿ ಮೊಟಕು ಮಾಡಬಹುದು. ಬೇಕಾದೆಡೆ ಶೃಂಗಾರ ಲೀಲೆಗಳನ್ನು ತುಂಬಿ ಕಣ್ಮನಗಳಿಗೆ ಆನಂದವುಂಟು ಮಾಡಬಹುದು. ಬೇಕಾದ ಹೊಸ ಪಾತ್ರಗಳನ್ನು ತುಂಬಿ ಕಥೆ ಬೆಳೆಯಿಸಬಹುದು. ತಾವು ಅನುಭವಿಸಿದ್ದರೆ ಆ ಕ್ರೀಡಾ ವಿನೋದಗಳನ್ನು ಕಣ್ಣಿಗೆ ಕಟ್ಟುವಂತೆ ರಸವತ್ತಾಗಿ ವರ್ಣಿಸಬಹುದು.

ಆದರೆ ಪತ್ತೇದಾರಿ ಕಾದಂಬರಿಗಳ ವಿಚಾರವೇ ಬೇರೆ, ಸರಿಯಾದ ರೀತಿಯಲ್ಲಿ ಪತ್ತೇದಾರಿ ಕಥೆಗಳನ್ನು ಬರೆಯಬೇಕಾದರೆ ಅವುಗಳ ಬರಹಗಾರರು ನಾನಾ ವಿಷಯಗಳ ಬಗ್ಗೆ ಅಲ್ಪ-ಸ್ವಲ್ಪ ಮಾಹಿತಿಯನ್ನಾದರೂ ಪಡೆದವರಾಗಿರಬೇಕು. ಒಂದು ಕಡೆಧರ್ಮ, ಮತ್ತೊಂದು ಕಡೆ ಮರ್ಮ, ಮಗುದೊಂದು ಕಡೆ ಪರಿಶೀಲಿಸಿ ನೋಡುವುದಾದರೆ ಕಾನೂನು ಕಟ್ಟಳೆಗಳ ವ್ಯವಹಾರ, ಈ ಅಂಶಗಳೆಲ್ಲವನ್ನೂ ಅಳವಡಿಸಿ ಬರೆಯಬೇಕಾಗುವುದು.

ಕಳ್ಳ, ಕೊಲೆಗಾರರನ್ನು ಹೇಗೆ ಹಿಡಿಯಬೇಕೆಂಬ ಯೋಚನೆಯಲ್ಲಿ ಪತ್ತೇದಾರನು ಕುಳಿತಾಗ, ಅಪರಾಧಿಗಳಾದವರ ಹತ್ತಿರವೇ ಕುಳಿತು ತಮ್ಮ ಕೃತ್ಯದ ವಿಷಯವಾಗಿ ಮಾತನಾಡುವುದು, ಆ ಮಾತುಗಳನ್ನು ಕೇಳಿಸಿಕೊಂಡ ಪತ್ತೇದಾರನು ಅವರಿಗೆ ತಿಳಿಯದಂತೆ ಅವರನ್ನು ಹಿಂಬಾಲಿಸಿ, ಅವರ ವ್ಯವಹಾರವನ್ನು ನೋಡಿ ಆ ಮೇಲೆ ಅವರನ್ನು ಸೆರೆ ಹಿಡಿಯುವುದು.

ಹೀಗೆ ಅನೇಕ ರೀತಿಯ ವ್ಯವಸ್ಥಿತ ಮಾರ್ಗದಲ್ಲಿ ಪತ್ತೇದಾರಿ ಕಾದಂಬರಿಯು ಸಾಗುತ್ತದೆ. ಪಾಶ್ಚಾತ್ಯ ದೇಶಗಳಲ್ಲಿ ಪತ್ತೇದಾರಿ ಕಾದಂಬರಿಗಳಿಗೆ ಸಿಗುವ ಮನ್ನಣೆ ಕನ್ನಡ ಭಾಷೆಯಲ್ಲಿ ಸಿಗುತ್ತಿಲ್ಲ. ಅಲ್ಲದೆ ಪತ್ತೇದಾರಿ ಕಾದಂಬರಿಗಳೆಂದರೆ ಕೆಲವು ಜನ ಸಾಮಾನ್ಯರು ನೋಡುವ ದೃಷ್ಟಿಕೋನವೇ ಬೇರೆಯಾಗಿರುತ್ತದೆ. ಅಲ್ಲದೆ ಅಶ್ಲೀಲತೆಯ ಬಣ್ಣವನ್ನು ಬಳೆಯುತ್ತಾರೆ. ಪತ್ತೇದಾರಿ ಕಾದಂಬರಿಗಳನ್ನು ಹೊಗಳಬೇಕು. ತೆಗಳಲೇಬಾರದೆಂಬ ಉದ್ದೇಶದಿಂದ ನಾನು ಈ ರೀತಿ ಹೇಳಿಲ್ಲ. ಒಬ್ಬರಿನ್ನೊಬ್ಬರನ್ನು ಹೊಗಳುವುದು, ತೆಗಳುವುದು ಸ್ವಾಭಾವಿಕವೇ. ವಶಿಷ್ಠ,

ವಿಶ್ವಾಮಿತ್ರರಿಗೆ ವಾಗ್ವಾದ ನಡೆಯದೆ ಹೋಗಿದ್ದರೆ ಹರಿಶ್ಚಂದ್ರನು ಸತ್ಯವಾಕ್ಯ ದುರಂಧರನೆಂದು ಪ್ರಜಾಕೋಟಿಗೆ ತಿಳಿಯುತ್ತಿರಲಿಲ್ಲ. ರಾವಣನಿಲ್ಲದೆ ಹೋಗಿದ್ದರೆ ರಾಮಾಯಣವೇ ನಡೆಯುತ್ತಿರಲಿಲ್ಲ. ದುರ್ಯೋಧನನಿದ್ದುದರಿಂದ ಧರ್ಮರಾಯನ ಧರ್ಮವು ಜಗತ್ತಿಗೆ ತಿಳಿಯಿತು. ಹಾಗೆ ಪತ್ತೇದಾರಿಯನ್ನು ತೆಗಳಿದಷ್ಟೂ, ಕಥೆಗಳು ಉತ್ತಮವಾಗುವುದಲ್ಲದೆ, ಖ್ಯಾತಿ ಶಿಖರಕ್ಕೇರುವುದರಲ್ಲಿ ಸಂದೇಹವಿಲ್ಲ. ಈ ಕಾದಂಬರಿಗಳಿಂದ ಜನ ಸಾಮಾನ್ಯರಿಗೆ ತಿಳಿಸುವ ಸಾಮಾನ್ಯ ಪ್ರಜ್ಞೆಯ ಅರಿವಲ್ಲದೆ ಇತರ ಮನುಷ್ಯನ ತಪ್ಪನ್ನು ಎಚ್ಚರಿಸುವ ರೀತಿ ತುಂಬಾ ಸೊಗಸಾಗಿ ಮೂಡಿ ಬಂದು ಸಹೃದಯರಿಗೆಲ್ಲ ಜಾಗೃತಿ ಘಂಟೆಯನ್ನು ತಟ್ಟುತ್ತದೆ.

ಅಧ್ಯಾಯ-೨

ಪತ್ತೇದಾರಿ ಕಾದಂಬರಿ ಪ್ರಕಾರ ಬೆಳೆದು ಬಂದ ದಾರಿ

ಕನ್ನಡ ಸಾಹಿತ್ಯದಲ್ಲಿ ಕಾದಂಬರಿ ಪ್ರಕಾರ ಹತ್ತೊಂಭತ್ತನೇ ಶತಮಾನದಲ್ಲಿ ರೂಪ ತಳೆಯಿತು. ಮೊಟ್ಟಮೊದಲು ಪ್ರಕಟವಾದ ಆಧುನಿಕ ಸ್ವರೂಪ ಲಕ್ಷಣಗಳ ಕಾದಂಬರಿಯು ಬಿ. ವೆಂಕಟಚಾರ್ಯರು ಬಂಗಾಳಿಯಿಂದ ಅನುವಾದಿಸಿದ 'ದುರ್ಗೇಶ ನಂದಿನಿ'[೧]ಯಾಗಿದೆ. ನಂತರ ಗುಲ್ವಾಡಿ ವೆಂಕಟಾಚಾರ್ಯರು, ಕೆರೂರು, ವಾಸುದೇವಚಾರ್ಯರು, ಎಮ್.ಎಸ್.ಪುಟ್ಟಣ್ಣ, ಮೊದಲಾದವರು ಕನ್ನಡದಲ್ಲಿ ಸ್ವತಂತ್ರ ಕಾದಂಬರಿಗಳನ್ನು ರಚಿಸಿದರು. ಕನ್ನಡ ಕಾದಂಬರಿಯು ಸ್ವತಂತ್ರ ಅಸ್ತಿತ್ವ ಪಡೆಯುವಷ್ಟು ಹಿರಿಮೆ-ಗರಿಮೆಗಳನ್ನು ಪಡೆದು ರಚನೆಗೊಂಡಿದ್ದು. ಎರಡನೆಯ ಘಟ್ಟದಲ್ಲಿ ಶಿವರಾಮಕಾರಂತರು, ಶ್ರೀರಂಗ, ರಂ.ಶ್ರೀ.ಮುಗುಳಿ, ಗೋಕಾಕ್, ಕುವೆಂಪು ಮೊದಲಾದವರು ಜೀವಂತ ಜಗತ್ತನ್ನು ಚಿತ್ರಿಸುವ ಘಟ್ಟಿಯಾದ ಅನುಭವವುಳ್ಳ ಕಾದಂಬರಿಗಳನ್ನು ರಚಿಸಿ ಕಾದಂಬರಿ ಯುಗವನ್ನೇ ನಿರ್ಮಿಸಿದರು. ನಂತರ ಪ್ರಗತಿಶೀಲಘಟ್ಟದಲ್ಲಿ ಅ.ನ.ಕೃ, ತರಾಸು, ಕಟ್ಟಿಮನಿ, ನಿರಂಜನ, ಚದುರಂಗ ಮೊದಲಾದ ದಿಗ್ಗಜರು ಸಾಮಾಜಿಕ ಕಾದಂಬರಿಗಳನ್ನು ರಚಿಸಿದರು.

೨.೧ ಪತ್ತೇದಾರಿ ಕಾದಂಬರಿ ಪದದ ಹುಟ್ಟು :

೧೯ನೇ ಶತಮಾನದಲ್ಲಿ ಅನೇಕ ಸಾಹಿತ್ಯದ ಕಾದಂಬರಿಗಳು ಹೆಚ್ಚು ಪ್ರಚಾರಕ್ಕೆ ಬಂದವು. ಆಗಿನ ಕಾದಂಬರಿಗಳಲ್ಲಿ ಐತಿಹಾಸಿಕ, ಪೌರಾಣಿಕ, ಸಾಮಾಜಿಕ ಹಾಗೂ ಪತ್ತೇದಾರಿ ಮುಂತಾದ ಹಲವು ಬಗೆಯ ಕಾದಂಬರಿ ಪ್ರಕಾರಗಳು ಕಾಣಿಸಿಕೊಂಡವು. ಪತ್ತೇದಾರಿ ಪದದ ಅರ್ಥವೆಂದರೆ, 'ಹುಡುಕುವಿಕೆ' ಎಂಬರ್ಥ. ಪಾಶ್ಚಾತ್ಯ ಲೇಖಕರ ಪ್ರಭಾವದಿಂದ ಕನ್ನಡದಲ್ಲಿ ಮೊತ್ತ ಮೊದಲಿಗೆ ಪತ್ತೇದಾರಿ ಕಾದಂಬರಿಯನ್ನು ರಚಿಸಿದವರು ಎಂ. ವೆಂಕಟಕೃಷ್ಣಯ್ಯನವರು. ಇವರ ಕೃತಿ 'ಚೋರ ಗ್ರಹಣ ತಂತ್ರ.' ಇದು ಚೋರ/ಕಳ್ಳತನವನ್ನು ಪತ್ತೇಹಚ್ಚುವಿಕೆಯ ಬಗ್ಗೆ ತಿಳಿಸುವ ಕೃತಿಯಾಗಿದೆ. ಇವರ ನಂತರ ಬಂದ ಪತ್ತೇದಾರಿ ಕಾದಂಬರಿಕಾರರೆಂದರೆ. ಬಿ.ಕೆ. ಸುಂದರರಾಜ್, ಎಂ.ರಾಮಮೂರ್ತಿ, ಪುಲಿಕೇಶಿ, ಬಿ.ವೆಂಕಟೇಶ್, ಎನ್.ಗುಂಡಾಶಾಸ್ತ್ರಿ, ಟಿ.ಕೆ.ರಾಮರಾವ್ ಮೊದಲಾದವರು. ಇವರೆಲ್ಲರ ಪತ್ತೇದಾರಿ ಕಾದಂಬರಿಕಾರರಲ್ಲಿ ಮಹಾ ಮೇರುವಿನಂತೆ ತನ್ನದೇ ಆದ ಛಾಪು ಮೂಡಿಸಿರುವ ಪತ್ತೇದಾರಿ ಕಾದಂಬರಿಕಾರರೆಂದರೆ ಎನ್.ನರಸಿಂಹಯ್ಯನವರು. ೧೯೬೦-೭೦ ದಶಕದಲ್ಲಿ ಇವರ ಕಾದಂಬರಿಗಳೆಂದರೆ ಹೆಚ್ಚು

ಇಷ್ಟಪಡುವ ಜನರಿದ್ದರು. ಅಲ್ಲದೆ ಹೆಚ್ಚು ಅಭಿಮಾನಿಗಳನ್ನು ಹೊಂದಿರುವುದಲ್ಲದೆ, ಆ ಸಂದರ್ಭದಲ್ಲಿ ಹೆಚ್ಚು ಸಾಹಿತ್ಯ ಅಭಿಮಾನಿಗಳನ್ನು ಹುಟ್ಟುಹಾಕಿದರು. ಇವರು ಸುಮಾರು ೫೫೦ಕ್ಕೂ ಹೆಚ್ಚು ಕಾದಂಬರಿಗಳನ್ನು ರಚಿಸಿ 'ಪತ್ತೇದಾರಿ ಪುರುಷೋತ್ತಮ'ನೆಂದೇ ಪ್ರಸಿದ್ಧಿಯನ್ನು ಪಡೆದಿದ್ದಾರೆ.

೨.೨ ಪ್ರಾಚೀನ ಕಾಲದಲ್ಲಿ ಪತ್ತೇದಾರಿ ಇದ್ದ ರೀತಿ

ಭಾರತ ದೇಶದಲ್ಲೇ ಅತ್ಯಂತ ಪ್ರಾಚೀನ ನಾಗರೀಕತೆಯಾದ ಸಿಂಧೂ ಬಯಲಿನ ನಾಗರೀಕತೆಯನ್ನು ಒಳಹೊಕ್ಕಿ ನೋಡಿದರೆ ಪತ್ತೇದಾರಿಕೆಯ ವಿಚಾರದ ಬಗ್ಗೆ/ಪತ್ತೇದಾರಿಕೆಯ ಬಗ್ಗೆ/ಪತ್ತೇದಾರಿ ಸಾಹಿತ್ಯದ ಬಗ್ಗೆ ಯಾವುದೇ ರೀತಿಯ ಮಾಹಿತಿ ಲಭ್ಯ ಕಂಡು ಬರುವುದಿಲ್ಲ. ನಂತರ ಬರುವ ಗ್ರೀಕ್, ರೋಮನ್, ಮೆಸಪಟೋಮಿಯಾದ ನಾಗರೀಕತೆಯಲ್ಲಿ ಕಾನೂನು ರೀತ್ಯದ ವ್ಯವಸ್ಥೆ ಇತ್ತು. ಆದರೆ ಇಲ್ಲಿಯೂ ಪತ್ತೇದಾರಿಕೆಯ ಬಗ್ಗೆ ನಿರ್ದಿಷ್ಟ ವ್ಯವಸ್ಥೆ ಇತ್ತು. ಆದರೆ ಇಲ್ಲಿಯೂ ಪತ್ತೇದಾರಿಕೆಯ ಬಗ್ಗೆ, ನಿರ್ಧಿಷ್ಟ ಸ್ವರೂಪ ಇರಲಿಲ್ಲ. ಗೂಢಾಚಾರ ವ್ಯವಸ್ಥೆ ಇದ್ದುದಾಗಿದೆ ಇತಿಹಾಸದಲ್ಲಿ ತಿಳಿದು ಬರುತ್ತದೆ. ಮೌರ್ಯಸಾಮ್ರಾಜ್ಯದಲ್ಲಿಯೂ ಗೂಢಾಚಾರ ವ್ಯವಸ್ಥೆಯು ಇತ್ತು. ಭಾರತ ದೇಶದಲ್ಲಿ ಆಳ್ವಿಕೆ ಮಾಡಿದ ಎಲ್ಲಾ ರಾಜಮನೆತನಗಳಲ್ಲಿಯೂ ಗೂಢಾಚಾರ ವ್ಯವಸ್ಥೆಯ ರೂಪವಿತ್ತೇ ಹೊರತು, ಯಾವುದೇ ರೀತಿಯಾದ ಪತ್ತೇದಾರಿ ಎಂಬ ಹೆಸರಿನಿಂದ ಕೂಡಾ ವಿಧಾನವಿರಲಿಲ್ಲ. ಇದೂ ಗೂಢಾಚಾರ ಪದ್ಧತಿಯ ವ್ಯವಸ್ಥೆಯಲ್ಲಿ ಜಾರಿಯಲ್ಲಿತ್ತು. ಅಲ್ಲದೆ ಇದನ್ನು 'ಗುಪ್ತದಳ' ಎಂದೂ ಮತ್ತೊಂದು ಹೆಸರಿನಿಂದ ಕರೆಯುತ್ತಿದ್ದರು.

೨.೩ ಸ್ವತಂತ್ರಪೂರ್ವ ಮತ್ತು ಸ್ವತಂತ್ರ ನಂತರ ಪತ್ತೇದಾರಿ ಕಾದಂಬರಿ ಬೆಳೆದು ಬಂದ ದಾರಿ.

ರಾಜಮನೆತನಗಳ ಆಳ್ವಿಕೆಯ ಕಾಲದಲ್ಲಿ ಇದ್ದ ಕಾನೂನು ಜಾರಿಗೆ ಗೂಢಾಚಾರ ವ್ಯವಸ್ಥೆ, ವಿಧಾನವನ್ನು ಅಳವಡಿಸಿಕೊಂಡಿದ್ದರೂ ಆ ಕುರಿತು ಯಾವುದೇ ಸಾಹಿತ್ಯ ಕೃತಿಗಳಲ್ಲಿ ಲಭ್ಯವಿರಲಿಲ್ಲ. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಪೋಲೀಸ್ ವ್ಯವಸ್ಥೆಯು ಪತ್ತೇದಾರಿಕೆ ವಿಧಾನವನ್ನು ಹೊಂದಿ ಜವಾಬ್ದಾರಿ ಆಡಳಿತ ನಿರ್ವಹಿಸುತ್ತಿದ್ದರು. ಪಾಶ್ಚಾತ್ಯ ದೇಶದಿಂದ ಮೊದಲ ಬಾರಿಗೆ ಪತ್ತೇದಾರಿ ಕಾದಂಬರಿಗಳ ಹುಟ್ಟು ಕಾಣಿಸಿಕೊಂಡಿತ್ತು. ಅದರಲ್ಲಿಯೂ ಬ್ರಿಟನ್ ದೇಶದ 'ಎಡ್ಗರ್ ಅಲೆನ್ ಪೂ' 'ಪತ್ತೇದಾರಿ ಕಾದಂಬರಿಗಳ ಪಿತಾಮಹ'ನೆಂದು ಹೆಸರು ಪಡೆದಿದ್ದನು. ಬ್ರಿಟನ್, ಅಮೆರಿಕಾ, ಜರ್ಮನಿ, ಜಪಾನ್‌ಗಳ ಪತ್ತೇದಾರಿ ಸಾಹಿತ್ಯ ತುಂಬಾ

ಮನ್ನಣೆ ಇದೆ. ಅಲ್ಲದೆ ಪಾಶ್ಚಾತ್ಯರ ಈ ಪತ್ತೇದಾರಿ ಕಾದಂಬರಿಗಳ ಪ್ರಭಾವದಿಂದ ಬೇರೆ ಬೇರೆ ಸಾಹಿತ್ಯ ಮತ್ತು ಭಾಷೆಗಳ ಪತ್ತೇದಾರಿ ಕಾದಂಬರಿ ಹುಟ್ಟಿಕೊಂಡಿತ್ತು. ಅದೇ ರೀತಿ ಭಾರತದಲ್ಲಿ ಇದು ಜನ್ಮತಾಳಿತ್ತು. ಕನ್ನಡ ಸಾಹಿತ್ಯದಲ್ಲಿ ಪೌರಾಣಿಕ, ಸಾಮಾಜಿಕ, ಐತಿಹಾಸಿಕ ಕಾದಂಬರಿ ಪ್ರಕಾರಗಳು ಹೆಚ್ಚು ಮನ್ನಣೆ ಪಡೆದಿದ್ದವೇ ಹೊರತು ಪತ್ತೇದಾರಿ ಕಾದಂಬರಿ ಅಂತಹ ಬಲಾಢ್ಯತೆಯನ್ನು ಪಡೆದಿರಲಿಲ್ಲ. ಆದರೆ ಎಂ. ವೆಂಕಟ ಕೃಷ್ಣಯ್ಯನವರ 'ಚೋರ ಗ್ರಹಣ ತಂತ್ರ' ಎಂಬ ಮೊದಲ ಪತ್ತೇದಾರಿ ಕಾದಂಬರಿ ಕೃತಿಯಾಗಿದೆ. ಈ ಕೃತಿ ರೀತಿಯಲ್ಲಿ ಕಳ್ಳತನ ವಿಧಾನವನ್ನು, ಪತ್ತೇಹಚ್ಚುವಿಕೆ ಮಾಹಿತಿಯನ್ನು ತಿಳಿಸುವುದಲ್ಲದೆ, ಇನ್ನಿತರ ವಿಷಯಗಳನ್ನು ತಿಳಿಸಲಾಗಿದೆ. ಈ ಕೃತಿಯು ಸ್ವತಂತ್ರ ಪೂರ್ವದಲ್ಲಿಯೇ ರಚನೆಯಾಗಿದೆ.

೨.೪ ಸ್ವತಂತ್ರ ನಂತರ ಪತ್ತೇದಾರಿ ಕಾದಂಬರಿ ಬೆಳೆದು ಬಂದ ದಾರಿ

ತ.ರಾ.ಸು, ರಾಮಮೂರ್ತಿ, ಅನಕೃ, ಕೃಷ್ಣಮೂರ್ತಿ, ಪುರಾಣಿಕ, ಗುರುರಾಜಾಚಾರ್, ಗುಂಡಾಶಾಸ್ತ್ರಿ ಮುಂತಾದವರು ಸ್ವಂತಂತ್ರಗೊಂಡ ನಂತರಕ್ಕಿಂತ ಹಿಂದೆ ಇದ್ದರೂ, ಇವರೆಲ್ಲರ ಕಾದಂಬರಿಗಳನ್ನು ಸ್ವತಂತ್ರ ನಂತರವೂ ಕಾಣಬಹುದು. 'ಪತ್ತೇದಾರಿ ಪುರುಷೋತ್ತಮ'ರೆಂದೇ ಕರೆಯಲಾದ ಎನ್.ನರಸಿಂಹಯ್ಯನವರು ಇವರೆಲ್ಲರ ಪುಸ್ತಕಗಳನ್ನು ತಪ್ಪದೇ ಓದುವುದಲ್ಲದೆ ಇವರೆಲ್ಲರ ಕೃತಿಗಳ ಜೊತೆ ತಮ್ಮ ಕೃತಿಯ ವಿಚಾರಗಳನ್ನು ಹೋಲಿಕೆ ಮಾಡಿ ನೋಡುತ್ತಿದ್ದರು. ಮತ್ತೆ ಸ್ವತಹ ಮನೆಯಲ್ಲೇ ಒಂದು ಲೈಬ್ರರಿಯನ್ನು ಪ್ರಾರಂಭಿಸಿ ಹೆಚ್ಚು ಪತ್ತೇದಾರಿ ಸಂಬಂಧಿಸಿದ ಪುಸ್ತಕಗಳನ್ನು ಓದುತ್ತಿದ್ದರು. ಹೀಗೆ ೧೯೪೯ ರಿಂದ ೧೯೫೧ರವರೆಗೆ ಓದಲು ಪ್ರಾರಂಭಿಸಿ, ೧೯೫೧ ರಲ್ಲಿ ಪ್ರಥಮ ಬಾರಿಗೆ ಪತ್ತೇದಾರಿ ಕಾದಂಬರಿಯಾದ 'ಪತ್ತೇದಾರಿ ಪುರುಷೋತ್ತಮ' ಎಂಬುದು ಹೆಚ್ಚು ಮನ್ನಣೆಯನ್ನು ಪಡೆಯಿತು. ಇವರಲ್ಲದೆ ಎನ್.ಗುಂಡಾಶಾಸ್ತ್ರಿ, ಟಿ.ಕೆ.ರಾಮರಾವ್, ಬಿ.ಎಸ್.ಕೃಷ್ಣಮೂರ್ತಿ, ಪುಲಿಕೇಶಿ, ಮುಂತಾದವರು ಪತ್ತೇದಾರಿ ಕಾದಂಬರಿಗಳ ಕರ್ತೃಗಳಾಗಿದ್ದರೂ, ಇವರೆಲ್ಲರ ಮಧ್ಯದಲ್ಲಿ ಮಹಾಮೇರುವಿನಂತೆ ಹೆಚ್ಚು ಪ್ರಸಿದ್ಧಿ ಪಡೆದು ಹೆಸರುವಾಸಿಯಾದವರು ಎನ್.ನರಸಿಂಹಯ್ಯನವರು ಮಾತ್ರ. ಹೀಗೆ ಪತ್ತೇದಾರಿ ಸಾಹಿತ್ಯ ಪ್ರಕಾರ ಸಾಗಿಬಂದಿತ್ತು. ಇತ್ತೀಚೆಗೆ ಸುಧಾಕರ, ಮಾ.ಭೀ.ಶೇ. ಮುಂತಾದವರು ಪತ್ತೇದಾರಿ ಕಾದಂಬರಿಕಾರರಾಗಿ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ.

ಇತ್ತೀಚೆಗೆ ಕನ್ನಡ ಸಾಹಿತ್ಯದಲ್ಲಿ ಪತ್ತೇದಾರಿ ಕಾದಂಬರಿ ಹೆಚ್ಚು ಅಭಿವೃದ್ಧಿಯನ್ನು ಹೊಂದಿ ಹೆಸರು ಮಾಡಿದೆ. ಅಲ್ಲದೆ ಈಗ ಓದುಗರ ಸಂಖ್ಯೆ ಹೆಚ್ಚು ಇರುವುರಿಂದ ಪತ್ತೇದಾರಿ ಕಾದಂಬರಿಗಳಿಗೆ ವಿಶೇಷವಾದ ಮನ್ನಣೆಯೂ ಕೂಡಾ ಲಭಿಸಿದೆ. ಅಲ್ಲದೆ ಸಿನಿಮಾ ನಿರ್ದೇಶಕ

ಇಂತಹ ಕಾದಂಬರಿಗಳ ಬಗ್ಗೆ ಹೆಚ್ಚು ಕಣ್ಣನ್ನು ಆಡಿಸುವುದರಿಂದ ಅದರಿಂದ ದೊರಕುವ ಕಥಾ ತುಣುಕುಗಳು ಸಿನಿಮಾಕ್ಕೆ ಹೆಚ್ಚು ಅನುಕೂಲವಾಗುತ್ತವೆ. ಜನಸಂಖ್ಯೆಯು ಜಾಸ್ತಿಯಾದಷ್ಟು ಅಪರಾಧ ಕೃತ್ಯಗಳು ಸಮಾಜದಲ್ಲಿ ಯಾವುದೇ ನಿರಾಂತಕವಾಗಿ ಹೆಚ್ಚಾಗುತ್ತಾ ಹೋಗಿವೆ. ಇದರಿಂದ ಪತ್ತೇದಾರಿ ಸಾಹಿತಿಗಳಿಗೆ ಕೃತಿ ರಚಿಸುವುದಕ್ಕೆ ಅನೇಕ ವಿಷಯ ವಸ್ತುಗಳು ದೊರಕುತ್ತವೆ. ಇದರಿಂದ ಕಾದಂಬರಿಗಳು ಹೆಚ್ಚುವುಲ್ಲದೆ ಕನ್ನಡ ಸಾಹಿತ್ಯ ರಾಶಿ ಬೊಕ್ಕಸಕ್ಕೆ ಇವುಗಳು ಬಂದು ಸೇರುತ್ತಿವೆ. ಅದಕೊಸ್ಕರ ಇಂದು ಈ ಸಾಹಿತ್ಯ ಪ್ರಕಾರ ಹೆಚ್ಚು ಜನ ಮನ್ನಣೆ ಗಳಿಸಿದೆ.

ಅಧ್ಯಾಯ–೩

ಎನ್. ನರಸಿಂಹಯ್ಯನವರ ಜೀವನ ಮತ್ತು ಸಾಹಿತ್ಯ

೩.೧ ಬಾಲ್ಯ ಮತ್ತು ವಿದ್ಯಾಭ್ಯಾಸ

ಪೈಜಾಮ, ಅರ್ಧತೋಳಿನ ಅಂಗಿ, ಕೈಗೊಂದು ಹಳೆಯ ವಾಚು, ಕುಳ್ಳು ಆಕಾರ, ಚುರುಕು ನಡಿಗೆ, ಗುಂಪು ಕೂಡಿದ ಜನರಿಂದ ಸದ್ದಿಲ್ಲದೆ ನುಸುಳಿಕೊಂಡು ಹೋಗುವ ಜಾಣ್ಮೆ, ತೀರಸನಿಹದವರು ಸಿಕ್ಕಲ್ಲಿ ಆಧ್ಯಾತ್ಮಿಕತೆಯಿಂದ ಹಿಡಿದು ರಾಜಕೀಯದವರೆವಿಗೆ ಪುಂಖಾನುಪುಂಖವಾಗಿ ಅಧಿಕಾರಯುತವಾಗಿ, ಬೇಸರವಾಗದಂತೆ ಹೇಳುವ ವಾಕ್ ಚತುರತೆ, ಕಟು ಸತ್ಯವನ್ನು ಮುಖದ ಮೇಲೆ ಹೊಡೆದಂತೆ ಹೇಳುವ ನಿಜಾಯಿತಿ ಪೂರಿತ ನಿರ್ಭಯತೆ, ಸಮಕಾಲೀನರನ್ನು ವಿಮರ್ಶಿಸುವ ಎದೆಗಾರಿಕೆ.

ಇಷ್ಟೆಲ್ಲ ಗುಣವಾಚಕಗಳಿಗೂ ಒಂದೇ ಪದ ಕನ್ನಡದಲ್ಲಿದೆಯೆಂಬುದು ಗೊತ್ತೇ? ಆ ಪದ 'ಎನ್. ನರಸಿಂಹಯ್ಯ.'

ಕನ್ನಡದಲ್ಲಿ ಕಾಳಜಿಯಿಲ್ಲದವರಿಗೂ ಆ ಹೆಸರು ಚಿರಪರಿಚಿತ. ಅ.ನ.ಕೃ. ಎಂದವರ್ಯಾರೆಂದು ಕೇಳುತ್ತಾರೆ. ಆದರೆ ತಿಳಿಯದವರಿಗೂ ಇವರು 'ಪುರುಷೋತ್ತಮ ಸಾಹಸ'ಗಳ ನಾಯಕರೆಂದು ಗೊತ್ತು. ಕನ್ನಡದಲ್ಲಿ ಯಾರೂ ಸಾಧಿಸದಂತಹ ಸಾಧನೆಯ ಹೆಮ್ಮೆ ಇವರ ಸೊತ್ತು. ಇಂದಿನ ಪ್ರಮುಖ ಪ್ರಕಾಶನಗಳನ್ನು ಹುಟ್ಟಿಸಿದುದು ಇವರ ಗತ್ತು.

ಐನೂರ ಐವತ್ತಕ್ಕೂ ಹೆಚ್ಚು ಮುಟ್ಟುತ್ತಿರುವ ಕಾದಂಬರಿಗಳ ರಾಶಿಗೆ ಇವರು ಅಧಿಪತಿ ನಾಲ್ಕೈದು ಕಾದಂಬರಿ ಬರೆದು ಸಾಹಿತ್ಯವನ್ನು ಗುತ್ತಿಗೆ ಹಿಡಿದಂತೆ ಮಾತನಾಡುವವರ ಮುಂದೆ ಇವರೊಂದು ಅಪಶೃತಿ. ತಾನೇನನ್ನು ಸಾಧಿಸಿದ್ದೇನೆಂಬುದನ್ನು ತಿಳಿದೂ ನಿರಾಡಂಬರವಾಗಿ ಸರಳವಾಗಿರುವುದು ಇವರ ರೀತಿ. ಹೊಸ ಬರಹಗಾರರ ಮುಂದೆಯೂ ಬರಿಯ ಬರಹಗಾರರ ಮುಂದೆಯೂ ಒಂದೇ ನೀತಿ. ಕೆಟ್ಟದ್ದೆನಿಸಿದ್ದನ್ನು ಕೆಟ್ಟದ್ದೆನ್ನಲೂ, ಒಳ್ಳೆಯದನ್ನು ಸ್ವಾಗತಿಸುವಲ್ಲೂ, ಬಿಚ್ಚು ಹೃದಯದ ಮಾತು ಕೃತಿ. ಪ್ರಕಾರದ ಅಬ್ಬರದಲ್ಲಿ ಮುಳುಗಿರುವ ಈ ಕಾಲದಲ್ಲಿ ತೆರೆಮರೆಯಲ್ಲೇ ಇದ್ದು ಸೇವೆಗೈಯ್ಯುವುದು.

ಐನೂರ ಐವತ್ತಕ್ಕೂ ಹೆಚ್ಚು ಕಾದಂಬರಿ ಬರೆದ ಇವರು ಓದಿದ್ದು ಕನ್ನಡ ನಾಲ್ಕನೆಯ ತರಗತಿ. ದಿನಾಂಕ:– ೧೮–೦೯–೧೯೨೫ ರಂದು ಬೆಂಗಳೂರಿನಲ್ಲಿ ಹುಟ್ಟಿದರು. ನಾಲ್ಕನೇ

ತರಗತಿ ಓದುತ್ತಿರುವಾಗಲೇ ತಂದೆಯನ್ನು ಕಳೆದುಕೊಂಡು ಚಿಕ್ಕಪ್ಪನ ಆಶ್ರಯ ಪಡೆದರು. ನಂತರ ಒಂದು ವರ್ಷದಲ್ಲಿ ಚಿಕ್ಕಪ್ಪ ಮರಣ ಹೊಂದಿದರು. ಇದರಿಂದ ನೆಲೆ ಇಲ್ಲದಂತಾಗಿ ಇವರು ವಿದ್ಯಾಭ್ಯಾಸವನ್ನು ಕೊನೆಗೊಳಿಸಿ, ತಾಯಿಯ ತವರೂರು ಚಿಕ್ಕಮಗಳೂರಿನಲ್ಲಿರುವ ಅಜ್ಜಿ ಮನೆಗೆ ಹೋದರು. ವಿದ್ಯಾಭ್ಯಾಸ ಮುಂದುವರಿಸುವ ವಾತಾವರಣ ಇಲ್ಲದ್ದರಿಂದ ಬೇರೆ ದಾರಿ ಕಾಣದೆ ಜೀವನ ನಿರ್ವಹಣೆಗಾಗಿ ೧೯೩೮-೧೯೬೯ರ ವರೆಗೆ ಹೊಲಿಗೆ (ಟೈಲರ್) ಕೆಲಸಕ್ಕೆ ಸೇರಿದರು. ಒಂದು ವರ್ಷದಲ್ಲಿಯೇ ಆ ಕೆಲಸವನ್ನು ಬಿಟ್ಟು ಕೈಗಾರಿಕಾ ಪಾಠಶಾಲೆಯಲ್ಲಿ ಮೂರು ವರ್ಷಗಳ ಚಮ್ಮಟ್ಟಿಗೆಯಿಂದ ಉಳಿಯುವವರೆವಿಗೆ ಹೋರಾಟದ ಕ್ಷಣ. ಅದರಿಂದ ಬರುವ ಆದಾಯದಿಂದ ಸಂಸಾರದ ಖರ್ಚು ವೆಚ್ಚ ನಿರ್ವಹಿಸಬೇಕಾಗಿತ್ತು. ಇದರಿಂದಾಗಿ ವಿಧ್ಯಾಭ್ಯಾಸ ಮುಂದುವರಿಸುವ ಆಸೆ ಗಗನ ಕುಸುಮವಾಗಿಯೇ ಉಳಿಯಿತು. ಕೈಗಾರಿಕಾ ಪಾಠಶಾಲೆಯಲ್ಲಿ ಮೂರು ವರ್ಷಗಳು ಕಳೆದ ನಂತರ ಆ ಕೆಲಸ ಬಿಟ್ಟು ೧೯೪೨ರಲ್ಲಿ ಬಸ್ ಕ್ಲೀನರ್ ಕೆಲಸಕ್ಕೆ ಸೇರಿಕೊಂಡರು. ಆ ಸಂದರ್ಭದಲ್ಲಿ ಪ್ರಥಮ ಚಿಕಿತ್ಸೆಯ ತರಬೇತಿ ಪಡೆದು ಪರೀಕ್ಷೆಯಲ್ಲಿ ಪಾಸಾಗಿ, ೧೯೪೪ರಲ್ಲಿ ಬಸ್ ಕಂಡಕ್ಟರ್ ಆಗಿ ನೇಮಕಗೊಂಡರು.

ಹೇಗೋ ಸಾವಕಾಶವಾಗಿ ಸಂಸಾರದ ಗಾಡಿ ನಡೆಯುತ್ತಿದ್ದ ಈ ಸಂದರ್ಭದಲ್ಲಿಯೇ ಹಿರಿಯರ ಒತ್ತಾಯಕ್ಕೆ ಮಣಿದು ೧೯೪೭ರಲ್ಲಿ ನಾಗರತ್ನಮ್ಮನನ್ನು ಮದುವೆಯಾಗಿ ಗೃಹಸ್ಥಾಶ್ರಮ ಸ್ವೀಕರಿಸಿ ಸಂಪೂರ್ಣ ಸಂಸಾರಿಯಾದರು.

ಓದುವ ಹವ್ಯಾಸ ಇದ್ದುದರಿಂದ ಕಥೆ, ಕಾದಂಬರಿ, ಮಾಸಪತ್ರಿಕೆಗಳನ್ನು ಕೊಂಡು ಓದುತ್ತಲೇ ಇದ್ದರು.

ಚಿಕ್ಕಮಗಳೂರಿನಲ್ಲಿ ಮದುವೆಯಾಗಿ ಸಂಸಾರಿಯಾದರೂ ಅವರ ಮನಸ್ಸಿನಲ್ಲಿ ಬರೆಯಬೇಕೆನ್ನುವ ಕೊರಗು ಸದಾ ಪೀಡಿಸುತ್ತಿತ್ತು. ತಾಯಿ, ಅಣ್ಣ, ತಮ್ಮಂದಿರು, ತಂಗಿಯ ಕ್ಷೇಮಕ್ಕಾಗಿ ಚಿಕ್ಕಮಗಳೂರಿನಲ್ಲಿ ನೆಲೆಸಿದ್ದರೂ ಬೆಂಗಳೂರಿಗೆ ಹಿಂದಿರುಗುವ ಯೋಚನೆ ಮರೆಯಲಿಲ್ಲ. ೧೯೪೮ರಲ್ಲಿ ಚಿಕ್ಕಮಗಳೂರು ಬಿಟ್ಟು ಬೆಂಗಳೂರಿಗೆ ಬಂದು ಸೇರಿದರು. ಜೀವನ ನಿರ್ವಹಣೆಗಾಗಿ ಲಾರಿ ಕ್ಲಿನರ್ ಕೆಲಸಕ್ಕೆ ಸೇರಿದರು. ಓದುವ ಹವ್ಯಾಸ ಬಿಡದೆ ಬಾಡಿಗೆ ಮನೆಯಲ್ಲಿಯೇ ವಾಚನಾಲಯ ಆರಂಭಿಸಿ ಬಾಲಸರಸ್ವತಿ, ವೆಂಕಟಾಚಾರ್ಯ, ಗುರುರಾಜಾಚಾರ್ಯ, ಗುಂಡಾಶಾಸ್ತ್ರಿ ಮೊದಲಾದವರ ಪತ್ತೇದಾರಿ ಕಾದಂಬರಿಗಳನ್ನು ತಪ್ಪದೇ ಓದತೊಡಗಿದರು.

'ಪತ್ತೇದಾರಿ ಪುರುಷೋತ್ತಮ' ಬಿ.ನಾರಾಯಣ ಅಯ್ಯಂಗಾರ್‌ರವರು ಪ್ರಕಟಿಸಿದ ಇವರ ಪ್ರಥಮ ಕಾದಂಬರಿ. ಸಾಮಾನ್ಯ ಜನರಿಗೂ ಹಿಡಿಸುವಂತಹ ಶೈಲಿಯಿದ್ದುದು ಇದರ ಜನಪ್ರಿಯತೆಯ ವೈಖರಿ.

ಪ್ರಥಮ ಪ್ರಯತ್ನದಲ್ಲೇ ದೊರೆತ ಯಶಸ್ಸಿನಿಂದ ಸಾಹಿತ್ಯ ಸೃಷ್ಟಿ ಒಂದೇ ಗುರಿ. ಕೇಳಿದೊಡನೆ ಒಂದು ದಿನದಲ್ಲಿ ಪತ್ತೇದಾರಿ ಕಾದಂಬರಿ ಬರೆದುಕೊಡುವ ಫ್ಯಾಕ್ಟರಿ. ಪ್ರಕಾಶಕರೆಲ್ಲರಿಗೂ ಕೈಗೆಟಕುವ ಅವರ ಅನುಕೂಲಕ್ಕೆ ತಕ್ಕಂತೆ ವರ್ತಿಸುವ ಸಹಕಾರಿ. ಹೊಸ ಪ್ರಕಾಶಕರಿಗೂ ವೃತ್ತಿ ರಹಸ್ಯ ತಿಳಿಸಿ ಹುರಿದುಂಬಿಸುವ ಉಪಕಾರಿ. ಎಷ್ಟೋ ಪ್ರತಿಭಟನೆ ಬಂದರೂ ಲೆಕ್ಕಿಸದೆ ತಾನು ನಡೆದದ್ದೇ ದಾರಿ.

ಈ ದಾರಿಯಲ್ಲಿ ನಡೆಯುವಾಗ ಎಷ್ಟೋ ಕಷ್ಟ ನಿಷ್ಠುರ. ಕಾದಂಬರಿಗೆ ಐವತ್ತು ರೂಪಾಯಿ ಕೊಟ್ಟು ಸ್ವಾರ್ಥ ಸಾಧಿಸಿಕೊಳ್ಳುವ ಪ್ರಕಾಶರೊಡನೆ ಹೆಣಗಿ ಮನೆಯಲ್ಲಿ ತಿಂಡಿ ತೀರ್ಥಕ್ಕೂ ಬರ. ಆದರೂ ಹಿಮ್ಮೆಟ್ಟದೆ ಬರೆದೇ ಜೀವಿಸಲೆಕ್ಕಿಸದ ಧೀರ. ಕಡೆಗೆ ಬೇಸತ್ತು ಪ್ರಕಾಶಕರಿಂದ ಶೇಕಡಾವಾರು ಪಾಲು ಕೇಳಿ ಅವರ ಬೆದರಿಕೆಗೆ ಜಗ್ಗದೆ ಅಪಪ್ರಚಾರಕ್ಕೆ ಅಣಗದೆ, ಕಡೆಗೂ ಅದನ್ನು ಸಾಧಿಸಿದ ಸಫಲ ಹೋರಾಟಗಾರ. ಕಾಂಪ್ಲಿಮೆಂಟರಿಯಾಗಿ ಲೇಖಕರಿಗೆ ಕೊಡುತ್ತಿದ್ದ ಹತ್ತು ಪ್ರತಿಗಳನ್ನು ಇಪ್ಪತ್ತೈದಕ್ಕೆ ಏರಿಸಿದ ಚತುರ.

ಇದುವರೆವಿಗೂ ಯಾವ ಭಾರತೀಯ ಭಾಷೆಯಲ್ಲೂ ಪತ್ತೇದಾರಿ ಲೇಖಕರಿಗೆ ಶೇಕಡಾವಾರು ಪಾಲು ಕೊಡುವ ಪದ್ಧತಿಯಿಲ್ಲ. ಹತ್ತು ಪ್ರತಿಗಿಂತ ಹೆಚ್ಚು ಕಾಂಪ್ಲಿಮೆಂಟರಿ ಕೊಡುವುದಿಲ್ಲ. ಹಿಂದಿನಿಂದ ಕನ್ನಡದಲ್ಲೂ ಇದ್ದ ಈ ಪದ್ಧತಿಯನ್ನು ಮಾರ್ಪಾಟುಗೊಳಿಸಿದ ಇವರಿಂದ ಸಾಮಾಜಿಕ ಕಾದಂಬರಿಕಾರರಿಗೂ ಫಲ.

ಸಾಮಾಜಿಕ ಕಾದಂಬರಿ ಬರೆಯಬಲ್ಲಿರಾ? ಎಂಬ ಪ್ರಶ್ನೆಗೆ ಜನಪ್ರಿಯ ಸಾಮಾಜಿಕ ಕಾದಂಬರಿಗಳ ಸಾಲುಸಾಲು, ಎರಡೆರಡು ಕೆಲವು ಮೂರು ಮುದ್ರಣಗಳಾದುದು ಅವರ ವಿಸ್ತೃತ ಭಾವಕ್ಕೆ ನಿದರ್ಶನ. ನಗೆ ಬರಹ ರಚಿಸಬಲ್ಲಿರಾ? ಎಂದದ್ದಕ್ಕೆ 'ಬೊಮ್ಮನ ಬುರುಡೆ' ಹಾಸ್ಯ ತುಣುಕುಗಳ ಸಂಕಲನ. ಪೌರಾಣಿಕ? ಇದೆ 'ಪತಿವ್ರತೆಯರ ಮಹಾತ್ಮೆ', 'ಶ್ರೀರಾಮ ಕಥಾಮಹಿಮೆ' 'ಸುಗಮ ದಾಂಪತ್ಯ' ಎಂಬ ಪುಸ್ತಕದಿಂದ ಓದುಗರಿಗೆ ಲೈಂಗಿಕ ಜ್ಞಾನ.

ಇಪ್ಪತ್ತೆರಡನೇ ವಯಸ್ಸಿನಲ್ಲಿ (೧೨-೦೫-೧೯೪೭) ನಾಗರತ್ನನೊಡನೆ ವಿವಾಹ. ಆಕೆಯ ರತ್ನದಂತಹ ಸಹಚರ್ಯೆಯಿಂದ ಇವರ ಸಾಹಿತ್ಯಸೇವೆಗೆ ಪ್ರೋತ್ಸಾಹ. ಜೀವನದಲ್ಲಿ ಯಾವ ಕಷ್ಟ

ಬಂದರೂ ಪತಿಗೆ ತಿಳಿಯದಂತೆ ಎದುರಿಸುವ ಉತ್ಸಾಹ. ಕುಟುಂಬ ಯೋಜನೆಗೆ ಒಬ್ಬರ ಮನಸ್ಸು ನಿರುತ್ಸಾಹ. ಹುಟ್ಟಿದ ಎಂಟು ಮಕ್ಕಳಲ್ಲಿ ಎರಡು ಶಿವೈಕ್ಯವಾಗಿ ಉಳಿದ ಐದು ಗಂಡು ಮಕ್ಕಳು, ಒಂದು ಹೆಣ್ಣುಮಗಳ ಮೇಲೆ ಎಲ್ಲಿಲ್ಲದ ವ್ಯಾಮೋಹ.

ಸಾಹಿತಿಗಳೆಂದರೆ ಕುಡಿತ, ಜೂಜು, ಸಿಗರೇಟು ಮುಖ್ಯವೆಂಬ ಜನಸಾಮಾನ್ಯರ ಫಾರ್ಮೂಲಾ ನಂಬಿಕೆಗೆ ಇವರದೊಂದು ವಿರೋಧಾಭಾಸ. ಅಂತಹವರ ಕೂಟದಲ್ಲಿ ನೈದಿಲೆಯ ಮೇಲಿನ ನೀರ ಹನಿಯಂತೆ ಸಹವಾಸ.

ತಮಗೆಲ್ಲಿ ಧಕ್ಕೆಯೋ ಎಂದು ಅಂಜಿ ಹೊಸ ಬರಹಗಾರರ ಉತ್ಕರ್ಷೆಯನ್ನು ತಡೆಯುವ ಜನರೇ ಹೆಚ್ಚಿರುವ ನಮ್ಮಲ್ಲಿ ಹೊಸಬನೊಬ್ಬ ಬಂದರೆ ಸಾಕೆಂದು ಮನಃಸ್ಫೂರ್ತಿಯಾಗಿ ಸಹಕರಿಸಿ ಪ್ರಕಟವಾಗಲು ತಮ್ಮ ಸಮಯ ಪ್ರಾಬಲ್ಯಗಳನ್ನು ವಿನಿಯೋಗಿಸುವುದು ಇವರ ನಿತ್ಯ ಕರ್ಮ.

ಪತ್ತೇದಾರಿಗಳನ್ನು ಸಾಹಿತ್ಯ ಪ್ರಕಾರವೆಂದೇ ಕಾಣಿಸಬೇಕೆಂದು ಇವರ ಕೂಗು. ಕರ್ನಾಟಕದ ಪ್ರಮುಖ ಪತ್ರಿಕೆಗಳು ಇತ್ತ ಹೆಚ್ಚು ಲಕ್ಷ್ಯ ಕೊಟ್ಟಿಲ್ಲವೆಂಬ ಕೊರಗು. ಕೆಲವು ಸಾಹಿತಿಗಳು ಈ ಸಾಹಿತ್ಯದ ಬಗ್ಗೆ ಕಿಡಿಕಾರುತ್ತಾ ಆಂಗ್ಲ ಕಾದಂಬರಿಗಳನ್ನು ಓದುವುದು ಕಂಡು ಬೆರಗು, ವಿರೋಧಕರೆಲ್ಲರಿಗೂ ತಾವೊಬ್ಬರೇ ಚುರುಕು ಮುಟ್ಟಿಸುವ ದಾಷ್ಟ್ಯ. ಕನ್ನಡದಲ್ಲಿನ ಪತ್ತೇದಾರಿ ಬಗ್ಗೆ ಅಭಿಮಾನದಿಂದ, ಕಳಕಳಿಯಿಂದ ತರ್ಕಮಾಡಿ ಸೋಲದಿರುವುದು ಇವರ ವೈಶಿಷ್ಟ್ಯ.

ಐವತ್ತರ ಅಂಚನ್ನು ಸಮೀಪಿಸುತ್ತಿರುವ ಸಂದರ್ಭದಲ್ಲಿ ಶ್ರೀಯುತರಿಗೆ ಮುನ್ನೂರೈವತ್ತರಲ್ಲ ಮೂರು ಸಾವಿರದೈವತ್ತು ಕಾದಂಬರಿಗಳನ್ನು ಬೇಕಾದರೂ ಬರೆಯಬಲ್ಲೆನೆಂಬ ಛಲವಿತಂತೆ. ದಿನಕ್ಕೊಂದರಂತೆ ಬರೆಯಲೂ ಅವರಲ್ಲಿ ವಸ್ತುವಿದೆ. ಇವರು ರಚಿತ ಕಾದಂಬರಿಗಳು ಈ ರೀತಿ ಇವೆ.

ಎನ್. ನರಸಿಂಹಯ್ಯ ವಿರಚಿತ

ಪುರುಷೋತ್ತಮನ ಸಾಹಸ ಪತ್ತೇದಾರಿ ಕಾದಂಬರಿಗಳು

೧) ಪತ್ತೇದಾರಿ ಪುರುಷೋತ್ತಮ
೨) ಚೋರ ಮಾರ್ತಾಂಡ
೩) ವಿಕ್ರಮ ಸಿಂಹ
೪) ಪರಾರಿಯಾದ ಖೈದಿ
೫) ಸೋಮಪ್ರಭೆ
೬) ವಿಚಿತ್ರ ಕೊಲೆಗಾರ
೭) ವ್ಯಾಘ್ರ ಮುಖ
೮) ಸೆರೆಮನೆಯಲ್ಲಿ ಶವ

೮) ಭಯಂಕರ ಭೈರಾಗಿ

೧೦) ಕೊಲೆಯಾದವನ ಸಾಕ್ಷಿ

೧೨) ಪೋರ್ಜರಿ ಪತ್ರ

೧೪) ಚೋರ – ಕೇಸರಿ

೧೬) ಛಲದ ಚಂಡಿ

೧೮) ಕಾಸಿಗಾಗಿ ಕೊಲೆಯೋ?

೨೦) ಕನ್ನಡಿಯ ಮುಂದೆ

೨೨) ಹೊಸಲು ದಾಟದ ಗಂಡು

೨೪) ಅರಮನೆಯ ಚೋರ

೨೬) ವ್ಯಾಮೋಹದ ವ್ಯಭಿಚಾರ

೨೮) ದುರಾಶೆಯ ಪರಿಣಾಮ

೩೦) ಮೃತ್ಯುವಿನ ದವಡೆಯಲ್ಲಿ (೨ ಭಾಗ)

೩೨) ಬಚ್ಚಿಟ್ಟ ಹೆಣ – ಮುಚ್ಚಿಟ್ಟ ಹಣ

೩೪) ಪ್ರೇತದ ಪ್ರೇರೇಪಣೆ

೩೬) ಸತ್ತವನ ಸಮಸ್ಯೆ

೩೮) ಸಂದೇಹ ಸುಂದರಿ (೩ ಭಾಗಗಳು)

೪೦) ಶಿಖಂಡಿ – ಶಿಖಾಮಣಿ

೪೨) ಕಾರ್ಮುಗಿಲ ಕತ್ತಲಲ್ಲಿ

೪೪) ಪೂಜಾರಿಯ ಪುಂಡಾಟ

೪೬) ಪ್ರದೀಪನ ಪರಾಭವ

೪೮) ಕಣ್ಮರೆಯಾದ ಕಾಂತ

೫೦) ಹತ್ಯಾಕಾರಿ ಯಾರು?

೫೨) ಮೋಹದ ಮಡದಿ

೫೪) ಹತ್ಯಾ ರಹಸ್ಯ

೫೬) ಸಮಾಧಿಯ ಸಮಸ್ಯೆ

೫೮) ಕ್ರೋಧದ ಕೊನೆ

೬೦) ಪ್ರತೀಕಾರದ ಫಟಿಂಗ

೬೨) ಕಾಮದ ಕಣ್ಣು

೬೪) ಹೆಣ್ಣು ಕುದುರೆ

೯) ಮತ್ಸರದ ಪರಿಣಾಮ

೧೧) ನಿರ್ದೋಷಿ

೧೩) ಮೂರು ದಿನಗಳು

೧೫) ಮೃತ್ಯುವಿನೊಡನೆ ಹೋರಾಟ

೧೭) ಕೊಲೆಯ ರಹಸ್ಯ

೧೯) ಕೊಲೆಯ ಪೂರ್ವ ಕಥೆ

೨೧) ವಿಶ್ವಾಸ ಘಾತುಕ

೨೩) ಸಾವಿನ ಸೋಲು

೨೫) ಮೃತ್ಯು ಮಣಿ

೨೭) ಮಂತ್ರವಾದಿಯ ತಂತ್ರ

೨೯) ಮಾಟಗಾರ ಮಾಯಣ್ಣ

೩೧) ಹೇಡಿಯೋ? ಹೆಮ್ಮಾರಿಯೋ

೩೩) ಮಿತ್ರದ್ರೋಹಿ

೩೫) ರಾಣಿವಾಸದ ರಹಸ್ಯ

೩೭) ಅದೃಷ್ಟದ ಅವಧಿ

೩೯) ಸಂಶಯದ ಸುಳಿಯಲ್ಲಿ

೪೧) ಸೇಡಿನ ಸರ್ಪ

೪೩) ಕಲಿಯುಗದ ಕಮಲ

೪೫) ದಸ್ಯುದಳ

೪೭) ಚೋರಚಕ್ರವರ್ತಿ (೨ ಭಾಗ)

೪೯) ಪಂಚರಂಗಿ ಪದ್ಮಿನಿ(೨ ಭಾಗ)

೫೧) ಪಾಪಿಯ ಪರಿಣಾಮ

೫೩) ಚಿತ್ತ ಚೋರ

೫೫) ಪಾಷಾಣ ಪತ್ರಗಳು (೨ ಭಾಗ)

೫೭) ಮುಖವಾಡದ ವ್ಯಕ್ತಿ

೫೯) ಚಿಂತಾಮಣಿ ಚಿಲುಕ (ಗಿಣಿ)

೬೧) ಅಪರಾಧಿಯ ಅಂತ್ಯ

೬೩) ಅಧ್ಯಕ್ಷರ ಮಗಳು (೪ ಭಾಗ)

೬೫) ಒಡನಾಟದ ಮಿಡಿನಾಗರ

೬೬) ಇಂಗು ತಿಂದ ಮಂಗ (೨ ಭಾಗ)
೬೮) ನಿರ್ದೋಷಿಯಾದ ಕೊಲೆಗಾರ
೭೦) ಪಂಡಿತನ ಪಲಾಯನ
೭೨) ವಿವೇಕಿಯಾದ ವಂಚಕ (೨ ಭಾಗ)
೭೪) ಪುರುಷೋತ್ತಮನ ಪರಾಜಯ?
೭೬) ಮೋಜಿನ ಮೋಹನಾಂಗಿ (೨ ಭಾಗ)
೭೮) ಕೆರಳಿದ ಕೇಸರಿ
೮೦) ಕಣ್ಣಿಲ್ಲದ ಹೆಣ್ಣು
೮೨) ಪರಕಾಯ ಪ್ರವೇಶ
೮೪) ಹಂತಕರ ಗುರೂಜಿ
೮೬) ಏಳು ಘಂಟೆ! ಏಳು ನಿಮಿಷ!!
೮೮) ರಂಗಮಹಲ್ ರಹಸ್ಯ (೨ಭಾಗ)
೯೦) ಕುರೂಪಿಯಾದ ಕೊಲೆಗಾರ
೯೨) ಕೊತ್ವಾಲನ ಕಾಮನ
೯೪) ಸಬ್‌ಇನ್ಸ್‌ಪೆಕ್ಟರ್ ಸಮಾಧಿ
೯೬) ಮಲೆಯಾಳ ಮಾಂತ್ರಿಕ
೯೮) ಚಂಚಲೆಯ ಚಪಲ

೬೭) ಅಪಮೃತ್ಯುವೋ? ಆತ್ಮಹತ್ಯೆಯೋ?
೬೯) ಢಂ! ಢಂ!! ದಗಾ ಕೋರ
೭೧) ಮಾಯವಾದ ಮಹಾರಾಣಿ (೨ ಭಾಗ)
೭೩) ಕಾಳರಾತ್ರಿಯ ಖದೀಮ
೭೫) ಏಳು ದಿನಗಳು
೭೭) ಕನ್ಯೆಯ ಕಳುವು
೭೯) ಮಂಗಳೂರು ಮೋಹಿನಿ
೮೧) ಮಾರವಾಡಿಯ ಮಾಯ
೮೩) ಚೋರ ಚಕ್ರವರ್ತಿ (ಭಾಗ-೨)
೮೫) ಮಧ್ಯರಾತ್ರಿಯ ಮದುವೆ
೮೭) ಸುಂದರಿಯ ಸಮಸ್ಯೆ
೮೯) ಭಯಂಕರ ಭೂತ
೯೧) ಗುಪ್ತ ಗೆಳೆಯ
೯೩) ಚಲಿಸುವ ಶವ
೯೫) ಮರಣ ಶಾಸನ
೯೭) ಪ್ರೇಮ ಪಿಶಾಚಿ
೯೯) ಮಹೇಂದ್ರ ಲೋಕದ ಮಾಯಾವಿ

(ಭಾಗಗಳೂ ಸೇರಿ ಒಟ್ಟು ಒಂದು ನೂರಾ ಹದಿಮೂರು ಕಾದಂಬರಿಗಳು)

ಎನ್. ನರಸಿಂಹಯ್ಯ ವಿರಚಿತ

ಮಧುಸೂದನನ ಪರಿಶೋಧನಾ ಚತುರತೆಯ ಪತ್ತೇದಾರಿ ಕಾದಂಬರಿಗಳು

೧) ಪತ್ತೇದಾರ ಮಧುಸೂದನ
೩) ಬೊಂಬಾಯಿ ದಗಾಕೋರ
೫) ವಿಚಿತ್ರ ವಿಲಾಸಿನಿ
೭) ವೀಕ್ಷಣ ವಾರಾಂಗನೆ
೯) ಸ್ಮಶಾನ ಭೈರಾಗಿ
೧೧) ಪ್ರಚಂಡ ಚೋರ
೧೩) ರಾಗಿಣಿಯ ರಂಗಾಟ

೨) ಮಂತ್ರಗಾರ ಮರಿಯಣ್ಣ.
೪) ನಾಲ್ವರೂ ನಪುಂಸಕರೇ?
೬) ಮಾಯಾಂಗನೆಯ ಮರ್ಮ
೮) ಧನಪಿಶಾಚಿ ಢಾಕು
೧೦) ಪ್ರಣಯ ಪುಂಡಾಟ
೧೨) ಎಂಟು ಕೊಲೆಯ ಭಂಟ
೧೪) ಪ್ರತಿ ಹಿಂಸೆಯ ಪಿಶಾಚಿ

೧೫) ಅನುರಾಗದ ಅಂಬುಜ
೧೬) ಪ್ರೇತವನದ ಪುಷ್ಪ
೧೯) ಮಾಯಾವಿನಿಯ ಮರ್ಮ
೨೧) ಹುಚ್ಚನ ರಹಸ್ಯ
೨೩) ಕುಂಕುಮದ ಭರಣಿ
೨೫) ಪಂಜರದ ಪಿಶಾಚಿ
೨೬) ಕಣ್ಣೀಲ್ಲದ ಕೊಲೆಗಾರ
೨೯) ಇಲಿಯ ವೇಷದ ಹುಲಿ
೩೧) ಖದೀಮರ ಕರ್ಮಕಥೆ
೩೩) ಗುಟ್ಟಿನ ಗುಲಾಮ
೩೫) ಜಾಣರ ಚಮತ್ಕಾರ
೩೬) ರೂಪವಿಲ್ಲದ ಭೂಪ
೩೯) ಕೊಲೆಯಾದ ಕೊಲೆಗಾರ
೪೧) ಶವ ಇಲ್ಲದ ಸಮಾಧಿ
೪೩) ಮಾಯಾವಿ ಮಧುಸೂದನ
೪೫) ಪ್ರೇಮದ ಪರಿಣಾಮ
೪೬) ನೀಲಿ ಬಣ್ಣದ ಕೋಟು
೪೯) ಕಾಮಾಕ್ಷಿಯ ಕಗ್ಗೊಲೆ
೫೧) ನಕಲಿ ಒಡವೆ
೫೩) ಅವನೇಕೆ ಕೊಲೆಯಾದ?
೫೫) ಅವನೇ ಅಪರಾಧಿ
೫೬) ಕುತಂತ್ರಿಯಾದ ಕೊಲೆಗಾರ
೫೯) ಕಳ್ಳ ಸಾಕಿದ ನಾಯಿ
೬೧) ಮುಚ್ಚಿಟ್ಟ ಆಭರಣ
೬೩) ಹೆಣ್ಣು ಕೊಟ್ಟ ಮಾವ
೬೫) ಆಕಸ್ಮಿಕ ಅಪರಾಧ
೬೬) ಚೋರ ಭೂಪಾಲ
೬೯) ಯಮಗಂಡ ಕಾಲ
೭೧) ಜೋಯಿಸನ ಮಗಳು

೧೬) ಜಾದೂಗಾರ ಜಗದೀಶ
೧೯) ಕತ್ತಲಲ್ಲಿ ಕಾಮಿನಿ
೨೦) ಮೋಹಿನ ವಿಲಾಸ (೨ ಭಾಗ)
೨೨) ವಿನೋದ ವಿಲಾಸಿನಿ
೨೪) ಮಾರ್ಜಾಲ ಮಾಯ
೨೬) ಪ್ರೇಮಿಯ ಪ್ರಲಾಪ
೨೯) ಪ್ರತಿರೂಪದ ಪರಿಣಾಮ
೩೦) ಮಾಟಗಾತಿಯ ಮಗಳು
೩೨) ಹೆಣ್ಣು ಹುಲಿಯ ಹಸಿವು
೩೪) ಹಸಿದ ಹೆಬ್ಬುಲಿ
೩೬) ಪ್ರೇಮವಿಲ್ಲದ ಪಕ್ಷಿ
೩೯) ಅಮಾವಾಸ್ಯೆಯ ಅತಿಥಿ
೪೦) ಬಚ್ಚಿಟ್ಟ ಭಾವಚಿತ್ರ
೪೨) ಅದೃಶ್ಯಳಾದ ಅರ್ಧಾಂಗಿ
೪೪) ಲಕೋಟೆ ರಹಸ್ಯ
೪೬) ಮಾರ್ಕೆಟ್ ಮೋಹಿನಿ
೪೯) ಗೂಢಚಾರಿಯ ಗುರು
೫೦) ಭಯಂಕರ ಭವಾನಿ
೫೨) ಸೇಡಿನ ಪ್ರಭಾವ
೫೪) ಪೊರೆ ಕಳಚಿದ ಹಾವು
೫೬) ಮಾಜಿ ಎಂ.ಎಲ್.ಎ.
೫೯) ಚಮತ್ಕಾರ ಚೋರ
೬೦) ಉಡುಗೊರೆಯ ಉಂಗುರ
೬೨) ಮದುವೆಯ ಮೋಜು
೬೪) ಅವಳಿ ಜವಳಿ
೬೬) ಪಾಷಾಣ ಪ್ರೇಮ
೬೯) ಚಲುವೆಯ ಚದುರಂಗ
೭೦) ಹೆಣ್ಣು ಪಿಶಾಚಿ
೭೨) ಕೆಣಕಬೇಡ ಜೋಕೆ

೭೩) ಹುಣ್ಣಿಮೆಯ ರಾತ್ರಿ
೭೫) ಮಾಂತ್ರಿಕನ ಕೈಗೊಂಬೆ
೭೭) ದೆವ್ವ ಹೇಳಿದ ಕಥೆ
೭೯) ಪಂಜುರ್ಲಿ ಪಿಶಾಚಿ
೮೧) ಭಯಂಕರ ಪಿಶಾಚಿ
೮೩) ತಾಮ್ರದ ಬಿಂದಿಗೆ
೮೫) ಪ್ರೇತದ ಕೂಗು
೮೭) ಪ್ರೇಮಿಗಳ ಪಲಾಯನ
೮೯) ಪಂಚ ವರ್ಣದ ಪಿಶಾಚಿ
೯೧) ಹುಚ್ಚಾಟದ ಹುಲಿ
೯೩) ಪಿಶಾಚಿಯ ಸೇಡು
೯೫) ಮಾರಿಯ ಮಂಟಪ
೯೭) ಮೂವರೂ ಮುತ್ಯಾಳರು (೩ ಭಾಗ)
೯೯) ಬೆಳದಿಂಗಳ ಭೇತಾಳ (೨ ಭಾಗ)
೧೦೧)ಪಾತಾಳದಲ್ಲಿ ಪತ್ತೇದಾರ

೭೪) ಅವನೂ – ಇವನೂ
೭೬) ಜಾಣಬುದ್ಧಿಯ ಕೋಣ
೭೮) ನಾನೇಕೆ ಕೊಲೆ ಮಾಡಿದೆ ?
೮೦) ಫಟಿಂಗ ಪಿಶಾಚಿ
೮೨) ಅವನನ್ನು ನಂಬಬೇಡ
೮೪) ಭರಮಪ್ಪನ ಭೂತ
೮೬) ದೆವ್ವ ಮಾಡಿದ ಕೊಲೆ
೮೮) ಪ್ರೇತ ಭವನ
೯೦) ಮಹಾಮಂತ್ರ ವಾದಿ
೯೨) ಮಾಯಾ ಪಿಶಾಚಿ
೯೪) ಮಂತ್ರದ ಗಿಣಿ
೯೬) ಪಿಶಾಚಿಯ ಪ್ರಭಾವ
೯೮) ಕೌತುಕದ ಕನ್ನಡಿ

(ಭಾಗಗಳು ಸೇರಿ ಒಟ್ಟು ಒಂದು ನೂರಾ ನಾಲ್ಕು ಕಾದಂಬರಿಗಳು)

ಎನ್.ನರಸಿಂಹಯ್ಯ ವಿರಚಿತ

ಅರಿಂಜಯ ವಿಕ್ರಮನ ಪತ್ತೇದಾರಿ ಕಾದಂಬರಿಗಳು

೧) ಪತ್ತೇದಾರ ಅರಿಂಜಯ
೩) ಕಣ್ಮರೆಯಾದ ಕೊಲೆಗಾರ
೫) ಅಡವಿಯ ರಾಜ
೭) ನಿಗೂಢ ಕನ್ಯೆ
೯) ನರರಾಕ್ಷಸ
೧೧) ಹೆಣ್ಣಿಗಾಗಿ ಹೆಣವಾದ
೧೩) ಗುಲಾಮನ ಗೂಢತಂತ್ರ
೧೫) ದೊಡ್ಡಯ್ಯನ ದೊಣ್ಣೆ
೧೭) ಡಾಕು ದೌಲತ್‌ಸಿಂಗ್
೧೯) ಲಲನಾಮಣಿಯ ಲೀಲೆ

೨) ಚವಾಲಿ ಡಕಾಯಿತ
೪) ರೌಡಿ ರಾಂಸಿಂಗ್
೬) ಅಪರಾಧಿಯ ಆತ್ಮಹತ್ಯೆ
೮) ಚತುರ ಶಿಖಾಮಣಿ
೧೦) ಡಕಾಯಿತರ ಗುರು
೧೨) ಮನೋರಮಣಿಯ ಮರ್ಮ
೧೪) ಹದಿನೆಂಟು ತಿಂಗಳು
೧೬) ಪ್ರೇಮದ ಪುಂಡಾಟ
೧೮) ಕಾಂತೆಯ ಕೊಲೆ
೨೦) ಚಪ್ಪಾಳೆ ರಹಸ್ಯ

೨೧) ಬಹದ್ದೂರ್ ಬನಿಯ

೨೩) ಕಾಮಣ್ಣ – ಭೀಮಣ್ಣ

೨೫) ಪ್ರೇಮದ ಗುಲಾಮ

೨೭) ಮಾಯಾ ರಮಣಿ

೨೯) ಗುರುವಿನ ಗುಲಾಮ

೩೧) ಪ್ರೇಮಿಯ ಪಿತೂರಿ

೩೩) ಭೂಪತಿರಂಗ

೩೫) ಅರ್ಚಕನ ಅತ್ಯಾಚಾರ

೩೭) ಭಾಮಾಮಣಿಯ ಲೀಲೆ

೩೯) ಪ್ರೇಮಪತ್ರದ ಪ್ರಭಾವ

೪೧) ರಹಸ್ಯ ರಮಣಿ

೪೩) ಅತಿಥಿಯ ಅಂತರ್ಧಾನ

೪೫) ಜೋಕಾಲಿ ರಾಮ

೪೭) ತಿಂಗಳಿಗೊಂದು ಕೊಲೆ

೪೯) ಕಣಿವೆಯ ಖದೀಮ

೫೧) ಪ್ರೇಮದ ಪ್ರಳಯ

೫೩) ಮಾರೀಚನ ಮರ್ಮ

೫೫) ಲಂಕಿಣಿಯ ಲೀಲೆ

೫೭) ದರೋಡೆ ಚಕ್ರವರ್ತಿ

೫೯) ಅವನೇಕೆ ಬರಲಿಲ್ಲ (೨ ಭಾಗ)

೬೧) ಪ್ರಚಂಡ ದಗಾಕೋರ

೬೩) ಮಡದಿಯಾಗಿ ಬಂದ ಮಾಯೆ

೬೫) ಪ್ರಳಯ ಪತ್ರಗಳು

೬೭) ಮಹಾವೀರನ ಮರ್ಮ

೬೯) ಎರಡು ಗಂಡು – ಒಂದು ಹೆಣ್ಣು

೭೧) ಅರಣ್ಯದ ರಾಣಿ (೨ಭಾಗ)

೭೩) ಮತ್ಸರದ ಮಾಣಿಕ್ಯ

೭೫) ಅರಿಂಜಯನು ಅಪರಾಧಿಯೇ ?

೭೭) ತಾನೊಂದು ಬಗೆದರೆ

೭೯) ಕುಟಿಲತೆಯ ಕುತಂತ್ರ

೮೧) ಬಿರುಗಾಳಿ ಭೀಮ

೮೩) ಚಪ್ಪಾಳೆ ರಹಸ್ಯ

೮೫) ಚೋರ ಚೂಡಾಮಣಿ

೮೭) ಹುಚ್ಚನ ಉದ್ರೇಕ

೮೯) ಕನಸಿನ ಕಾಮಿನಿ

೯೧) ವ್ಯಾಮೋಹದ ಹುಚ್ಚು

೯೩) ಕುಂಟ – ಕುರುಡ – ಕುರೂಪಿ

೯೫) ಸಂಚಿನ ಸುರುಳಿ

೯೭) ಪುಡಾರಿಯ ಪರಿಣಾಮ

೯೯) ಪೂಜಾರಿ ಕೊಟ್ಟ ವರ

೧೦೧) ಮಾಯಾವಾದಿ ಮರ್ಮ

೧೦೩) ಮೃತ್ಯು ಸರೋವರ

೧೦೫) ಡಕಾಯಿತರ ದಳಪತಿ

೧೦೭) ಅದೃಶ್ಯನಾದ ಅರಿಂಜಯ

೧೦೯) ಸುಡುಗಾಡಿನಲ್ಲಿ ಶವ

೧೧೧) ಮಾಯವಾದ ಮಾನವ

೧೧೩) ಕಾವಿ ತೊಟ್ಟ ಖದೀಮ

೧೧೫) ದಲ್ಲಾಳಿ ಮತ್ತು ದಗಾಕೋರ

೧೧೭) ಪುಂಡರ ಪುಂಡ

೧೧೯) ಅವನು ಸಾಯಬೇಕು

೧೨೧) ಪಾಷಾಣ ಪುರುಷ

೧೨೩) ಅಪರಾಧಿಯ ಅಂತರ್ಧಾನ

೧೨೫) ಪ್ರೇಮದ ಬಲೆಯಲ್ಲಿ

೧೨೭) ಸಮಸ್ಯೆಯ ಸುಂದರಿ

೧೨೯) ಸಾಹುಕಾರ ಸಾಕಿದ ಸರ್ಪ

೧೩೧) ಇಬ್ಬರು ಸುಂದರಿಯರು

೧೩೩) ಎರಡು ದೆವ್ವಗಳು

೧೩೫) ಕಳುವಾದ ಕನ್ಯೆಯರು

೭೯) ತೇಲಿ ಬಂದ ಹೆಣ
೮೧) ವರದಕ್ಷಿಣೆ ವ್ಯಾಮೋಹ
೮೩) ಹಾವು – ಮುಂಗುಸಿ
೮೫) ನಂಬದಿರು ಈ ದೇಹ
೮೭) ಭಯಂಕರ ಕೊಲೆಗಾರ (೨ ಭಾಗ)
೮೯) ಕೊಲೆಯಾದ ಕೋಮಲೆ
೯೧) ನೀತಿಗೆಟ್ಟ ಮಾನವ (೨ ಭಾಗ)
೯೩) ಪ್ರೇಮ ರಹಸ್ಯ
೯೫) ಒಂದೇ ಒಂದು ಕೊಲೆ
೯೭) ವಂಚಕರ ವಾತ್ಸಲ್ಯ
೯೯) ಸೇಡಿನ ಜ್ವಾಲೆ
೧೦೧)ಅಂತರಿಕ್ಷದಲ್ಲಿ ಅರಿಂಜಯ

೮೦) ಮಸಣದಿಂದ ಮನೆಗೆ
೮೨) ಕೆಂಪು ಕರವಸ್ತ್ರ
೮೪) ಲಂಚ ಕೊಟ್ಟರೆ ಮಂಚ
೮೬) ಮೂರು ಬೆಕ್ಕುಗಳು
೮೮) ಮಾಸ್ತರನ ಮಗಳು (೨ಭಾಗ)
೯೦) ಮರಣದ ಮರ್ಮ
೯೨) ಮುರಾರಿಯ ಪರಾರಿ (೨ ಭಾಗ)
೯೪) ಮಾನವ ದೈತ್ಯ (೨ ಭಾಗ)
೯೬) ಮೂಕರ್ಜಿ ಪತ್ರಗಳು (೪ ಭಾಗ)
೯೮) ಮೃತ್ಯುವಾಗಿ ಬಂದ ಮಡದಿ
೧೦೦)ಅವತಾರ ಪುರುಷ

(ಭಾಗಗಳೂ ಸೇರಿ ಒಟ್ಟು ಒಂದು ನೂರಾ ಹನ್ನೊಂದು ಕಾದಂಬರಿಗಳು)

ಎನ್.ನರಸಿಂಹಯ್ಯ ವಿರಚಿತ

ಗಾಳಿರಾಯನ ಮಹತ್ಸಾಧನೆಯ ಪತ್ತೇದಾರಿ ಕಾದಂಬರಿಗಳು

೧) ಪತ್ತೇದಾರ ಗಾಳಿರಾಯ
೩) ಖದೀಮನ ಕಾರಾಸ್ಥಾನ
೫) ನಾಲ್ಕು ಬಳೆ ಚೂರು
೭) ಶೀಲಾಮಣಿ ಸಾವು
೯) ಯಂತ್ರ – ಮಂತ್ರ – ತಂತ್ರ (೩ಭಾಗ)
೧೧) ಮೋಹ ಬಿಡದ ಮೋಹಿನಿ
೧೩) ಭಾನಾಮತಿ ಪ್ರಭಾವ
೧೫) ಕುರುಬನ ಮಗಳು
೧೭) ಹಾವಿಗೆ ಹಾಲೆರೆದರೆ
೧೯) ಬೆನ್ನತ್ತಿ ಬಂದ ಸಾವು
೨೧) ಕೊಲೆ ಮಾಡಿದ್ದೇಕೆ ?

೨) ಕಳೆದು ಹೋದ ಬೀಗದ ಕೈ
೪) ಕಣ್ಣು ಮುಂದಿನ ಕಳ್ಳ
೬) ಜೋಯಿಸನ ಜಂಜಾಟ
೮) ಮಸಣದಲ್ಲಿ ಮಠಾಧಿಪತಿ
೧೦) ಕೊಲ್ಲದೆ ಬಿಡಲಾರೆ
೧೨) ಛಲ ತೊಟ್ಟ ಚಲುವೆ
೧೪) ಕೊಲೆಗಾರನ ಕೊಲೆ
೧೬) ಪತ್ತೇದಾರ ಪತ್ತೆಯಿಲ್ಲ
೧೮) ಮಾರಾಟದ ಗೊಂಬೆ
೨೦) ಹಣಕ್ಕಾಗಿ ಹೆಣಗಳೇ ?
೨೨) ಸವತಿಯರ ಸಮಸ್ಯೆ

೨೩) ಪಾಷಾಣ ಪಿಶಾಚಿ
೨೪) ಗಂಡುಗಲಿ ಗಾಳಿರಾಯ
೨೫) ಸಾವು ತಂದ ಮದುವೆ
೨೬) ಮಾಯಾ ಮೋಹಿನಿ
೩೧) ಅವನನ್ನು ಕೊಂದು ಬಾ
೩೩) ಮೃತ್ಯುವಿಗೆ ಆಮಂತ್ರಣ
೩೫) ಹಣ ತಪ್ಪಿದರೆ ಹೆಣ
೩೭) ಕನ್ಯಾಪಹರಣ
೩೯) ದ್ರೋಹಿಗಳ ದೌರ್ಜನ್ಯ
೪೧) ಗರ್ಜನೆಯ ಘಟಸರ್ಪ
೨೯) ಗುರಿ ತಪ್ಪಿದ ಗಂಡು
೩೬) ದ್ರೋಹಿಯ ದೌರ್ಜನ್ಯ
೩೮) ವಿಧಿಯಾಗಿ ಬಂದ ಮಾಯೆ
೪೦) ಯಾರನ್ನೂ ನಂಬಬೇಡ
೪೨) ನಕಲಿ ನೋಟುಗಳು
೪೪) ಗಾಳಿ – ಬಿರುಗಾಳಿ
೪೬) ಚುನಾವಣೆಯ ಚದುರಂಗ
೪೮) ಬೆದರಿಕೆಯ ಫಲ
೫೦) ಸಿಂಹರಾಜ

(ಭಾಗಗಳೂ ಸೇರಿ ಒಟ್ಟು ನಲವತ್ತಮೂರು ಕಾದಂಬರಿಗಳು)

ಇತರ ಕೃತಿಗಳು

೧) ಶ್ರೀರಾಮ ಕಥಾ ಮಹಿಮೆ
೩) ಬೊಮ್ಮನ ಬುರುಡೆ
೫) ಚೋರ ವಿದ್ಯಾ ಚಮತ್ಕಾರ
೭) ಭಿಕ್ಷುಕನ ಭಾಗ
೯) ಸಾಹಸಿ ವೀರಭದ್ರ
೧೧) ಸಂಸಾರ ಸಮೀಕ್ಷೆ
೧೩) ನಂಬಿಕೆ – ಮೂಢನಂಬಿಕೆ
೧೫) ಮೃತ್ಯುವಿನಿಂದ ಮೃತ್ಯುಂಜಯನೆಡೆಗೆ
೧೭) ನೇಣುಗಂಬದ ನೆರಳಿನಲ್ಲಿ
೧೯) ಸರ್ವಜ್ಞ ವಚನಗಳ ನೀತಿಗಾರ
೨೧) ಪ್ರಾಸಬದ್ಧ ಗಾದೆಗಳು
೨೩) ಒಗಟುಗಳ ಸರಮಾಲೆ
೨೫) ಮಕ್ಕಳ ನೀತಿ ಕಥೆಗಳು
೨೭) ಮಾಯಾ ಪಿಶಾಚಿಯ ಮತ್ಸರ
೨೯) ದೇವರು ಮತ್ತು ಧರ್ಮ
೩೧) ಗಣ್ಯರ ನಡೆನುಡಿ
೩೩) ವಿಚಿತ್ರ-ವಿಸ್ಮಯ-ವಿನೋದ
೨) ಪತಿವ್ರತೆಯರ ಮಹಾತ್ಮೆ
೪) ಸುಗಮ ದಾಂಪತ್ಯ
೬) ಚಂದ್ರನ ಸಾಕ್ಷಿ
೮) ಹೆಣ್ಣಿನ ಮೋಹ
೧೦) ವೀರ ದಳವಾಯಿ
೧೨) ಪಿಶಾಚಿ ಕಥೆಗಳು
೧೪) ಹುಣಸೆ ಮರದ ದೆವ್ವ
೧೬) ದೆವ್ವದ ಕಥೆಗಳು
೧೮) ಬೆಪ್ಪು ಬೊಮ್ಮನ ಬುರುಡೆ
೨೦) ಭಕ್ತ ಪ್ರಹ್ಲಾದ
೨೨) ನಗಬೇಕೋ? ಅಳಬೇಕೋ?
೨೪) ನೀತಿ ಭೋಧಾಮೃತ
೨೬) ಗಾದೆಯೊಂದು ಕಥೆ
೨೮) ಶಕುನಗಳ ಫಲಾಫಲಗಳು
೩೦) ನೀತಿಯ ನುಡಿಮುತ್ತುಗಳು
೩೨) ನೀತಿಗಳ ನುಡಿಗಟ್ಟು

ಎನ್. ನರಸಿಂಹಯ್ಯ ವಿರಚಿತ ಸಾಮಾಜಿಕ ಕಾದಂಬರಿಗಳು

೧) ಮುತ್ತುಗದ ಹೂ
೨) ಗಿಣಿಕಚ್ಚಿದ ಹಣ್ಣು
೩) ನರಕದ ಮನೆ
೪) ಹಾದಿ ತಪ್ಪಿದ ಹೆಣ್ಣು
೫) ಬೀದಿಯ ಪಾರಿವಾಳ
೬) ಮಾಣಿಯ ರಾಣಿ
೭) ಅಣ್ಣ ಮೆಚ್ಚಿದ ಹೆಣ್ಣು
೮) ಅತ್ತೆ ಮನೆ ಅಳಿಯ
೯) ಪದ್ಮಿನಿಯ ಪಲ್ಲಂಗ
೧೦) ಮನೆ ಬಿಟ್ಟ ಹೆಣ್ಣುಗಳು
೧೧) ಹೆಣ್ಣುಗಳ ಕೊಂಪೆ
೧೨) ಮೂವರು ಚಲುವೆಯರು
೧೩) ಗಂಡ ಕೊಟ್ಟ ಕಾಣಿಕೆ
೧೪) ಪುರೋಹಿತನ ಮಗಳು
೧೫) ತುಪ್ಪದ ಬಿಂದಿಗೆ
೧೬) ಸೀತಮ್ಮನ ಸವತಿ
೧೭) ಕಲಿಯುಗದ ಪಾಂಚಾಲಿ
೧೮) ಎರಡು ತಲೆ ಹಾವು
೧೯) ಮೂರನೇ ಹೆಂಡತಿ
೨೦) ಸತಿಗೆ ಪತಿ ದೈವ
೨೧) ಪಿಶಾಚಿ ಕೊಟ್ಟ ತಾಂಬೂಲ
೨೨) ಜೀವನ ಸಂಗಾತಿ
೨೩) ಹೆಣ್ಣು ಮಾಯೆಯಲ್ಲ
೨೪) ನಿತ್ಯ ಸುಮಂಗಲಿ
೨೫) ಫಲ ಕೊಡದ ಮರ
೨೬) ಹೆಗಲೇರಿದ ಹೆಣ್ಣು
೨೭) ಗರತಿಯಾದ ಸೂಳೆ
೨೮) ಸೂಳೆಯಾದ ಗರತಿ
೨೯) ಎಂಟು ಗೇಣಿನ ದೇಹ
೩೦) ಬಂಜೆಯ ಮಗಳು
೩೧) ನೇಮವಿಲ್ಲದ ಹೆಣ್ಣು
೩೨) ಹಿರಿಯಕ್ಕಳ ಚಾಳಿ
೩೩) ಪ್ರೇಮದ ಸೋಗು
೩೪) ಕೈಗೆ ಬಂದು ತುತ್ತು
೩೫) ಪ್ರೇಮದ ಮಡದಿ
೩೬) ಸನ್ಯಾಸಿಗೆ ಹೆಣ್ಣು ಬೇಕೆ?
೩೭) ಕುರುಬ ಸಾಕಿದ ಕುರಿ
೩೮) ಹೆಣ್ಣು ಮಕ್ಕಳ ಮೋಜು
೩೯) ಜಾರಿ ಬಿದ್ದ ಹೆಣ್ಣು
೪೦) ಗಂಡನಲ್ಲದ ಗಂಡ
೪೧) ಆಡೋಣ ಬಾರೋ ಪ್ರಿಯ
೪೨) ಹುಳು ಕೊರೆದ ಹೂ
೪೩) ಗುಂಡಮ್ಮನ ಸೊಸೆ
೪೪) ಕಾಮದ ಗೊಂಬೆ
೪೫) ಒಂದೇ ನಾಮವು ಸಾಲದೇ?
೪೬) ಮದುಮಗಳು ಯಾರು?
೪೭) ಹೆಣ್ಣು ಮಕ್ಕಳ ತಂದೆ
೪೮) ವೇದ ಓದಿದ ಕೋಣ
೪೯) ರಾಜ ಮೆಚ್ಚಿದ ರಂಭೆ
೫೦) ಸೂಳೆಗೆ ಸ್ವರ್ಗ ಸಿಕ್ಕೀತೆ?

ಎನ್. ನರಸಿಂಹಯ್ಯ ವಿರಚಿತ

ಬೃಹಸ್ಪತಿಯ ಮೇಧಾವಂತಿಕೆಯ ಪತ್ತೇದಾರಿ ಕಾದಂಬರಿಗಳು

೧) ಪತ್ತೇದಾರ ಬೃಹಸ್ಪತಿ
೨) ಬದುಕಿ ಬಂದ ಶವ
೩) ಮೂರು ಕಾಲಿನ ಮಂಚ
೪) ಮರುಜನ್ಮ ರಹಸ್ಯ
೫) ಮಾಯವಾದ ರಮಣಿ
೬) ಗರ್ಜನೆಯ ಘಟ ಸರ್ಪ
೭) ಸಿಂಹರಾಜ

ಎನ್ ನರಸಿಂಹಯ್ಯ ವಿರಚಿತ ಬಾಲಶಂಕರನ ಪತ್ತೇದಾರಿ ಕಾದಂಬರಿಗಳು

೧) ಪತ್ತೇದಾರ ಬಾಲಶಂಕರ
೨) ರೈಲಿನಲ್ಲಿ ಕೊಲೆ
೩) ಕೊಲೆ ಮಾಡಿ ನೋಡು
೪) ನೋಡಿದರೆ ಮೃತ್ಯು
೫) ಮೃತ್ಯುವಿಗೆ ಬಲಿ
೬) ಬಲಿಯಾಗಬೇಡ
೭) ಬೇಡವಾದ ಹೆಣ್ಣು
೮) ಹೆಣ್ಣಿನ ಕೈ ಬಳೆ
೯) ಬಳೆಗಳ ಚೂರು
೧೦) ಚೂರಿ ಹಿಡಿದ ಕೈ
೧೧) ಪತ್ತೇದಾರ ರಾಜೇಶ್

ಇವರ ಇನ್ನಿತರ ಕಾದಂಬರಿಗಳು ಮಾಸ ಪತ್ರಿಕೆ ಹಾಗೂ ವಾರಪತ್ರಿಕೆಗಳಾದ ಕಥಾವಳಿ, ಸ್ಫೂರ್ತಿ, ಪೋಲೀಸ್ ನ್ಯೂಸ್, ಕ್ರೈಂ, ಸ್ಪೈ, ಕ್ರೈಂ ಥ್ರಿಲ್ಲರ್ ಇವೇ ಮುಂತಾದ ಪತ್ರಿಕೆಗಳಲ್ಲಿ ಸುಮಾರು ನೂರೈವತ್ತಕ್ಕೆ ಮೇಲ್ಪಟ್ಟು ಪತ್ತೇದಾರಿ ಕಥೆಗಳು, ಪಿಶಾಚಿ ಕಥೆಗಳು, ಇನ್ನಿತರ ಕಥೆಗಳು ಪ್ರಕಟವಾಗಿವೆ. ಪತ್ತೇದಾರಿ ಕಾದಂಬರಿಗಳನ್ನು ರಚನೆ ಮಾಡುವಾಗ ಅಭಿಮಾನಿಗಳ ಆಸೆಗಾಗಿ ತನ್ನ ಬದುಕಿನ ಬವಣೆಯನ್ನು ಹಾಗೂ ಸಾಗಿದ ದಾರಿಯನ್ನು ಕುರಿತು ಆತ್ಮ ಕಥನವಾದ 'ನನ್ನ ನೋವು ನಲಿವು ಜೀವನ ಇತಿಹಾಸ' (೨ ಭಾಗ) ರಚಿಸಿದ್ದಾರೆ.

೨.೨ ಗೌರವ ಮತ್ತು ಪುರಸ್ಕಾರ

ಸಾಹಿತ್ಯದಲ್ಲಿ ಅನೇಕ ವರ್ಷಗಳ ಕಾಲ ಎಲೆ ಮರೆ ಕಾಯಿಯಾಗಿ ಸೇವೆ ಸಲ್ಲಿಸಿದ ಎನ್. ನರಸಿಂಹಯ್ಯನವರಿಗೆ ಕೆಲವು ಪ್ರಶಸ್ತಿ ಮಾತ್ರ ದೊರೆತಿವೆ. ೧೯೬೦ – ೭೦ ದಶಕಗಳಲ್ಲಿ ಸಾಹಿತ್ಯದ ಅಭಿರುಚಿಯನ್ನು ಜನರಲ್ಲಿ ಚಿಗುರಿಸಿದರು. ಇವರಿಗೆ ೧೯೯೨ರ ೬೧ನೇ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನಿಸಲಾಯಿತು. "೧೯೯೭ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ದೊರೆತಿದೆ"[೧].

೧. ನನ್ನ ನೋವು ನಲಿವು ಪುಟ ೧೯೯

ಅಲ್ಲದೆ ಅತ್ತಿಮಬ್ಬೆ ಪುರಸ್ಕಾರ, ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಅನೇಕ ಸಂಘ ಸಂಸ್ಥೆಗಳ ಸನ್ಮಾನಗಳಿಂದ ಗೌರವಕ್ಕೆ ಪಾತ್ರರಾಗಿದ್ದಾರೆ.

ಮರಣ:

ಇಷ್ಟೆಲ್ಲ ಸಾಹಿತ್ಯ ಕೃಷಿಯಲ್ಲಿ ತೊಡಗಿ ಸೇವೆ ಸಲ್ಲಿಸಿದ ಎನ್.ನರಸಿಂಹ್ಯನವರ ಕೊನೆಗಾಲದ ಜೀವನ ತುಂಬಾ ದುಸ್ತರದಿಂದ ಕೂಡಿತ್ತು. ಬಿ.ಡಿ.ಎ ಇಲಾಖೆಯವರು ಸೈಟ್‌ನ್ನು ಆಕ್ರಮಿಸಿಕೊಂಡು ನೆಲೆ ಇಲ್ಲದಂತೆ ಮಾಡಿದರು. ಇದಕ್ಕಾಗಿ ಸರ್ಕಾರಿ ಅಧಿಕಾರಿ ಮತ್ತು ರಾಜಕೀಯ ಮುಖಂಡರ ಮುಂದೆ ಆಲೆದು ಆಲೆದು ತನ್ನ ಅಳಲನ್ನು ವ್ಯಕ್ತಪಡಿಸಿದ್ದರೂ ಪ್ರಯೋಜನವಾಗಲಿಲ್ಲ. ಇದರ ಚಿಂತೆಯಲ್ಲಿ ಕೊರಗಿ–ಕೊರಗಿ ಎನ್. ನರಸಿಂಹಯ್ಯ ನವರು ಡಿಸೆಂಬರ್ ೨೫ ರಂದು ೨೦೧೧ ರಂದು ನಿಧನರಾದರು. ಇವರಿಗೆ ೮೬ ವರ್ಷ ವಯಸ್ಸಾಗಿತ್ತು. ಇಲ್ಲಿಗೆ ಪತ್ತೇದಾರಿ ಪುರುಷೋತ್ತಮ ಜೀವನ ಯಾತ್ರೆ ಕೊನೆಗೊಂಡಿದ್ದರೂ, ಸಾಹಿತ್ಯ ರಾಶಿಗೆ ನೀಡಿದ ಸೇವೆ ಚಿರಸ್ಮರಣೀಯವಾದುದು.

ಅಧ್ಯಾಯ–೪

ಎನ್. ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿಗಳ ವಿಶ್ಲೇಷಣೆ

ಕಾದಂಬರಿಕಾರ ಎನ್.ನರಸಿಂಹಯ್ಯನವರ ಕಾದಂಬರಿಗಳನ್ನು ವಿಶ್ಲೇಷಣೆ ಮಾಡುವ ಮೊದಲು ಅವರ ಕಾದಂಬರಿಗಳ ಸಂವಿಧಾನ, ಪಾತ್ರಗಳು, ಕ್ರಿಯೆ, ಕಾಲ, ಸ್ಥಳ, ಶೈಲಿ, ವಾಚ್ಯವಾದ ಅಥವಾ ಸೂಚ್ಯವಾದ ಜೀವನ ದರ್ಶನ ಇವು ಯಾವುದೇ ಕಾದಂಬರೀಕೃತಿಯ ಅದು ಸಣ್ಣದಾಗಿರಲಿ, ದೊಡ್ಡದಾಗಿರಲಿ, ಚೆನ್ನಾಗಿರಲಿ, ಇಲ್ಲದಿರಲಿ ರಚನೆಯಲ್ಲಿ ಸೇರಿಕೊಳ್ಳುವ ಮುಖ್ಯಾಂಶಗಳು ಎಲ್ಲಾ ಸಾಹಿತ್ಯ ಜಾರೆಗಳಿಗೂ ಸಾಮಾನ್ಯವಾಗಿರುವ ಶೈಲಿಯ ಅಂಶವನ್ನು ಬಿಟ್ಟು, ಇತರ ಅಂಶಗಳನ್ನು ನಾವು ಒಂದೊಂದಾಗಿ ತೆಗೆದುಕೊಳ್ಳುತ್ತೇವೆ ಮತ್ತು ನಾವು ವ್ಯಾಸಂಗಕ್ಕಾಗಿ ಆರಿಸಿಕೊಳ್ಳುವ ಯಾವುದೇ ಕಾದಂಬರಿಯಲ್ಲಿ ಆಯಾ ಅಂಶದ ಸಂಬಂಧವಾಗಿ ಸಹಜವಾಗಿ ಉದ್ಭವಿಸುವ ಕೆಲವು ಅಂಶಗಳನ್ನು ಪರಿಶೀಲಿಸುತ್ತೇವೆ. ಅದೇ ರೀತಿ ಎನ್. ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿಗಳಲ್ಲಿ ಬರುವ ಸೂಕ್ಷ್ಮ ವಿಷಯಗಳನ್ನು ಅತ್ಯಂತ ಕೂಲಂಕಷವಾಗಿ ಕೆಲವು ಪ್ರಮುಖ ಮೂಲಾಂಶಗಳ ಆಧಾರದ ಮೇಲೆ ವಿಶ್ಲೇಷಣೆ ಮಾಡಲಾಗಿದೆ.

೧) ಕಾದಂಬರಿಯಲ್ಲಿ ವ್ಯಕ್ತವಾಗಿರುವ ಕಾಲ್ಪನಿಕತೆ

'ಕಾಲ್ಪನಿಕತೆ ಕಾದಂಬರಿಯ ಜೀವಾಳ', ಕಾಲ್ಪನಿಕತೆಯ ಕಥೆಯು ಸರಾಗವಾಗಿ, ನಿರರ್ಗಳವಾಗಿ, ಕುತೂಹಲಭರಿತವಾಗಿ, ಸಾಗಲು ಕಾಲ್ಪನಿಕತೆ ಕಾರಣವಾಗುತ್ತದೆ. ಕಲ್ಪಿತ ಕಥೆಯ ಎಲ್ಲಾ ಮಹತ್ತಿಗೂ ಆಧಾರಭೂತವಾದ ಸತ್ಯದ ಬಗೆಯನ್ನು ಅದು ಮಾರ್ಮಿಕವಾಗಿ ವಿವರಿಸುತ್ತದೆ. ಕಾದಂಬರಿಕಾರ ತನ್ನ ವಸ್ತುವಿನ ವಿಷಯದಲ್ಲಿ ಬೇಕಾದಷ್ಟು ಸ್ವಾತಂತ್ರ್ಯ ವಹಿಸಬಹುದು. ಅದರಲ್ಲಿಯೂ ಕಾಲ್ಪನಿಕತೆಯನ್ನು ಕುರಿತು ವಿಶೇಷ ಸೂಚನೆಯನ್ನು ಈ ರೀತಿ ತಿಳಿಸ ಹೊರಡುತ್ತಾರೆ.

(ವಿಶೇಷ ಸೂಚನೆ: "ಈ ಕಾದಂಬರಿಯ ಪಾತ್ರ, ಪರಿಚಯ ಕಥಾಸಾರವು ನನ್ನ ಸ್ವಯಂಕಲ್ಪಿತ. ಯಾರು ಯಾವ ವಿಧದಲ್ಲಿಯೂ ಇದರಲ್ಲಿನ ಪಾತ್ರಗಳನ್ನು ತಮಗೆ ಹೋಲಿಸಿಕೊಂಡು ತಪ್ಪು ಅರ್ಥ ಮಾಡಿಕೊಳ್ಳಬಾರದು")

ಕಾಲ್ಪನಿಕತೆಯ ವಾತಾವರಣ ಸೃಷ್ಟಿಸಿ ಕುತೂಹಲವನ್ನುಂಟು ಮಾಡುವುದು ಅಷ್ಟು ಸುಲಭದ ಮಾತಲ್ಲ. ಇವರ ಎಲ್ಲಾ ಕಾದಂಬರಿಗಳ ಮೊದಲ ನೋಟ ಎಲ್ಲಿಂದಲೋ ಪ್ರಾರಂಭವಾಗುತ್ತದೆ. ಅಂದರೆ ಕಥೆಯು ಮುಖ್ಯ ವಿಚಾರಕ್ಕೆ ಬರಬೇಕಾದರೆ ಮೊದಲು ಕಲ್ಪನೆ ಕಟ್ಟಿ ಎಲ್ಲಾ ಪೂರ್ವ ಹಿನ್ನೆಲೆಗೆ ಬರಬೇಕಾಗುವ ಕೆಲಸವನ್ನು ಪ್ರತಿಯೊಂದು ಕಾದಂಬರಿಯಲ್ಲಿ ಚಾಚೂ ತಪ್ಪದೇ ಈ ಕೆಲಸವನ್ನು ಕಾದಂಬರಿಯಲ್ಲಿ ಮಾಡಿದ್ದಾರೆ. 'ಭಯಂಕರ ಭೈರಾಗಿ' ಕಾದಂಬರಿಯಲ್ಲಿ ಸೊಗಸಾಗಿ ಕಲ್ಪಿಸಿಕೊಂಡು ಪ್ರಸ್ತುತ ಜಗತ್ತಿನ ವಿವರಣೆಯೊಂದಿಗೆ ತಿಳಿಸಿದ್ದಾರೆ. ಕಾಲ್ಪನಿಕತೆಗೆ ಒಂದು ಕಾದಂಬರಿಯ ದೃಶ್ಯವು ಈ ರೀತಿ ಇದೆ.

(ಪುಟ ೨೫ ಭಯಂಕರ ಭೈರಾಗಿ) ಪತ್ತೇದಾರರೆ! ಮರದಲ್ಲಿ ಕಾಣುವ ದೃಶ್ಯವನ್ನು ನೋಡಿ ಎಂದನು. ಇಬ್ಬರೂ ತಲೆಯೆತ್ತಿ ನೋಡಲು ಮರದಲ್ಲಿ ಪುರುಷ ದೇಹವೊಂದು ನೇತಾಡುತ್ತಿತ್ತು. ರಾಮನಾಥನು ಅದನ್ನು ನೋಡುತ್ತಲೇ ಭಯಾಶ್ಚರ್ಯ ಚಕಿತನಾದನು.: "ಅಬ್ಬಾ!" ಎಂಬ ಶಬ್ದವು ಅರಿವಿಲ್ಲದೆ ಅವನ ಬಾಯಿಂದ ಹೊರಟಿತು.

ಈ ಮೇಲಿನ ಪ್ರಸಂಗ ಕಾಲ್ಪನಿಕತೆ ಕಟ್ಟುವುದಕ್ಕೆ ಹೆಚ್ಚು ನೈಜತೆ ಒಳಗೊಂಡಿದೆ. ಇದರಿಂದ ಓದುಗರ ಮನಸ್ಸಿನಲ್ಲಿ ನಡೆಯುವ ಸಿನಿಮಾಕ್ಕೆ ಇದು ಕನ್ನಡಿ ಹಿಡಿದಂತೆ ಇದೆ. ಅಲ್ಲದೆ ಈ ಕೆಳಗಿನ ಪ್ರಸಂಗವನ್ನು ನೋಡಿ "ಇದೇನು ! ಇಲ್ಲಿರುವೆನು" ಎಂದು ನೆನೆಸಿಕೊಂಡು ಏಳಲು ಯತ್ನಿಸಿದನು. ಕೈಕಾಲುಗಳು ಬಂಧಿಸಲ್ಪಟ್ಟಿದ್ದವು. ವಿಸ್ಮಯವಾಗಿ ಬಿಡಿಸಿಕೊಳ್ಳಲು ಒದ್ದಾಡಿದನು. ಸಾಧ್ಯವಾಗಲಿಲ್ಲ. ಸುತ್ತಮುತ್ತ ನೋಡಲು ಯಾರೂ ಕಾಣಿಸಲಿಲ್ಲ. ತಾನೊಂದು ಕಾಡಿನ ಮಧ್ಯದಲ್ಲಿರುವೆನೆಂದು ಅರಿವಾಯಿತು. ಹಿಂದಿನ ದಿವಸ ರಾತ್ರಿ ನಡೆದ ಘಟನೆಯು ನೆನಪಿಗೆ ಬಂದು ಅವರೇ ನನ್ನನ್ನು ಇಲ್ಲಿಗೆ ಕರೆತಂದಿರುವರೆಂದು ಭಾವಿಸಿಕೊಂಡನು.

ಈ ರೀತಿಯಾದಂತಹ ಪ್ರಸಂಗ ದೃಶ್ಯ ನಡೆಯುವ ಸುತ್ತಲಿನ ವಾತಾವರಣ, ನಡೆಯುವ ಪ್ರಸಂಗ ಮೊದಲಾದವುಗಳ ನಡುವೆ ಒಂದಕ್ಕೊಂದು ಹೇಗೆ ಸಮ್ಮಿಳಿತಗೊಂಡಿದೆಂಬುದನ್ನು ತಿಳಿದು ಬರುತ್ತದೆ. ಕಾದಂಬರಿಕಾರ ತನ್ನ ವಿಹಾರ ಲೋಕಕ್ಕೆ ಸಹೃದಯನನ್ನು ಲೀಲಾಜಾಲವಾಗಿ ಕರೆದುಕೊಂಡು ಹೋಗುವುದೇ ಕಾಲ್ಪನಿಕತೆ.

ಪ್ರಮುಖಾಂಶ:

ಕಾದಂಬರಿಕಾರರು ಪ್ರಮುಖವಾಗಿ ಕೋರ್ಟ್ ಪ್ರಸಂಗ ನಡೆಯುವ ಸನ್ನಿವೇಶ, ಸ್ಥಳಗಳಲ್ಲಿ ಏಕಾಂಗಿಯಾಗಿ ತಾವೊಬ್ಬರು ಇದ್ದಾಗ ಅನೇಕ ಮಂದಿ ಮಾತನಾಡಿಕೊಳ್ಳುವುದನ್ನು

ದೂರದಿಂದಲೇ ಕುಳಿತು ಆಲಿಸಿ, ಅದಕ್ಕೆ ತಕ್ಕದಾದ ಕಥೆಗಳನ್ನು ಜೋಡಿಸಿ ಕಾಲ್ಪನಿಕತೆಯಿಂದ ಕಟ್ಟುತ್ತಿದ್ದರು ಆದಕಾರಣ ಕಾಲ್ಪನಿಕತೆ

ಕಾದಂಬರಿಗಳೆಲ್ಲದರಲ್ಲಿಯೂ ಹೆಚ್ಚು ಪ್ರಭಾವದಿಂದ ಕೂಡಿರುತ್ತದೆ ಎನ್.ನರಸಿಂಹಯ್ಯ ನವರ ಕಾದಂಬರಿಗಳಲ್ಲಿ ಬರುವ ಕಾಲ್ಪನಿಕತೆಯ ರೀತಿಗೂ ಇತರ ಪತ್ತೇದಾರಿ ಕಾದಂಬರಿಕಾರರ ನಡುವೆ ಕಾಲ್ಪನಿಕತೆ ಇರುವ ರೀತಿ ಲೇಖಕರಾದ ಬಿ.ಎಸ್. ಕೃಷ್ಣಮೂರ್ತಿ ತನ್ನ ಕಾದಂಬರಿಯಲ್ಲಿನ ಕಾಲ್ಪನಿಕ ದೃಶ್ಯವನ್ನು ಈ ಕೆಳಗಿನಂತೆ ಇದೆ.

"ಶಾಂತಿನಗರದಲ್ಲಿ ಜನಸಂದಣಿ ಇದ್ದ ಒಂದು ರಸ್ತೆ"[೧]

"ಅಲ್ಲಿ ನೋಡಿ, ಒಂದು ಸುಂದರ ಗೃಹ! ದೂರದ ನೋಟಕ್ಕೆ ಕಲಾತ್ಮಕವಾಗಿ ಕಾಣುತ್ತಿರುವುದಲ್ಲವೇ? ಬಹುಶಃ ಗೃಹದ ಒಳಗೂ ಅಂದ-ಚೆಂದದ, ಅತ್ಯಾಧುನಿಕ ವಸ್ತುಗಳಿಂದಲೂ ಅಲಂಕರಿಸಲ್ಪಟ್ಟಿರಬೇಕೆಂದು ಊಹಿಸಬಹುದಲ್ಲವೇ? ಇದ್ದರೂ ಇರಬಹುದು, ಏನಡ್ಡಿ?"

"ಜನರ ಗಡಿಬಿಡಿ ಬಹಳ!"

ಈ ಮೇಲಿನ ಇವರ ಕಾದಂಬರಿಯನ್ನು ಗಮನಿಸಿದಾಗ ಕಾಲ್ಪನಿಕತೆಯ ಸನ್ನಿವೇಶದ ರೀತಿ ಕೂಡಾ ವ್ಯಕ್ತಗೊಂಡಿದೆ. ಆದರೆ ಎನ್.ನರಸಿಂಹಯ್ಯನವರ ಕಾದಂಬರಿಗಳಲ್ಲಿ ಭಯದ ವಾತಾವರಣದಿಂದ ಕೂಡಿರುವ ಕಾಲ್ಪನಿಕತೆಯು ಕಂಡು ಬರುತ್ತದೆ. ಪ್ರತಿಯೊಂದು ಪತ್ತೇದಾರಿ ಕಾದಂಬರಿಯ ಮೂಲ ಕಾಲ್ಪನಿಕತೆ. ಇಡೀ ಕಾದಂಬರಿಯ ಎಳೆ-ಎಳೆಯಾಗಿ ಎಳೆದು ಒಂದು ಸುಂದರವಾದ ಕಾದಂಬರಿ ರೂಪುಗೊಳ್ಳಲು ಕಾಲ್ಪನಿಕತೆ ಅಗತ್ಯ ಅತ್ಯಗತ್ಯ.

ಎನ್.ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿಗಳಲ್ಲಿ ಹೆಣ್ಣಿನ ಬದುಕನ್ನು ಕುರಿತ ಕಾದಂಬರಿಗಳೇ ಹೆಚ್ಚು. ಹೆಣ್ಣಿನ ವಿಚಾರ ಬಂದಾಗ ಅವರು ದೇಹ ಸಿರಿ, ಲೈಂಗಿಕತೆ, ಅವಳ ಹಾವ-ಭಾವ, ನೈಜತೆಯ ರೂಪವನ್ನು ಅಚ್ಚು ತೆಗೆದಂತೆ ಕಾಲ್ಪನಿಕತೆಯಿಂದ ಕಾದಂಬರಿಯನ್ನು ವಿವರಿಸಲಾಗಿದೆ.

'ಬೀದಿಯ ಪಾರಿವಾಳ' ಕಾದಂಬರಿಯಲ್ಲಿ ಬರುವ ಲೈಂಗಿಕ ಸನ್ನಿವೇಶದ ಕಾಲ್ಪನಿಕ ದೃಶ್ಯ ಈ ರೀತಿ ಇದೆ. "ರಾಜಾಮಣಿಯನ್ನು ತನ್ನ ಬಾಹುಗಳಲ್ಲಿ ಬಂಧಿಸಿ ಬಿಡಿಸಿಕೊಳ್ಳಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ." ಇಂತಹ ಸನ್ನಿವೇಶಗಳು ಕಾಮಶಾಸ್ತ್ರದ ಕತೆಯಂತೆ ಇಡೀ

ಕಾದಂಬರಿಯನ್ನು ಹೆಣೆಯಲಾಗಿದೆ. ಅಲ್ಲದೆ ಹೆಣ್ಣಿಗೆ ಆಗುವ ದೌರ್ಜನ್ಯವನ್ನು ಮನ ಕರಗುವಂತೆ ಬಿಂಬಿಸಿದ್ದಾರೆ. ತನ್ನ ಕಾದಂಬರಿಯ ಮಧ್ಯದಲ್ಲಿ ದಾಸರ ಪದವನ್ನು ಊವಾಚಿಸಿದ್ದಾರೆ.

ಸತಿಪತಿಗಳೊಂದಾದ ಭಕ್ತಿ
ಹಿತವಾಗಿಪ್ಪುದು ಶಿವಗಂಗೆ
ಪತಿ ಪತಿಗಳೊಂದಾಗದ ಭಕ್ತಿ
ಅಮೃತದೊಳು ವಿಷವ ಬೆರಸಿದಂತೆ ಕಾಣಾ ರಾಮನಾಥ

(ದೇವರ ದಾಸಿಮಯ್ಯ)

ಹೆಣ್ಣಿನ ಮಾತೃ ಸ್ಥಾನವನ್ನು ಅರಿಯದ ಕೆಲವರು ಸಮಾಜದ ನೀಚ ದೃಷ್ಟಿಯಲ್ಲಿ ಹೆಣ್ಣನ್ನು ನೋಡುವ ರೀತಿಯನ್ನು ಟೀಕಿಸಿದ್ದಾರೆ. ಹೊನ್ನಮ್ಮಳ ಪದ್ಯವನ್ನು ಹೇಳುತ್ತಾ,

ಪೆಣ್ಣಲ್ಲವೇ ತಮ್ಮನ್ನೆಲ್ಲ ಪಡೆದ ತಾಯಿ।
ಪೆಣ್ಣಲ್ಲವೇ ಪೊರೆದವಳು॥
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು।
ಕಣ್ಣು ಕಾಣದ ಗಾವಿಲರು.

ಹೀಗೆ ಪದ್ಯ, ವಚನ, ದಾಸರಪದ, ನಾಣ್ಣುಡಿ, ನುಡಿಗಟ್ಟು ಮೊದಲಾದವುಗಳನ್ನು ತಿಳಿಸಿ ಕಾದಂಬರಿಯ ಕಾಲ್ಪನಿಕ ಲೋಕಕ್ಕೆ ಮತ್ತಷ್ಟು ಮೆರಗನ್ನು ಉಣಬಡಿಸಿದ್ದಾರೆ.

೪.೨ ರಹಸ್ಯ ಭೇದಿಸುವಿಕೆ

ಪ್ರತಿಯೊಂದು ಕಾದಂಬರಿಯಲ್ಲಿಯೂ ಪತ್ತೇದಾರನು ಚಾಣಾಕ್ಷತೆಯಿಂದ ರಹಸ್ಯ ಭೇದಿಸುವಿಕೆಯ ಪ್ರಸಂಗವಿದೆ. ಸಾಮಾನ್ಯವಾಗಿ ರಹಸ್ಯ ಬೇಧಿಸುವುದು ಕೇವಲ ಸುಲಭದ ಮಾತಲ್ಲ. ಇದನ್ನು ಭೇಧಿಸ ಹೊರಡುವವನಿಗೆ ಮುಂದೆ ಅನೇಕ ಅಡೆ-ತಡೆಗಳಲ್ಲದೆ ಪ್ರಾಣಕ್ಕೆ ಸಂಚಕಾರ ತಲೆದೋರುವುದು ಕಾದಂಬರಿಗಳಲ್ಲಿ ವ್ಯಕ್ತವಾದ ಅಂಶವಾಗಿದೆ. ಒಂದು ಪ್ರಕರಣ ಅನೇಕ ವಿಚಾರಗಳೊಂದಿಗೆ ಸೇರಿಕೊಂಡ ಕಲ್ಲು ಮಿಶ್ರಿತ ಕಡಲೆಯಂತಾಗಿರುತ್ತದೆ. ಹೇಗೆ ಕಲ್ಲು ಕಡಲೆಯನ್ನು ಬೇರೆ ಬೇರೆ ಮಾಡಬೇಕಾದರೆ ಎದುರಾಗುವ ಎಡರು-ತೊಡರು ಇರುತ್ತವೆಯೋ ಹಾಗೆಯೇ ಕಾದಂಬರಿಗಳಲ್ಲಿ ಸಮಸ್ಯಾತ್ಮಕ ಸನ್ನಿವೇಶಗಳನ್ನು ಅತ್ಯಂತ ಕುಶಲಮತಿಯಂತೆ ವರ್ತಿಸಿ ಅದನ್ನು ಸಾಧಿಸುವುದೇ ಪತ್ತೇದಾರನ ಪ್ರಮುಖ ಕೆಲಸವಾಗಿರುತ್ತದೆ.

ರಹಸ್ಯ ಬೇಧಿಸುವಿಕೆಯನ್ನು ಸುಲಲಿತವಾಗಿ ಕಾದಂಬರಿಕಾರರು ಪ್ರತಿಯೊಂದು ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ. ಕೆಲವು ಬಾರಿ ರಹಸ್ಯ ಭೇದಿಸುವಾಗ ನಡೆದ ಸನ್ನಿವೇಶಗಳು

ಉದಾ: ಭಯಂಕರ ಭೈರಾಗಿ, ಸ್ಮಶಾನ ಭೈರಾಗಿ, ಮೋಹಿನಿ ವಿಲಾಸ ಕಾದಂಬರಿಗಳಲ್ಲಿ ಅನೇಕ ಸಂಧಿಗ್ಧ ಸನ್ನಿವೇಶಗಳು ಪತ್ತೇದಾರನಿಗೆ ಎದುರಾಗಿ ಕೊಲೆಗಾರ, ಡಕಾಯಿತರು, ನುಣುಚಿಕೊಳ್ಳುವ ಪ್ರಸಂಗಗಳು ಬಂದಾಗ ಅಸಹಾಯಕನಾದ ಪತ್ತೇದಾರ ಕೊನೆಗೆ ಯಾವುದೋ ಒಂದು ಬಲವಾದ ಸಾಕ್ಷ್ಯಾಧಾರಗಳನ್ನು ಪತ್ತೆಮಾಡಿ ರಹಸ್ಯವನ್ನು ಸರಳವಾಗಿ ಭೇಧಿಸುತ್ತಾನೆ.

ಒಂದು ಪ್ರಕರಣವನ್ನು ಭೇದಿಸುವಾಗ ಪತ್ತೇದಾರ ಕೊನೆಗೆ ತಾನೇ ಗೆಲ್ಲುವಂತೆ ಕಾದಂಬರಿಕಾರರು ನೋಡಿಕೊಂಡಿದ್ದಾರೆ. "ಕುತೂಹಲವೇ ಸಂಶೋಧನೆಯ ಮೂಲ" ಎನ್ನುವಂತೆ ಈ ಪ್ರಕರಣಗಳನ್ನು ಭೇಧಿಸುವಾಗ ಕೆಲವು ವಿಚಾರಗಳನ್ನು ಹೊಸದಾಗಿ ತಿಳಿದುಕೊಳ್ಳಬಹುದಾಗಿದೆ.

ಕೊಲೆ ಪ್ರಕರಣ, ಅತ್ಯಾಚಾರ ಪ್ರಕರಣ, ಮೋಸದ ಪ್ರಕರಣ, ದರೋಡೆ ಪ್ರಕರಣ ಮುಂತಾದವುಗಳನ್ನು ಭೇದಿಸುವಾಗ ಎದುರಾಗುವ ಗೊಂದಲಗಳನ್ನು ತನ್ನ ಮನದಲ್ಲಿಯೇ ವಿಶ್ಲೇಷಿಸಿ ಆಮೇಲೆ ಉತ್ತರ ಕಂಡುಕೊಂಡ ರೀತಿ ಕಾದಂಬರಿಗಳಲ್ಲಿ ಯಕ್ಷ ಪ್ರಶ್ನೆಯಂತೆ ಕಾಣುತ್ತದೆ. ಪತ್ತೇದಾರಿಯ ಬುದ್ಧಿವಂತಿಕೆ ಇಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ಕಲೆ ಹಾಕಿ ಭೇದಿಸುವಿಕೆಯನ್ನು ಎಲ್ಲರು ಹೊಗಳುವಂತೆ ಮಾಡುವ ಸನ್ನಿವೇಶ ಕಾದಂಬರಿಯಲ್ಲಿ ವ್ಯಕ್ತಪಡಿಸಿದ್ದಾರೆ. ಭಾನಾಮತಿ ಪ್ರಸಂಗಗಳಲ್ಲಿ ಪತ್ತೇದಾರನ ಮನಸ್ಸು ಹುಚ್ಚು ಕೋಡಿಯಂತೆ ಹರಿದುಹೋಗುತ್ತದೆ. ಆನಂತರ ಕಂಡುಕೊಂಡ ರೀತಿ ಭೇದಿಸುವಿಕೆ ತಂತ್ರ, ಮನೋಜ್ಞವಾಗಿ ಕಾದಂಬರಿಗಳಲ್ಲಿ ಬರುವಂತೆ ಕಾಯ್ದುಕೊಂಡಿದ್ದಾರೆ. 'ಭಯಂಕರ ಭೈರಾಗಿ' ಕಾದಂಬರಿಯಲ್ಲಿ ಸನ್ಯಾಸಿ ಭಯಂಕರವಾದ ಮೋಸತನವನ್ನು ಹೊರಹಾಕಿ ಬೇಧಿಸುವುದು ರಹಸ್ಯ ಬೇಧಿಸುವಿಕೆ ಪ್ರಮುಖ ಉದಾಹರಣೆಯಾಗಿದೆ.

ಪತ್ತೇದಾರನೇ ಪ್ರತಿ ಕಾದಂಬರಿ ಪ್ರಮುಖ ನಾಯಕನಾಗಿರುತ್ತಾನೆ. ಸಮಾಜದಲ್ಲಿ ನಡೆದ ಸಾಮಾಜಿಕ ಕೃತ್ಯಗಳನ್ನು ಪತ್ತೇ ಹಚ್ಚುವುದೇ ಪತ್ತೇದಾರನ ಕಾರ್ಯ ಎನ್ನುವಂತೆ ಕಾದಂಬರಿಯಲ್ಲಿ ಬಿಂಬಿಸಲಾಗಿದೆ. ಭಾನಾಮತಿ ಪ್ರಸಂಗ ಬಂದಾಗ ಪತ್ತೇದಾರನಿಗೆ ಮಾಯೆಯನ್ನುಂಟು ಮಾಡಿ ತೊಂದರೆ ಗುರಿ ಮಾಡಿದ ಸಂದರ್ಭವನ್ನು ಪಂಜುರ್ಲಿ ಭೂತ ಕಾದಂಬರಿಯಲ್ಲಿ ಕಾಣಬಹುದಾಗಿದೆ. ಇಂತಹ ಸಂದರ್ಭದಲ್ಲಿ ಪತ್ತೇದಾರನ ಹಣೆಬರಹ ಘಟ್ಟಿಯಾದುದು ಎನ್ನುವ ಧಾರ್ಮಿಕ ನಂಬಿಕೆಯನ್ನು ಮಂಡಿಸಿದ್ದಾರೆ. ಯಾವುದೇ ಪ್ರಕರಣವನ್ನು ವ್ಯವಸ್ಥಿತವಾಗಿ ಭೇದಿಸಬೇಕಾದರೆ ಪ್ರಮುಖವಾಗಿ ಪತ್ತೇದಾರನ ಬುದ್ಧಿವಂತಿಕೆಯೇ ಮುಖ್ಯ

ಕಾರಣವೆಂದು ಹೇಳಲಾಗಿದೆ. "ಶಕ್ತಿಗಿಂತ ಯುಕ್ತಿ ಮೇಲು" ಎನ್ನುವ ನಾಣ್ಣುಡಿಯನ್ನು ಪತ್ತೇದಾರನಿಗೆ ಅನ್ವಯಿಸುವುದನ್ನು ನೋಡಬಹುದು.

೪.೩ ಪತ್ತೇದಾರನ ಚಾಣಾಕ್ಷತೆ

ಪತ್ತೇದಾರಿ ಪುರುಷೋತ್ತಮ, ಪತ್ತೇದಾರಿ ಮಧುಸೂದನ, ಪತ್ತೇದಾರಿ ಆರಿಂಜಕ, ಪತ್ತೇದಾರಿ ವಿಕ್ರಮರಾಯ ಈ ಎಲ್ಲಾ ಹೆಸರುಗಳು ಪತ್ತೇದಾರಿ ಕಾದಂಬರಿಗಳಲ್ಲಿ ಬರುವ ಪತ್ತೇದಾರನ ಹೆಸರುಗಳಾಗಿವೆ. ಪ್ರತಿಯೊಂದು ಕಾದಂಬರಿಗಳಲ್ಲಿ ಪತ್ತೆದಾರನೇ ಪ್ರಮುಖ ಪಾತ್ರಧಾರಿ. ಇವನು ತನ್ನ ಬುದ್ಧಿವಂತಿಕೆಯಿಂದ ಪ್ರತಿ ಪ್ರಕರಣವನ್ನು ಕೂಲಂಕಷವಾಗಿ ಬೇಧಿಸುವುದನ್ನು ಪ್ರತಿ ಕಾದಂಬರಿಗಳಲ್ಲಿ ಎಳೆ–ಎಳೆಯಾಗಿ ನೋಡುವ ಪತ್ತೇದಾರ ತನ್ನ ಚಾಣಾಕ್ಷತೆಯನ್ನು ತೋರಿಸುತ್ತಾನೆ. ಎಂತಹ ಕಠಿಣ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸುವ ಗುಣವನ್ನು ಪತ್ತೇದಾರನಿಗೆ ಕಾದಂಬರಿಗಳಲ್ಲಿ ಕಾದಂಬರಿಕಾರರು ತೋರಿಸಿದ್ದಾರೆ. ಪತ್ತೇದಾರಿಯ ಪತ್ತೇದಾರ ನಿಕಟ ಸಂಪರ್ಕವನ್ನು ಹೊಂದಿರುತ್ತಾರೆ. ಪತ್ತೇದಾರಿಯ ಹಾದಿಯ ದೂರದಲ್ಲಿ ಕಾಣಿಸಿಕೊಳ್ಳುವ ಅನೇಕ ಸಮಸ್ಯೆಗಳನ್ನು ಅನುಭವಿಸಿ ತಾನೂ ತೊಂದರೆಗೆ ಸಿಲುಕಿ, ಎದ್ದು ಬರುವ ವಾತಾವರಣವನ್ನು ಈ ಕಾದಂಬರಿಗಳಲ್ಲಿ ಕಾಣಬಹುದಾಗಿದೆ. ಪತ್ತೇದಾರ ಎಷ್ಟೇ ಕುಶಲಮತಿಯಾಗಿದ್ದರೂ, ಅತಿ ಬುದ್ಧಿವಂತನಾದರೂ, ಕೆಲವು ಸಂಬಂಧಗಳಲ್ಲಿ ಎಡಗುತ್ತಾ ನಂತರ ತೆವಳಿಕೊಂಡು ಹೇಳುವ ಸನ್ನಿವೇಶವನ್ನು ಎಲ್ಲಾ ಕಾದಂಬರಿಗಳಲ್ಲಿ ತಿಳಿಸಹೊರಟಿದ್ದಾರೆ.

೪.೪ ಮಾನವೀಯ ಸಂಬಂಧ ಮತ್ತು ಅಮಾನವೀಯತೆ

ಕಾದಂಬರಿಗಳಲ್ಲಿ ಮಾನವೀಯತೆ ಸಂಬಂಧ ಹೇಗೆ ಸಮ್ಮಿಳಿತಗೊಂಡಿದೆಂಬುದನ್ನು ನೋಡಬಹುದು. ಏಕೆಂದರೆ ಪ್ರಸ್ತುತ ಜಗತ್ತಿನಲ್ಲಿ ಮಾನವೀಯ ಸಂಬಂಧ ಅಲಸಿಕೊಂಡಿದೆ. ಕಾದಂಬರಿಗಳಲ್ಲಿ ಬರುವ ಪಾತ್ರಧಾರಿಗಳ ನಡುವಿನ ಸಂಬಂಧವನ್ನು ಸಾಮಾಜಿಕವಾಗಿ ಬೆರೆತುಕೊಂಡಿರುವುದು ಇಲ್ಲ, ಮನುಷ್ಯ–ಮನುಷ್ಯರ ನಡುವಿನ ಮಾನವೀಯತೆ ಕಡಿಮೆಯಾಗಿದೆ. ಅಲ್ಲದೆ ಜನರಲ್ಲಿ ಮೋಸ, ದಗಾ, ವಂಚನೆ, ಅಪನಂಬಿಕೆ, ಅಸೂಯೆ, ಅಸತ್ಯ, ಅನೀತಿ, ಅಧರ್ಮ ಇವೆಲ್ಲವೂ ಸಮಾಜದಲ್ಲಿ ತಾಂಡವವಾಡುತ್ತಿವೆ. ಜನರು ನಿರ್ದಾಕ್ಷಿಣ್ಯವಾಗಿ ಕೊಲೆ, ದರೋಡೆ, ಅತ್ಯಾಚಾರ ಅಮಾನವೀಯತೆಯಿಂದ, ನಡೆಯುತ್ತಿರುವುದನ್ನು ನೇರವಾಗಿ ಕಾದಂಬರಿಗಳಲ್ಲಿ ಹೇಳಹೊರಟಿದ್ದಾರೆ. ಕೆರಳಿದ ಕೇಸರಿ, ಪ್ರತಿಹಿಂಸೆ ಪಿಶಾಚಿ, ಎಂಟು ಕೊಲೆಯ ಭಂಟ, ಆಕಸ್ಮಿಕ ಅಪರಾಧ ಈ ಕಾದಂಬರಿಗಳಲ್ಲಿ ದೌರ್ಜನ್ಯದ ಅಂಶ, ಅಲಸಿದ

ಅಮಾನವೀಯತೆಯನ್ನು ತಿಳಿಸಿದ್ದಾರೆ. ಕಾದಂಬರಿಗಳಲ್ಲಿ ಕೆಲವು ಬಾರಿಗೆ ಹಿಂಸೆ ನೇರವಾಗಿ ನಡೆದಿರುವುದನ್ನು ಯಥಾವತ್ತಾಗಿ ತಿಳಿಸಹೊರಟಿರುವುದರಿಂದ ಓದುಗರ ಮನಸ್ಸನ್ನು ಇದು ಕೆರಳಿಸುವ ಪ್ರಸಂಗವು ಕಾಣಬಹುದಾಗಿದೆ. ಮಾನವರು ಸಂಪೂರ್ಣವಾಗಿ ಸಂಶಯಾತ್ಮಕವಾಗಿ ನೋಡುವ ಕೆಲಸ ಕಾದಂಬರಿಗಳಲ್ಲಿ ಆಗಿದೆ. ಎಷ್ಟೋ ಬಾರಿ ನೇರವಾಗಿ ಪತ್ತೇದಾರ ಕೊಲೆಗಡುಕರಿಗೆ ಶಿಕ್ಷೆಯನ್ನು ತಾನೇ ನೀಡ ಹೊರಟಿದ್ದಾನೆ. ಕೆಲವು ಬಾರಿ ಕಥೆಯಲ್ಲಿ ಬರುವ ನಾಯಕನೇ ಅಂತಿಮ ತೀರ್ಮಾನ ಕೈಗೊಳ್ಳುವುದು ಪೂರ್ಣ ಅಧಿಕಾರವನ್ನು ಕೊಟ್ಟ ಉದಾಹರಣೆ ಕಾದಂಬರಿಯಲ್ಲಿ ವ್ಯಕ್ತವಾಗಿದೆ. ಆಗ ಮಾನವೀಯತೆಯು ಹಾಳಾಗುತ್ತದೆ. ಅದನ್ನು ಈ ರೀತಿ ಹೇಳಿದ್ದಾರೆ.

ಕೆ.ಷರೀಫಾ ಕವಿ ಮಾನವೀಯತೆ ಪದ್ಯದಲ್ಲಿ

"ಮಾನವೀಯತೆ ಏನಾಗಿದೆ ನಿನಗೆ?
ಹೀಗೇಕೆ ನಡುಬೀದಿಯಲ್ಲಿ ಮೌನವಾಗಿ ಮಲಗಿರುವೆ?"

ಈ ಮಾತು ಅಕ್ಷರಶಃ ಸತ್ಯವಾದ ಸನ್ನಿವೇಶವನ್ನು ಕಾದಂಬರಿಯಲ್ಲಿ ಕಾಣಬಹುದಾಗಿದೆ. 'ಬೀದಿಯ ಪಾರಿವಾಳ' ಪತ್ತೇದಾರಿ ಕಾದಂಬರಿಯಲ್ಲಿ ಬರುವ ಸನ್ನಿವೇಶದ ಒಂದು ತುಣುಕು.

"ಕಲ್ಲು ಮರಗಳು ಕರಗುವಂತೆ ಬೇಡಿಕೊಂಡರೂ ಅವಳ ಪ್ರಾರ್ಥನೆಗೆ ಓಗೋಡದ ಕಾಮುಕ ಮುನಿಲಿಂಗಯ್ಯನು ಆಕೆಯ ಶೀಲವನ್ನು ತನ್ನ ದೇಹಕ್ಕೆ ಆಹಾರವಾಗಿ ಉಣಿಸಿ ಆಕೆಯನ್ನು ಕಲಂಕಿನಿಯನ್ನಾಗಿ ಮಾಡಿದ್ದಾನೆ. ಇಲ್ಲಿ ಹೆಣ್ಣು ತನ್ನ ಅಳಲನ್ನು ಎಷ್ಟೇ ತೋಡಿಕೊಂಡರೂ ಕಲ್ಲು ಹೃದಯಿಯಾದ ಗಂಡಸು ಕರಗದ ಸನ್ನಿವೇಶವನ್ನು ಕಾದಂಬರಿಕಾರರು ಮನಮುಟ್ಟುವಂತೆ ಚಿತ್ರಿಸಿದ್ದಾರೆ." ಮೋಹಿನಿ ವಿಲಾಸ' ಕಾದಂಬರಿಯಲ್ಲಿ ಮೋಹಿನಿಯನ್ನು ಪ್ರೀತಿಸಿದ ವ್ಯಕ್ತಿಯನ್ನು ಮೋಹಿನಿ ಸ್ವಲ್ಪವೂ ಕರುಣೆ ನೀಡದೆ ಅವನಿಂದ ಹಣವನ್ನು ಬರುವತನಕ ಜೀವಿಸಿ ನಂತರ ಅವನ ಕತ್ತು ಕೊಯ್ಯುವ ಕೆಲಸ ಮಾಡುವ ಸನ್ನಿವೇಶ ಹೃದಯಂಗಮವಾಗಿ ಹೆಣೆದಿದ್ದಾರೆ.

ಈ ಮೇಲಿನ ಅಂಶಗಳು ಕಾದಂಬರಿಯಲ್ಲಿ ವ್ಯಕ್ತವಾಗುವ ಅಮಾನವೀಯ ಸನ್ನಿವೇಶವನ್ನು ಹೊರಹಾಕುತ್ತವೆ.

೪.೫ ಕಾದಂಬರಿಯ ಪಾತ್ರ ನಿರ್ಮಾಣ

ಇವರ ಕಾದಂಬರಿಗಳಲ್ಲಿ ಬರುವ ಸಾಮಾನ್ಯ ಪಾತ್ರಧಾರಿಗಳೆಂದರೆ,

೧) ಪತ್ತೇದಾರ

೨) ಸಬ್‌ಇನ್ಸ್‌ಪೆಕ್ಟರ್

೩) ಖಳನಾಯಕರ ದಂಡು

೪) ಮುಖ್ಯ ಖಳನಾಯಕ / ಖಳನಾಯಕಿ

ಇವರೆಲ್ಲರು ಪ್ರತಿ ಕಾದಂಬರಿಯ ಜೀವಾಳ. ಇವರೇ ಕಾದಂಬರಿಗಳ ಚಲನಶೀಲ ಮಣಿಗಳು. ಕಥಾ ಶೈಲಿಯೆಂಬ ಮೈದಾನದಲ್ಲಿ ಆಟವಾಡುವ ಆಟಗಾರರಾಗಿರುತ್ತಾರೆ. ಒಂದು ಕಥೆಯಲ್ಲಿ ನಿರಂತರ ಜೀವ ತುಂಬುವ ಕೆಲಸವನ್ನು ಪಾತ್ರ ನಿರ್ಮಾಣದಲ್ಲಿ ಕಾಣಬಹುದಾಗಿದೆ. ಪತ್ತೇದಾರಿ ಕಾದಂಬರಿಕಾರರಾದ ಎನ್. ನರಸಿಂಹಯ್ಯನವರು ಈ ಕೆಲಸವನ್ನು ತುಂಬಾ ಅಚ್ಚು-ಕಟ್ಟಾಗಿ ಮಾಡಿದ್ದಾರೆ. ಕೆಲವು ಬಾರಿ ಪತ್ತೇದಾರನಿಗೆ ಪೊಲೀಸರು ಮಾಹಿತಿಯನ್ನು ನೀಡಿದರೂ ಅದರಲ್ಲಿ ಗೊಂದಲ ಉಂಟಾಗುತ್ತದೆ. ಆದರೆ ಇನ್ನೂ ಕೆಲವು ಬಾರಿ ಪೊಲೀಸರ ಸಮಸ್ಯೆಗಳಿಗೆ ತುಲನಾತ್ಮಕವಾಗಿ, ವಿಶ್ಲೇಷಣಾತ್ಮಕವಾಗಿ, ಉತ್ತರ ನೀಡುವವರು ಪತ್ತೇದಾರರಾಗಿರುತ್ತಾರೆ. ಪಾತ್ರ ನಿರ್ಮಾಣದ ಕೆಲಸದಲ್ಲಿ ಕಾದಂಬರಿಕಾರರು ತುಂಬಾ ನಾಜೂಕಾದ ಭಾವಗಳನ್ನು ತೋರಿಸುವುದಲ್ಲದೆ ಪತ್ತೇದಾರಿ ಕಾದಂಬರಿ ಪ್ರತಿಯೊಂದು ದೃಶ್ಯವನ್ನು ಹೆಣೆಯಬೇಕಾದರೆ ಪಾತ್ರಗಳನ್ನು ಪೋಣಿಸಬೇಕಾದುದು ತುಂಬಾ ವ್ಯವಸ್ಥಿತವಾದ ಕೆಲಸವಾಗಬೇಕು. ಆಗ ಮಾತ್ರ ಪಾತ್ರ ನಿರ್ಮಾಣಕ್ಕೆ ಅರ್ಥ ತುಂಬಾ ಸ್ವಾರಸ್ಯಕರವಾಗುವಂತೆ ಮೂಡುತ್ತದೆ. ಎಷ್ಟೇ ಕಷ್ಟದ ಪರಿಸ್ಥಿತಿಯನ್ನು ನಿರೂಪಿಸುವಾಗ, ಪಾತ್ರಗಳ ಪ್ರಾಮುಖ್ಯತೆಯನ್ನು ಲೀಲಾಜಾಲವಾಗಿ ಕಾದಂಬರಿಕಾರರು ಮಾಡಿದ್ದಾರೆ.

ಮೊದಲೇ ಕಾದಂಬರಿಯು ಕಾಲ್ಪನಿಕತೆಯ ಸೌಧದಲ್ಲಿ ನಿರ್ಮಾಣವಾಗುವ ಕಟ್ಟಡದ ಪ್ರತಿ ಪಿಲ್ಲರ್‌ಗಳೇ ಪಾತ್ರಧಾರಿಗಳಾಗಿರುತ್ತಾರೆ. ಪಾತ್ರ ನಿರ್ಮಿಸುವಾಗ ಪಾತ್ರದಾರಿಗಳ ನಡುವಿನ ಸಂಬಂಧವನ್ನು ಚೆನ್ನಾಗಿ ಅರಿತಿರಬೇಕಾಗುತ್ತದೆ. ಅದಕ್ಕೋಸ್ಕರ ಸಮಾಜದಲ್ಲಿ ಘಟಿಸುವ ಎಲ್ಲಾ ವಿಚಾರ, ಅಲ್ಪಸ್ವಲ್ಪ ಮಾಹಿತಿ ಕಾದಂಬರಿಕಾರನಿಗೆ ಇದೆ. ಇವೆಲ್ಲ ಅಂಶಗಳನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡಿದ್ದರಿಂದಲೇ ನೂರಾರು ಕಾದಂಬರಿಗಳನ್ನು ರಚಿಸಿ ಇವುಗಳ ವ್ಯವಸ್ಥಿತ ಪಾತ್ರ ನಿರ್ಮಾಣ ಮಾಡಿ ಸೈ ಎನ್ನಿಸಿಕೊಂಡವರು ಎನ್. ನರಸಿಂಹಯ್ಯನವರು. ನಾಟಕ ಶೈಲಿಗೆ ಹೊಂದಿಕೆಯಾಗುವಂತೆಯೇ ಪಾತ್ರ ನಿರ್ಮಾಣ ಸೃಷ್ಟಿಸಿ ರಚಿಸಿದ್ದಾರೆ.

೪.೬ ಕಾದಂಬರಿಯಲ್ಲಿ ಸಾಮಾಜಿಕ ಮತ್ತು ವಾಸ್ತವಿಕ ಆವರಣ

ಇವರ ಪತ್ತೇದಾರಿ ಕಾದಂಬರಿಯಲ್ಲಿ ವ್ಯಕ್ತವಾಗುವ ಕಥಾ ಸನ್ನಿವೇಶ ಸಮಾಜ ಮುಖಿಯಾದುದು. ನಾವು ಇಲ್ಲಿ ನೋಡುವ ಪ್ರಮುಖ ವಿಷಯಾಂಶವೆಂದರೆ, ವಾಸ್ತವಿಕ/ನೈಜತೆಯ ಸನ್ನಿವೇಶ. ಏಕೆಂದರೆ ಕಾದಂಬರಿಕಾರರು ಸಾಮಾನ್ಯವಾಗಿ ಹೈಕೋರ್ಟ್ ಆವರಣದಲ್ಲಿ ಯಾವಾಗ ಇರುತ್ತಿದ್ದರಿಂದ ಅಲ್ಲಿನ ಜನರ ವಿಚಾರಗಳಿಗೆ ಕೈ ಹಾಕಿ ನಿಜಾಂಶಗಳನ್ನು ಪಡೆದು ನಂತರ ತಮ್ಮದೇ ಆದ ರೀತಿಯಲ್ಲಿ ಕಥೆ ಸೃಷ್ಟಿಸಿ ಕಾದಂಬರಿ ರಚಿಸುವುದು, ಅವರ ಕೆಲಸವಾಗಿತ್ತು.

ಆಕಸ್ಮಿಕ ಅಪರಾಧ, ಬೀದಿಯ ಪಾರಿವಾಳ, ಹೆಣ್ಣಿಗಾಗಿ ಹೆಣವಾದ, ದೊಡ್ಡಯ್ಯನ ದೊಣ್ಣೆ, ಇನ್ನೂ ಪ್ರಮುಖ ಕಾದಂಬರಿಗಳಲ್ಲಿ ಸಮಾಜದಲ್ಲಿ ನಡೆಯುವ ವೈಶ್ಯ ವೃತ್ತಿ, ಸಣ್ಣ ರೌಡಿಸಂ, ಹೆಣ್ಣಿನ ಆಸೆ ಮೊದಲಾದ ಅಂಶಗಳ ಬಗ್ಗೆ ಲೀಲಾಜಾಲವಾಗಿ ಸ್ಫುಟತ್ವದಂತೆ ಮೆರುಗುಕೊಟ್ಟು ತಿಳಿಸಿದ್ದಾರೆ.

ಕಾದಂಬರಿಕಾರರು ಹೆಣ್ಣಿನಿಂದ ನಡೆದ ಮೋಸದ ಜಾಲವನ್ನು 'ಮೋಹಿನಿ ವಿಲಾಸ' ಕಾದಂಬರಿಯಲ್ಲಿ ಹೇಳಿದ್ದಾರೆ. 'ಒಲಿದರೆ ನಾರಿ ಮುನಿದರೆ ಮಾರಿ' ಎನ್ನುವ ಮಾತಿನಂತೆ ಹೆಣ್ಣನ್ನು ಒಲಿಸಿಕೊಳ್ಳಲು ಪ್ರಯತ್ನ ಪಟ್ಟ ವ್ಯಕ್ತಿಗೆ ಆದ ಮೋಸವನ್ನು ಈ ಕಾದಂಬರಿಯಲ್ಲಿ ತಿಳಿಸಲಾಗಿದೆ. ಇಂತಹ ಪ್ರಕರಣಗಳು ವಾಸ್ತವಿಕ ನೆಲೆಗಟ್ಟಿನ ಮೇಲೆ ರಚಿಸಲಾಗಿದೆ. ಸಮಾಜದಲ್ಲಿ ನಡೆಯುವ ಎಲ್ಲಾ ಘಟನೆಗಳನ್ನು ಇವರ ಕಾದಂಬರಿಯಲ್ಲಿರುವ ವಸ್ತು ವಿನ್ಯಾಸವಾಗಿದೆ. ಸಾಮಾಜಿಕ ನ್ಯಾಯವನ್ನು ಕಾಪಾಡಿಕೊಳ್ಳಲು ವಿಫಲವಾದ ಅನೇಕ ಸಂದರ್ಭಗಳನ್ನು ಕಾದಂಬರಿಯಲ್ಲಿ ತಿಳಿಸಿದ್ದಾರೆ. ಹೆಣ್ಣನ್ನು ಕೇವಲ ಬೋಗದ ವಸ್ತುವಾಗಿ ಬಿಂಬಿಸುವ ವಸ್ತು-ವಿಷಯ ಇವರ ಕಾದಂಬರಿಯ ಹೆಚ್ಚು ವಿಷಯಗಳಾಗಿವೆ.

೪.೭ ಸತ್ಯದ ಹುಡುಕಾಟದ ವಿವಿಧ ಮಜಲುಗಳು:

ಇವರ ಕಾದಂಬರಿಗಳಲ್ಲಿ ಪತ್ತೇದಾರನ ಪ್ರಮುಖ ಜವಾಬ್ದಾರಿ ಸತ್ಯವನ್ನು ಪತ್ತೇ ಹಚ್ಚುವುದು. ಸತ್ಯವು ಅನೇಕ ಸುಳ್ಳುಗಳ ಸರಳಮಾಲೆಯಲ್ಲಿ ಊತುಹೋಗಿದ್ದರೆ ಅದನ್ನು ಒಂದೊಂದೇ ಎಳೆಯಾಗಿ ಬಿಡುಸುತ್ತಾ ಬಂದು ಕೊನೆಗೆ ನಿಜ ಸತ್ಯ ಅರಿವಾಗುವುದು. ಈ ಕೆಲಸವನ್ನು ಇವರೆಲ್ಲ ಕಾದಂಬರಿಗಳಲ್ಲಿ ತುಂಬಾ ಕುತೂಹಲಭರಿತವಾಗಿ ಮೂಡಿಬಂದಿದೆ. ಕೆಲವು ಬಾರಿ ಸತ್ಯ ಸುಳ್ಳಾಗಿ, ಮತ್ತೆ ಕೆಲವು ಬಾರಿ ಸುಳ್ಳು ಸತ್ಯಾಗಿ ಕಾಣಬಹುದಾಗಿದೆ. "ಮಂಗಳೂರು

ಮೋಹಿನಿ" ಕಾದಂಬರಿಯಲ್ಲಿ ಹೇಳಿದ್ದಾರೆ. ಅವಳು ಹುಟ್ಟಿದ್ದು ಕಾರವಾರದಲ್ಲಿ, ವಿದ್ಯಾಭ್ಯಾಸಕ್ಕೆ ಸೇರಿದ್ದು ಉಡುಪಿಯಲ್ಲಿ, ಕಾಮಲೀಲಾ ವಿನೋದಗಳನ್ನಾಡಿದ್ದು ಮಂಗಳೂರಿನಲ್ಲಿ, ದರೋಡೆ ಕೃತ್ಯಗಳನ್ನು ಪ್ರಾರಂಭದಲ್ಲಿ ನಡೆಯಿಸಿದ್ದು ರಾಜನಗರದಲ್ಲಿ, ಕೊನೆಗೆ ಮೃತ್ಯುವನ್ನಪ್ಪಿದ್ದು ಮಾದನಹಳ್ಳಿಯಲ್ಲಿ, ದಹನವಾದುದು ಕಾಂಚೀನಗರದಲ್ಲಿ. ಹೀಗೆ ಇವಳ ಮೋಸಗಾರಿಕೆಯನ್ನು ಪತ್ತೆ ಹಚ್ಚಬಯಸಿದರೆ ಎಷ್ಟೆಲ್ಲ ಊರುಗಳ ಭೇಟಿ ಆಗುವುದು ನಮಗೆ ಗೋಚರವಾಗುತ್ತದೆ. ಹೀಗೆ ಇವರ ಕಾದಂಬರಿಯಲ್ಲಿ ಸತ್ಯದ ಹುಡುಕಾಟ ಯಾವುದೇ ತೊಂದರೆಯಿಲ್ಲದೆ ಸಾಗಿದೆ.

ಇವರ ಇಡೀ ಕಾದಂಬರಿಯು ಬೆಳೆದು ಹೋದ ರೀತಿಯಲ್ಲಿ, ಸತ್ಯವು ವಿವಿಧ ರೀತಿಯಲ್ಲಿ ಸೇರಿಕೊಂಡ ಪರಿಯೂ ಇಲ್ಲಿ ವ್ಯಕ್ತಗೊಂಡಿದೆ. ಪ್ರಕರಣದ ನಿರಪರಾಧಿಗೆ ಗೆಲುವು ಲಭಿಸುವುದು ಕಾದಂಬರಿ ಕೊನೆಯಲ್ಲಿ ಮಾತ್ರ. ಘಟನೆ ನಡೆದ ಎಲ್ಲಾ ರೀತಿಯಲ್ಲೂ ನೋಡುವ ದೃಷ್ಟಿಕೋನ ಪತ್ತೇದಾರಿ ಮಾಡುತ್ತಾನೆ. ಪ್ರಕರಣದ ಸುತ್ತ-ಮುತ್ತ ಸಂಗ್ರಹಿಸಿದ ಮಾಹಿತಿಯನ್ನು ಹೆಕ್ಕಿ ತೆಗೆದು ಸೋಸುವ ಕೆಲಸವನ್ನು ಕಾದಂಬರಿಯಲ್ಲಿ ತಿಳಿಸಲಾಗಿದೆ.

ಎಷ್ಟೋ ಭಾರಿ ಕೆಲವು ಪ್ರಕರಣಗಳ ಮಾಹಿತಿ ನಿಗೂಢವಾಗಿಯೇ ತಲೆದೋರಿ ಕೊನೆಗೆ ನಿಗೂಢವಾಗಿ ಮುಚ್ಚಿ ಹೋಗುವ ಸನ್ನಿವೇಶ ಸಮಾಜದಲ್ಲಿ ತಲೆದೋರಿದರೆ, ಕಾದಂಬರಿ ಮಾತ್ರ ಈ ರೀತಿ ನಡೆದಿಲ್ಲ. ಪತ್ತೇದಾರ ಎಷ್ಟೇ ಕಷ್ಟ ಅನುಭವಿಸಿದರೂ ಸತ್ಯವನ್ನು ಹೊರಹಾಕುವ ತನಕ ಪತ್ತೇದಾರ ತನ್ನ ಕಾರ್ಯವನ್ನು ಬಿಡದೆ ಪತ್ತೇ ಹಚ್ಚಿ ಸಾಧಿಸುವುದೇ ಈ ಎಲ್ಲಾ ಕಾದಂಬರಿಗಳ ರೀತಿಯಾಗಿದೆ.

೪.೮ ಪತ್ತೇದಾರಿ ಸಿನಿಮಾ ಮತ್ತು ಪತ್ತೇದಾರಿ ಕಾದಂಬರಿಗಳ ಸಂಬಂಧ

ಪತ್ತೇದಾರಿ ಕಾದಂಬರಿಗಳಲ್ಲಿರುವ ಜೀವಾಳದ ಕಥೆಯಿಂದ ಕೆಲವು ಪತ್ತೇದಾರಿ ಸಿನಿಮಾಗಳ ಭಾಗಗಳು ಮೂಡಿ ಬಂದಿವೆ. ಕನ್ನಡದ ಪ್ರಮುಖ ಪತ್ತೇದಾರಿ ಸಿನಿಮಾಗಳಾದ ನಕ್ಸಲೈಟ್, ಆಪರೇಷನ್ ಡೈಮಂಡ್ ರಾಕೆಟ್, ಸಿ.ಐ.ಡಿ. ನಂಬರ್ ೧೧೧, ಹೀಗೆ ಇವೆಲ್ಲ ಪತ್ತೇದಾರಿಕೆ ಸಿನಿಮಾಗಳಾಗಿದ್ದರೂ, ಇವುಗಳ ಕೆಲವು ಚಿತ್ರಕಥೆ, ಸಾಹಿತ್ಯ ರಚನಾಕಾರರು ಕೆಲವು ತುಣುಕುಗಳನ್ನು ಆರಿಸಿಕೊಂಡು ಹೇಳಿದ್ದಾರೆ. ಅಂದರೆ ಈ ಸಿನಿಮಾಗಳಲ್ಲಿ ರೂಪಿಸಿದ್ದಾರೆ. ಆದಕಾರಣ ಇವರ ಪತ್ತೇದಾರಿ ಕಾದಂಬರಿ ಮತ್ತು ಪತ್ತೇದಾರಿ ಸಿನಿಮಾದ ನಡುವೆ ಅವಿನಾವಭಾವ ಸಂಬಂಧ ವ್ಯಕ್ತಗೊಂಡಿದೆ.

'ಮೋಹಿನಿ ವಿಲಾಸ' ಕಾದಂಬರಿಯ ಕೆಲವು ಭಾಗಗಳು 'ಬಡ್ಡಿ ಬಂಗಾರಮ್ಮ' ಚಿತ್ರದಲ್ಲಿ ಮೂಡಿ ಬಂದಿದೆ. ಮತ್ತೆ ನಾವು ಈ ರೀತಿ ನೋಡುವಾಗ ಸಿನಿಮಾದ ಕೆಲವು ಭಾಗಗಳನ್ನು ಕಾದಂಬರಿಕಾರರು ಎತ್ತಿಕೊಂಡು ಕಾದಂಬರಿ ರಚಿಸಿರಬಹುದಲ್ಲವೇ?. ಇದರಲ್ಲಿ ಯಾವುದು ಸತ್ಯವೆಂಬುದನ್ನು ನಾವು ವಿಶ್ಲೇಷಿಸಬೇಕಾಗುತ್ತದೆ.

ಪತ್ತೇದಾರಿ ಸಿನಿಮಾ ರಚನೆಕಾರರು ಅನೇಕ ಪತ್ತೇದಾರಿ ಕಾದಂಬರಿಗಳನ್ನು ಓದಿ ಅದರಲ್ಲಿರುವ ಕಥಾ ವಸ್ತುಗಳನ್ನು ಆಯ್ದುಕೊಂಡು ತಮ್ಮದೇ ಆದ ಸಿನಿಮಾವನ್ನು ರಚಿಸತೊಡಗುತ್ತಾರೆ. ಎನ್.ನರಸಿಂಹಯ್ಯನವರ ಕಾದಂಬರಿಗಳಲ್ಲಿ ಹೆಚ್ಚು ಸಾಮಾಜಿಕ ವಿಚಾರಗಳೇ ಹೆಚ್ಚಾಗಿ ಕಂಡುಬಂದಿವೆ. ಸಮಸ್ಯೆಗಳ ನಡುವೆ ಸಿಲುಕಿಕೊಂಡ ಮಾನವ ಅವುಗಳನ್ನು ಹೇಗೆ ಬಿಡಿಸಿಕೊಳ್ಳುತ್ತಾನೆ. ಅಲ್ಲದೇ ಸಮಸ್ಯೆ ಇರದ, ಸಮಸ್ಯೆ ಇರುವ ಮನುಷ್ಯನ ಬಾಳ ಪಯಣ ಹೇಗೆಲ್ಲ ನಡೆದುಕೊಂಡು ಹೋಗಿದೆ. ಹಾಗೆಯೇ ಸಮಾಜದಲ್ಲಿ ಆತಾಚುರ್ಯವಾಗಿ ನಡೆಯುವ ಘಟನೆಗಳನ್ನು ಕಾದಂಬರಿಯಲ್ಲಿ ಹೆಣೆಯಲಾಗಿದೆ. ಈ ಎಲ್ಲಾ ವಿಷಯಗಳನ್ನು ಸಿನಿಮಾ ಸಾಹಿತಿಗಳು ತಮಗೆ ಬೇಕಾದ ರೀತಿಯಲ್ಲಿ ಕೆಲವು ಎಳೆಗಳನ್ನು ಕಾದಂಬರಿಯಲ್ಲಿ ಎತ್ತಿಕೊಂಡು ಸಿನಿಮಾವನ್ನು ಚಿತ್ರಿಸಿದ್ದಾರೆ. ಸಿನಿಮಾ ನೋಡಿ ಬಂದಾಗ, ಕಾದಂಬರಿಯನ್ನು ಓದಿದಾಗ ಕೆಲವು ವಿಚಾರಗಳ ಸಾಮ್ಯತೆಯು ಕಂಡು ಬರುತ್ತದೆ.

ಇತ್ತೀಚಿನವರೆಗೆ ಎನ್.ನರಸಿಂಹಯ್ಯನವರ ಯಾವುದೇ ಪತ್ತೇದಾರ ಕಾದಂಬರಿಯೂ ಪೂರ್ಣಸಿನಿಮಾ ಆಗಿ ರೂಪಿತವಾಗಿಲ್ಲ. ಅಲ್ಲದೆ ಸಾಕ್ಷ್ಯಚಿತ್ರಗಳಲ್ಲಿಯೂ ಇದರ ಕಥಾವಸ್ತುಗಳು ರೂಪಿತವಾಗಿಲ್ಲ. ಮತ್ತೆ ಧಾರಾವಾಹಿಯಾಗಿಯೂ ಮೂಡಿಬಂದಿಲ್ಲ. ಆದರೆ ಎಲ್ಲಾ ಕಾದಂಬರಿಗಳ ಕೆಲವು ವಿಚಾರಗಳನ್ನು ಸಿನಿಮಾಗಳಲ್ಲಿ ಅಳವಡಿಸಿಕೊಂಡಿರುವುದರಲ್ಲಿ ಎರಡು ಮಾತಿಲ್ಲ. ಇವರ ಎಲ್ಲಾ ಕಾದಂಬರಿಗಳು ಒಂದು ರೀತಿಯದಾದ ಸಿನಿಮಾವನ್ನು ನೋಡಿದಂತೆ ಅನುಭವವಾಗುತ್ತದೆ. ಕಾದಂಬರಿಯನ್ನು ಓದಲು ಪ್ರಾರಂಭಿಸಿದಾಗ ನಮ್ಮ ಮನಸ್ಸು ಎಷ್ಟೇ ಗೊಂದಲವಾಗಿದ್ದರೂ ಏಕಾಗ್ರತೆ ಮೂಡುವುದಲ್ಲದೆ ಕುತೂಹಲವನ್ನು ಹುಟ್ಟಿಸಿ ಇಡೀ ಕಾದಂಬರಿಯನ್ನು ಓದಿ ಮುಗಿಸುವ ತನಕ ಮನಸ್ಸು ಬೇರೆಡೆಗೆ ಹೋಗದ ರೀತಿಯಲ್ಲಿ ಕಾದಂಬರಿಗಳು ರೂಪಿತವಾಗಿವೆ. ಆದ್ದರಿಂದಲೇ ಇವರ ಕಾದಂಬರಿಗಳು ಓದುವವರಿಗೆ ಒಂದು ರೀತಿಯ ಸಿನಿಮಾವನ್ನು ನೋಡಿದಂತೆ ಅನುಭವವಾಗುತ್ತದೆ. ಇಷ್ಟೆಲ್ಲಾ ವಿಚಾರಗಳನ್ನು ತಿಳಿದರೂ ಈ ಕಾದಂಬರಿಗಳಿಗೂ, ಸಿನಿಮಾಗಳಿಗೂ ಅವಿನಾಭಾವ ಸಂಬಂಧ ಇರುವುದು ವ್ಯಕ್ತವಾಗುತ್ತದೆ.

೪.೯ ಭಾನಾಮತಿ ಮತ್ತು ಧಾರ್ಮಿಕ ನಂಬಿಕೆ:

ಸಾಮಾನ್ಯವಾಗಿ ಎನ್. ನರಸಿಂಹಯ್ಯನವರ ಕಾದಂಬರಿಗಳಲ್ಲಿ ಅತಿ ಹೆಚ್ಚು ಭಾನಾಮತಿ ಪ್ರಸಂಗ ಕಂಡು ಬಂದಿದೆ. ಏಕೆಂದರೆ ಮನುಷ್ಯನಿಗೆ ಭಯದ ವಾತಾವರಣವಿದ್ದಾಗ ೨ ರೀತಿಯಲ್ಲಿ ಅನುಕೂಲ ಮತ್ತು ಅನಾನುಕೂಲ ಉಂಟಾಗಬಹುದು. ಒಂದು ಮನುಷ್ಯನಿಗೆ ಭಯವಿದ್ದಾಗ ತಪ್ಪು ಮಾಡುವುದು, ಕಡಿಮೆಯಾಗಬಹುದು. ಇದಕ್ಕೆ ವಿರುದ್ಧವಾಗಿ ಭಯದ ವಾತಾವರಣ ಮನುಷ್ಯನ ಮಾನಸಿಕ ಗೊಂದಲ ಕಾರಣವಾಗಿ ಅವನ ಅದಮ್ಯ ಶಕ್ತಿ ಸರ್ವನಾಶವಾಗಬಹುದು. ಆದರೆ ಕಾದಂಬರಿಕಾರರಾದ ಎನ್.ನರಸಿಂಹಯ್ಯನವರು ಕಾದಂಬರಿಯಲ್ಲಿ ಕುತೂಹಲ ಮೂಡಿಸಲು ಈ ಭಾನಾಮತಿ ಪ್ರಸಂಗವನ್ನು ಆಯ್ದುಕೊಂಡಿದ್ದಾರೆ. ಅಮಾವಾಸ್ಯೆಯ ಮತ್ತು ಹುಣ್ಣಿಮೆ ದಿನಗಳಲ್ಲಿ ನಡೆಯುವ ಮಾಟ, ಮಂತ್ರ, ತಂತ್ರಗಳ ಮೂಲಕ ಮನುಷ್ಯನಿಗೆ ಕಡಿವಾಣ ಹಾಕುವುದು, ಈ ರೀತಿ ಕಾದಂಬರಿಯಲ್ಲಿ ಬೀರುವ ನೋಟ ತುಂಬಾ ಚೆನ್ನಾಗಿ ಬರೆದಿದ್ದಾರೆ. ವಶೀಕರಣದಿಂದ ಖಳನಾಯಕ/ನಾಯಕಿ ತಪ್ಪಿಸಿಕೊಂಡು ತನ್ನ ಕ್ರೂರ ಕೆಲಸವನ್ನು ಲೀಲಾಜಾಲವಾಗಿ ಹೇಗೆ ಮಾಡುತ್ತಾನೆಂಬುದನ್ನು ಚಿತ್ರಿಸಿದ್ದಾರೆ. ಅಲ್ಲದೆ ಯಾವ ಸಹೃದಯ ಈ ಕಾದಂಬರಿಗಳ ಓದುಗಾರಿಕೆಯ ಜೊತೆಗೆ ಇದರಲ್ಲಿ ತೀರಾ ನಂಬಿಕೆ ಬರುವಂತೆ ಕಾದಂಬರಿಕಾರನು ಮಾಡಿದ್ದಾರೆ. ಆದಕಾರಣ ಈ ವಿಚಾರಗಳನ್ನು ತಿಳಿಯುವ ಸಂದರ್ಭಗಳಲ್ಲಿ ಸಹೃದಯ ತಲ್ಲಣಗೊಳಿಸುವ ಕೆಲಸವನ್ನು ಕಾದಂಬರಿಕಾರನು ಮಾಡಿರುವುದು ಮನುಷ್ಯನ ಅಂತರಾತ್ಮಕ್ಕೆ ಹೆಚ್ಚು ಮನ್ನಣೆ ನೀಡಲಾಗಿದೆ. ಅಲ್ಲದೆ ಪತ್ತೇದಾರನಿಗೆ ಯಾವುದೇ ಭಾನಾಮತಿ ಪ್ರಸಂಗದಿಂದ ತೊಂದರೆ ಎದುರಾದರೆ ಅದನ್ನು ಮೆಟ್ಟಿ ನಿಲ್ಲುವ ಪ್ರಸಂಗವನ್ನು/ತಂತ್ರವನ್ನು ವಿವರಣಾತ್ಮಕವಾಗಿ ತಿಳಿಸಿದ್ದಾರೆ. ಅದೂ ಅಲ್ಲದೆ ಪತ್ತೇದಾರನ ಪ್ರಾಬಲ್ಯ ನಡೆಯುವಂತೆ ನೋಡಿಕೊಂಡಿದ್ದಾರೆ. 'ಪಂಜುರ್ಲಿ ಪಿಶಾಚಿ', 'ಭಯಂಕರ ಪಿಶಾಚಿ', 'ಮಹಾಮಂತ್ರವಾದಿ', 'ಪಿಶಾಚಿಯ ಪ್ರಭಾವ', 'ಪಿಶಾಚಿ ಸೇಡು', 'ದೆವ್ವ ಮಾಡಿದ ಕೊಲೆ', 'ಪ್ರೇತ ಭವನ', 'ಮಾಂತ್ರಿಕನ ಚಮತ್ಕಾರ, ಇತ್ಯಾದಿ ಕಾದಂಬರಿಗಳಲ್ಲಿ ಮೂಢನಂಬಿಕೆ, ಕಂದಾಚಾರ, ಢಾಂಭಿಕತನ, ಹೆಚ್ಚು ಪ್ರಭಾವ ಬೀರಿದೆ. ಸಹೃದಯನನ್ನು ಯಾವುದೇ ಕಲ್ಪನಾ ಲೋಕದಲ್ಲಿ ಕರೆದುಕೊಂಡು ಹೋಗಿ ವಿಹರಿಸಿದಂತೆ ಕಾದಂಬರಿಯನ್ನು ಬರೆದಿದ್ದಾರೆ. 'ಪಿಶಾಚಿಯ ಪ್ರಭಾವ' ಕಾದಂಬರಿಯಲ್ಲಿ ಪತ್ತೇದಾರನಿಗೆ ಪಿಶಾಚಿಯಿಂದ ಎದುರಾಗುವ ತೊಂದರೆ ಆನಂತರ ಅದನ್ನು ಗೆಲ್ಲುವುದು. ಇದೆಲ್ಲ ತುಂಬಾ ಜವಾಬ್ದಾರಿಯುತವಾಗಿ ತಿಳಿಸಿದ್ದಾರೆ.

ಸನ್ಯಾಸಿಯಾದವನು ಹೇಗೆ ಸಮಾಜವನ್ನು ಮೋಸಗೊಳಿಸುತ್ತಾನೆ. ಸಮಾಜದಲ್ಲಿ ಜನರು ಅವರನ್ನು ನಂಬಿರುವ ರೀತಿ ಮೊದಲಾದ ಅಂಶಗಳು ಒಳಗೊಂಡಿವೆ. ಯಕ್ಷಿಣಿ ವಿದ್ಯೆ, ವಶೀಕರಣ, ದಿಗ್ಬಂದನ, ಮಾಯಾಸೊಂಕು, ಗರಬಿಡುವುದು ಮೊದಲಾದ ತಂತ್ರಗಳನ್ನು ಅನುಸರಿಸುತ್ತಾರೆ. ಕಾದಂಬರಿಗಳಲ್ಲಿ ಬರುವ ಇಡೀ ಪ್ರಕರಣ ರಾತ್ರಿಯ ಸಮಯದಲ್ಲಿ ನಡೆಯುವ ಪರಿಯನ್ನು ಇಲ್ಲಿ ಚರ್ಚಿಸಲಾಗಿದೆ. ಯಥೇಚ್ಛವಾಗಿ ಇಂತಹ ಸನ್ಯಾಸಿ ಪ್ರಕರಣಗಳೇ ಕಾದಂಬರಿಗಳಲ್ಲಿ ಬಿಂಬಿತವಾಗಿವೆ. 'ಭಯಂಕರ ಸನ್ಯಾಸಿ', 'ಸ್ಮಶಾನ ಬೈರಾಗಿ', ಮೊದಲಾದ ಕಾದಂಬರಿಗಳಲ್ಲಿ ಭಾನಾಮತಿಯ ಜಾಲವನ್ನು ತಿಳಿಸಲಾಗಿದೆ.

'ಮಹಾಮಂತ್ರವಾದಿ' ಕಾದಂಬರಿಯಲ್ಲಿ ಮೋಸತನ ವ್ಯಕ್ತಗೊಂಡ ರೀತಿ ಇದೆ, ಈ ಎಲ್ಲಾ ಸನ್ನಿವೇಶಗಳನ್ನು ಕಾದಂಬರಿಯಲ್ಲಿ ತಿಳಿದುಕೊಂಡಾಗ, ಕಾದಂಬರಿಕಾರರ ಮನಃಸ್ಥಿತಿ ಯಥೇಚ್ಛವಾಗಿ ಧಾರ್ಮಿಕ ನಂಬಿಕೆ, ಆಚರಣೆಗಳ ತುಂಬಾ ಒಲವು ಅಲ್ಲದೆ ಅದರಲ್ಲಿ ಹೆಚ್ಚು ಭಯದ ವಾತಾವಣ ಇರುವುದನ್ನು ಕಾಣಬಹುದು.

'ಪಿಶಾಚಿ ಸೇಡು' ಕಾದಂಬರಿಯಲ್ಲಿ ಸತ್ತ ಮನುಷ್ಯ ತನ್ನನ್ನು ಮೋಸದಿಂದ ಕೊಂದವರ ವಿರುದ್ಧವಾಗಿ ಸೇಡು ತೀರಿಸಿಕೊಳ್ಳುವುದು, ಹೀಗೆ ಇವರ ಕಾಲು ಭಾಗದ ಕಾದಂಬರಿಗಳು ಬಾನಾಮತಿ ಸನ್ನಿವೇಶವನ್ನೇ ಹೆಚ್ಚಾಗಿ ಬಿಂಬಿಸಿವೆ.

೪.೧೦ ಭೂಗತ ಜಗತ್ತು, ಪ್ರೇಮಲೀಲೆ, ಇನ್ನಿತರ ಅಂಶಗಳು:

ಅಂತರ ರಾಷ್ಟ್ರೀಯ ಮಟ್ಟದಷ್ಟು ಭೂಗತ ಜಗತ್ತನ್ನು ಇವರ ಕಾದಂಬರಿಗಳಲ್ಲಿ ಕಾಣಲು ಸಾಧ್ಯವಿಲ್ಲ. ಕೇವಲ ಬೆಂಗಳೂರಿನ ಚರಿತ್ರೆಯ ಹಿನ್ನೆಲೆಯ ಹಿಂದಿನ ವಿಚಾರವನ್ನು ಇಲ್ಲಿ ಕಾಣಬಹುದಾಗಿದೆ. ಕಥಾ ಸಾಹಿತ್ಯದಲ್ಲಿ ಇಡೀ ಕರ್ನಾಟಕಕ್ಕೆ ಹೆಚ್ಚು ಪ್ರಸಿದ್ಧಿ ಪಡೆದ ರೌಡಿಗಳ / ಕೊಲೆಪಾತಕರ ಹೆಸರನ್ನು ತಿಳಿಸುವುದಲ್ಲದೆ ಕಲ್ಪನಾಲೋಕದಲ್ಲಿ ರೌಡಿಸಂನ್ನು ಹೇಳಹೊರಟಿದ್ದಾರೆ. 'ಚೋರಚುಡಾಮಣಿ', 'ರೌಡಿ ರಾಂಸಿಂಗ್', 'ಬಿರುಗಾಳಿಯ ಭೀಮ', 'ಢಂ! ಢಂ!! ದಗೋಕಾರ' ಈ ಕಾದಂಬರಿಯಲ್ಲಿ ಭೂಗತ ಜಗತ್ತಿನ ವಿಷಯಗಳನ್ನು ತಿಳಿದು ವಿಶ್ಲೇಷಣೆ ಮಾಡಲಾಗಿದೆ.

'ಬೊಂಬಾಯಿ ದಗಾಕೋರ', 'ಚೋರಚಕ್ರವರ್ತಿ', 'ಡವಾಲಿ ಡಕಾಯಿತ', 'ಡಕಾಯಿತರ ದಳಪತಿ', 'ಪ್ರಚಂಡದಗಾಕೋರ', ಮೊದಲಾದ ಕಾದಂಬರಿಗಳಲ್ಲಿ ರಾಷ್ಟ್ರಮಟ್ಟದ ರೌಡಿಗಳ ಬಗ್ಗೆ, ಡಕಾಯಿತರ ಬಗ್ಗೆ, ವಿವರಣಾತ್ಮಕವಾಗಿ ತಿಳಿಸಲಾಗಿದೆ. ಅಮಾಯಕ ಜನರನ್ನು ಮರಳು ಮಾಡುವ ಸಂದರ್ಭ, ಅಮಾಯಕ ಜನರನ್ನು ಎದುರಿಸುವ ಸಂದರ್ಭ, ಯಾವುದೇ

ಕರುಣೆಯಿಲ್ಲದೆ ಕೊಲೆ ಮಾಡುವ ಹೃದಯಿಗಳು ಮನಸ್ಸನ್ನು ವಿಕೃತಗೊಳಿಸುತ್ತದೆ. ಓದುಗರ ಮೇಲೆ ಈ ಕಾದಂಬರಿಯ ಅಮಾನವೀಯ ಮೌಲ್ಯಗಳು ಪ್ರಭಾವ ಬೀರುತ್ತವೆ. ಕೆಲವರು ಏನಪ್ಪ ಬರೀ ಕ್ರೂರ ಕೃತ್ಯಗಳನ್ನೇ ತಿಳಿಸಿದರಲ್ಲ' ಎಂದು ಅನಿಸುತ್ತದೆ. ಡಕಾಯಿತ ನಡೆಸುವ ಅತ್ಯಾಚಾರಗಳ ಬಗ್ಗೆಯೂ ಈ ಕಾದಂಬರಿಗಳಲ್ಲಿ ತಿಳಿಸಲಾಗಿದೆ. ಪೋಲೀಸರ ಇಂತಹ ಪ್ರಕರಣಗಳ ಬಗ್ಗೆ ಎಷ್ಟೇ ಪ್ರಯತ್ನ ಪಟ್ಟು ಹುಡುಕಿದರೂ ವ್ಯರ್ಥವಾಗುವ ಸಂದರ್ಭಗಳು ಕೊನೆಗೆ ಪತ್ತೇದಾರ ಇವರೆಲ್ಲರ (ಡಕಾಯಿತರ) ನ್ನು ಪತ್ತೇ ಹಚ್ಚುವುದು ದುರ್ಭರ ಸನ್ನಿವೇಶಗಳು ಕಂಡುಬಂದಿವೆ. ಕಾಣದ ಲೋಕದಲ್ಲಿ, ಕತ್ತಲಿನ ಲೋಕದಲ್ಲಿ ನಡೆಯುವ ಘಟನೆ ಎಷ್ಟೋ ಮಂದಿಗೆ ಅರಿವಾಗುತ್ತಿರಲಿಲ್ಲ. ಆಗಿನ ಸಂದರ್ಭದಲ್ಲಿ ಮಾಧ್ಯಮ ಪ್ರಭಾವವೂ ಕೂಡಾ ಕಡಿಮೆಯಿತ್ತು. ಹೆಚ್ಚು-ಹೆಚ್ಚಾಗಿ ಬ್ಯಾಂಕಿನ ದೊಡ್ಡ ಅಂಗಡಿಗಳ ದರೋಡೆಯ ಬಗ್ಗೆಯೂ ಕೂಡಾ ತಿಳಿಸಲಾಗಿದೆ.

ಇವರು ಪೊಲೀಸ್ ಕೇಸ್ ಬಗ್ಗೆ ಹೆಚ್ಚು ಹೆಚ್ಚು ತಿಳಿದುಕೊಳ್ಳುತ್ತಿದ್ದರಿಂದಾಗಿ ಅತಿಯಾಗಿ ಕ್ರೈಂ ವಿಚಾರಗಳ ಬಗ್ಗೆ ಕಾದಂಬರಿಯಲ್ಲಿ ರಚಿಸತೊಡಗುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಕೋರ್ಟ್‌ನಲ್ಲಿ ನಡೆಯುವ ಪ್ರಸಂಗವನ್ನು ತಿಳಿಯಲು, ಹತ್ತಿರವಾದಲ್ಲೇ ವೀಕ್ಷಿಸುವುದಲ್ಲದೆ ಪಾಲ್ಗೊಳ್ಳುತ್ತಿದ್ದರು. ಆದಕಾರಣ ಇಂತಹ ಕಾದಂಬರಿಗಳನ್ನು ರಚಿಸಲು ಕಥಾವಸ್ತುಗಳು ಸಿಗುತ್ತಿದ್ದು ನಂತರ ಕಾಲ್ಪನಿಕತೆಯಿಂದ ರಚಿಸಲು ತೊಡಗುತ್ತಿದ್ದರು.

ಪ್ರೇಮಲೀಲೆ: ಪ್ರೇಮಲೀಲೆಯೇ ಇಡೀ ಎಲ್ಲಾ ಕಾದಂಬರಿಗಳಲ್ಲಿ ೫೦% ರಷ್ಟು ಅಡಿಗಲ್ಲಾಗಿ ನಿಂತಿದೆ. ಹೆಣ್ಣು ಹೇಗೆ ಜಗತ್ತಿನಲ್ಲಿ ಗಂಡಸಿನಲ್ಲಿ ತನ್ನ ಕಾಮಾಸೆಯನ್ನು ಚೆಲ್ಲಿ ಮೋಸ ಮಾಡುವ ಪ್ರಸಂಗಗಳು ಹೆಚ್ಚಾಗಿ ಇವರ ಕಾದಂಬರಿಗಳಲ್ಲಿ ಕಾಣಬಹುದಾಗಿದೆ. 'ಚಂಚಲೆಯ ಚಪಲ', 'ಮೋಹಿನಿ ವಿಲಾಸ', 'ಮಂಗಳೂರು ಮೋಹಿನಿ', ಈ ಕಾದಂಬರಿಗಳಲ್ಲಿ ಹೆಣ್ಣಿನ ಆರ್ಭಟ ವ್ಯಕ್ತವಾಗಿರುವುದನ್ನು ಕಾಣಬಹುದು. ಉದಾ: ಕಾದಂಬರಿಕಾರನು ಚಂಚಲೆಯ ಚಪಲ ಕಾದಂಬರಿಯಲ್ಲಿ ಹೆಣ್ಣಿನ ದೇಹ ಸಿರಿಯ ಬಗ್ಗೆ ತಿಳಿಸಲಾಗಿದೆ. ತನ್ನದೇ ಆದ ವಿಹಾರ ಲೋಕದಲ್ಲಿ ಹೆಣ್ಣು ಹೇಗೆ ತನ್ನ ಕಾಮದ ಆಸೆಯನ್ನು ಚೆಲ್ಲುವ ಪ್ರಸಂಗ ಈ ಆಸೆಗೆ ಬಲಿಯಾಗುವ ಜನರು ಶೋಷಿಸುವುದನ್ನು ಕಾಣಬಹುದಾಗಿದೆ. ಇವರ ಈ ಕಾಮದ ಕಾದಂಬರಿಗಳು ನೀಲಿ ಚಿತ್ರವನ್ನು ನೋಡಿದ ರೀತಿಯಲ್ಲಿಯೇ ಓದಿದರೆ ಅನುಭವವಾಗುವುದಲ್ಲದೆ ತುಂಬಾ ಸತ್ಯದ ವಿಚಾರವಾಗಿಯೇ ಕಂಡು ಬರುತ್ತವೆ.

ಇವರ ಪತ್ತೇದಾರಿ ಕಾದಂಬರಿಗಳಲ್ಲಿ ಬರುವ ಪ್ರಮುಖ ಅಂಶಗಳೆಂದರೆ, ಲಂಚಾವತಾರ, ನಡೆಯುವ ಆಕಸ್ಮಿಕ ತಪ್ಪುಗಳು, ಇನ್ನಿತರ ಅಂಶಗಳನ್ನು ಇಲ್ಲಿ ತಿಳಿಸಲಾಗಿದೆ. ಅಲ್ಲದೆ ವಿವರಣಾತ್ಮಕವಾಗಿ ವಿಶ್ಲೇಷಿಸಲಾಗಿದೆ. ತಮ್ಮ ಬದುಕಿನಲ್ಲಿ ಜರುಗಿದ ಕೆಲವು ಅನುಭವವನ್ನು ಕಾದಂಬರಿಗಳಲ್ಲಿ ದಾಖಲಿಸಿದ್ದಾರೆ. ಇವರ ಎಲ್ಲಾ ಕಾದಂಬರಿಗಳು ಒಂದೇ ಆಯಾಮದ ರೀತಿಯಲ್ಲಿ ರಚನೆಯಾಗ ತೊಡಗಿವೆ. ಪ್ರತಿಯೊಂದು ತಪ್ಪನ್ನು ಹಿಡಿದು ಕಾದಂಬರಿ ರಚನೆ ಮಾಡಿದ್ದಾರೆ. ಸುಮ್ಮನೆ ಕುಳಿತು ಕಾದಂಬರಿ ರಚಿಸುವ ರಚನೆಕಾರರು ಕೆಲವು ವಿಷಯಗಳನ್ನು ರಚಿಸಲು ಕಷ್ಟಪಡಬೇಕಾಗುತ್ತದೆ. ಆದರೆ ಇವರು ಒಂದು ರಾತ್ರಿಯೊಳಗೆ ಕುಳಿತು ಇಡೀ ಕಾದಂಬರಿ ರಚಿಸಿದ್ದಾರೆ. ಇದರಿಂದ ನಮಗೆ ಗೊತ್ತಾಗುವ ವಿಚಾರವೆಂದರೆ ಕೇವಲ ನಾಲ್ಕನೆಯ ತರಗತಿಗೆ ಎಷ್ಟೋ ವಿಚಾರಬಲ್ಲವರಾದವರು, ಇವರಿಗೆ ಸರಿಯಾದ ಶಿಕ್ಷಣ ದೊರೆತಿದ್ದರೆ ಪ್ರಖ್ಯಾತಿ ಸಾಹಿತಿಯಾಗುವುದರಲ್ಲಿ ಅನುಮಾನವಿಲ್ಲ. ಕೇವಲ ಜೀವನ ನಿರ್ವಹಣೆಗೋಸ್ಕರ ಕಾದಂಬರಿ ಬರೆಯುವುದನ್ನು ಪ್ರಾರಂಬಿಸಿದೆಂದು ತನ್ನ ಆತ್ಮಕಥನವಾದ 'ನನ್ನ ನೋವು-ನಲಿವು' ಕೃತಿಯಲ್ಲಿ ಹೇಳಿಕೊಂಡಿದ್ದಾರೆ.

ಒಟ್ಟಿನಲ್ಲಿ ಇವರ ಕಾದಂಬರಿಯಲ್ಲಿ ಪ್ರಮುಖವಾಗಿ ಗಮನಿಸಬಹುದಾದ ಪತ್ತೇದಾರಿಕೆ, ಭಾನುಮತಿ, ಪ್ರೇಮಲೀಲೆ, ಅಮಾನವೀಯ ಸಂಬಂಧ ಮೊದಲಾದ ಅಂಶಗಳ ಬಗ್ಗೆ ಕಾದಂಬರಿಯಲ್ಲಿ ಕೂಲಂಕಷವಾಗಿ ಚರ್ಚಿಸಲಾಗಿದೆ. ಪ್ರಮುಖ ಪ್ರಸಿದ್ಧ ಕಾದಂಬರಿಗಳ ವಿಶ್ಲೇಷಣೆಯಲ್ಲಿ ಬರುವ ಕೆಲವು ಅಂಶಗಳ ಬಗ್ಗೆ ವಿಶ್ಲೇಷಿಸಿ ಈ ಅಧ್ಯಯನದಲ್ಲಿ ತಿಳಿಸಲಾಗಿದೆ.

ಎನ್.ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿಯಲ್ಲಿ ಪ್ರೇಮಲೀಲೆಯ ಪ್ರಸಂಗವೇ ಹೆಚ್ಚಾಗಿ ಕಂಡು ಬರುವ ವಿಷಯಗಳಾಗಿವೆ. ಅದರಲ್ಲಿಯೂ ಯುವಕರಿಗಂತೂ ಇಂತಹ ವಿಷಯಗಳ ಮೇಲೆ ಆಸಕ್ತಿ ಇರುವುದರಿಂದ ಅಂತಹ ವಿಷಯಗಳ ಮೇಲೆ ಹೆಚ್ಚು ಕಾದಂಬರಿಗಳನ್ನು ರಚಿಸಿದ್ದಾರೆ. ಅದರಲ್ಲಿಯೂ ಇವರ ಅರ್ಧದಷ್ಟು ಹೆಚ್ಚು ಕಾದಂಬರಿಗಳು ಹೆಣ್ಣನ್ನು ಕುರಿತು ರಚಿಸಿರುವುದಲ್ಲದೆ ಹೆಚ್ಚು ಹೆಚ್ಚಿನ ದೌರ್ಬಲ್ಯದ ಬಗ್ಗೆ ತಿಳಿಸಲಾಗಿದೆ. ಕೆಲವು ಕಾದಂಬರಿಗಳಲ್ಲಿ ಮನುಷ್ಯನ ಮೋಹತನ ಏನೆಲ್ಲ ಕೆಲಸ ಮಾಡಿಸುತ್ತದೆಂದು ತಿಳಿಸಿದ್ದಾರೆ. ಗಂಡಸಿನ ಅದಮ್ಯ ಕಾಮ, ಹೆಣ್ಣಿನ ಚಾಣಾಕ್ಷತನ, ವೇಶ್ಯವೃತ್ತಿ, ಕಾಮದ ಇತರ ಬುದ್ಧಿಗಳು, ಇತ್ಯಾದಿಗಳ ಬಗ್ಗೆ ಮನೋಜ್ಞವಾಗಿ ತಿಳಿಸಿದ್ದಾರೆ. ಕೆಲವು ಬಾರಿ ಮಾನವನ ವಿಕೃತ ಬುದ್ಧಿ ಬಗ್ಗೆ ಮನುಷ್ಯ ಮನಸ್ಸಿನ ಅನಿಯಂತ್ರಣವನ್ನು ತಿಳಿಸಿದ್ದಾರೆ. 'ಬೀದಿಯ ಪಾರಿವಾಳ'ದ ಕಾದಂಬರಿಯ ಕೆಲವು ಪ್ರಸಂಗಗಳಲ್ಲಿ ಅಶ್ಲೀಲದ ವಿಚಾರದ ಬಗ್ಗೆ ತಿಳಿಸಿದ್ದಾರೆ. ಅದು ಈ ರೀತಿ ಇದೆ.

"ರಾಜಾಮಣಿಯ ಮೈಮೇಲೆ ಕೈ ಆಡಿಸುತ್ತಾ ಅತೀವ ಆನಂದದಲ್ಲಿ ಮುಳುಗಿದ ಮುನಿಲಿಂಗಯ್ಯ ಆಕೆಯನ್ನು ಚುಂಬಿಸಿದ. ಪಾಪಣ್ಣನಂತಹ ಗಂಡನಿದ್ದರೆ ಇದಕ್ಕಿಂತಲೂ ಹೀನ ಕೆಲಸವನ್ನು ಮಾಡಬೇಕಾಗುತ್ತೆ ಎಂದುಕೊಂಡ ರಾಜಾಮಣಿಯು ಆತನ ಬಟ್ಟೆಗಳನ್ನು ಬಿಚ್ಚಿದಳು. ಇಬ್ಬರೂ ನಗ್ನ ದೇಹಿಗಳಾದರು".

ಈ ಮೇಲಿನ ಪ್ರಸಂಗಕ್ಕಿಂತ ಇನ್ನೂ ವಿವರವಾಗಿ ಲೈಂಗಿಕತೆಯ ಬಗ್ಗೆಯೂ ತಿಳಿಸಿದ್ದಾರೆ. ಒಟ್ಟಿನಲ್ಲಿ ಈ ಕಾದಂಬರಿಗಳಲ್ಲಿ ಬರುವ ಎಲ್ಲಾ ಚಿತ್ರಣಗಳು ತೀರಾ ಲೈಂಗಿಕತೆಯ ಬಗ್ಗೆ ತಿಳಿಸಿದ್ದಾರೆ. ಕಾದಂಬರಿಗಳಲ್ಲಿ ತೆಗೆದುಕೊಂಡು ಓದಲು ಪ್ರಾರಂಭಿಸಿದಾಗ ಒಂದು ರೀತಿಯ ಬ್ಲೂ ಸಿನಿಮಾವನ್ನು ನೋಡಿದಂತೆ ಆಗುತ್ತದೆ. ಅಲ್ಲದೆ ಹೆಣ್ಣು ಕೆಲವು ಬಾರಿ ಗಂಡಿನ ಗಂಡಸ್ತನದ ಬಗ್ಗೆ ಮಾತನಾಡಿದ ಉದಾಹರಣೆಗಳಿವೆ. ಒಟ್ಟಿನಲ್ಲಿ ಲೇಖಕರ ಮನಸ್ಥಿತಿಯು ಹುಚ್ಚು ಕೋಡಿಯ ಮನಸ್ಸಿನಂತೆ ಹಾದುಹೋಗಿದೆ. ಪ್ರೇಮದ ನಾಟಕವಾಡಿ ಹೆಣ್ಣು ಗಂಡನ್ನು ಮೋಸಗೊಳಿಸುವ 'ಮೋಹಿನಿ ವಿಲಾಸ' ದಲ್ಲಿ ತಿಳಿಸಲಾಗಿದೆ. ಲೇಖಕರ ವಾಸ ಬೆಂಗಳೂರಿನ ಕೆಲವು ಸ್ಲಂನ ಹತ್ತಿರವಿದ್ದರಿಂದ ಮನುಷ್ಯರ ಹೀನಕೃತ್ಯಗಳನ್ನು ಕಣ್ಣಾರೆ ಕಂಡು ಕಾದಂಬರಿಗಳಲ್ಲಿ ದಾಖಲಿಸಿದ್ದಾರೆ.

ಅಧ್ಯಾಯ–೫

ಭಾಷಾ ಶೈಲಿ ಮತ್ತು ನಿರೂಪಣಾ ವಿಧಾನ

ಎನ್. ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿಗಳ ಭಾಷಾಶೈಲಿ ತುಂಬಾ ಸರಳವಾಗಿವೆ. ಸಾಮಾನ್ಯ ಓದುಗನು ಕೂಡಾ ಲೀಲಾಜಾಲವಾಗಿ ನೇರವಾಗಿ ತಕ್ಷಣದಲ್ಲೇ ಅರ್ಥಮಾಡಿಕೊಳ್ಳಬಹುದು. ಅಲ್ಲದೆ ಒಂದು ಕಾದಂಬರಿಯನ್ನು ಓದಲು ಸಹೃದಯ ತೆಗೆದುಕೊಂಡರೆ, ಅದನ್ನು ಓದಿ ಮುಗಿಸುವ ತನಕ ಬಿಡದೇ ಓದುವ ಕುತೂಹಲವನ್ನು ಉಂಟುಮಾಡುವ ನಿರೂಪಣಾ ವಿಧಾನ ಇವರ ಕಾದಂಬರಿಗಳಲ್ಲಿದೆ. ಪತ್ತೇದಾರ ಜನರ ನಡುವೆ ನಡೆಸುವ ವಿಚಾರಣೆಗೆ ಒಳಪಡಿಸುವ ಸಂದರ್ಭ 'ಆಕಸ್ಮಿಕ ಅಪರಾಧ' ಕಾದಂಬರಿಯಲ್ಲಿ ಈ ಕೆಳಗಿನಂತೆ ಸಂಭಾಷಣೆ ಇದೆ.

ಕೃಷ್ಣಯ್ಯನ ಹೇಳಿಕೆ ಮುಗಿದ ನಂತರ ಮಧುಸೂದನನು ಲೀಲಾದೇವಿಯನ್ನು ವಿಚಾರಿಸುವ ಉದ್ದೇಶವುಳ್ಳವನಾದ,

"ಈಗ ಈ ಮನೆಯಲ್ಲಿ ನೀವೊಬ್ಬರೇ ಇರುವಿರಲ್ಲವೇ?"

– ಎಂದು ಪತ್ತೇದಾರನು ಲೀಲಾದೇವಿಗೆ ಕೇಳಲು ಆಕೆಯು ಹೌದೆಂಬಂತೆ ತಲೆಯಾಡಿಸಿದಳು.

"ಚಿನ್ನೇಗೌಡರು ತಾಮ್ರಪುರಕ್ಕೆ ಯಾವಾಗ ಹೋದರು?"

ಭೀತಿಗೆ ತರ್ಪಣವಿತ್ತಿದ್ದ ಲೀಲಾದೇವಿಯು –

"ನಿನ್ನೆ ಸಾಯಂಕಾಲ ಹೋದ್ರು ಕಣ್ರಣ್ಣ" ಎಂದು ಹೇಳಿದಳು

"ಯಾಕೆ?"

"ವ್ಯಾಪಾರ ಸಂಬಂಧವಾಗಿ"

"ಅವರೇನು ವ್ಯಾಪಾರ ಮಾಡಿಕೊಂಡಿದ್ದಾರೆ?"

"ಸೀರೆ ವ್ಯಾಪಾರ ಕಣ್ರಣ್ಣ".

"ನಿಮ್ಮ ಮದುವೆ ಆಗಿ ಎಷ್ಟು ವರ್ಷಗಳಾಯಿತು?"

"ಹದಿಮೂರು ವರ್ಷಗಳಾಯಿತು"

"ಮಕ್ಕಳೆಷ್ಟು ಜನರಿದ್ದಾರೆ?"

ಲೀಲಾದೇವಿಗೆ ದುಃಖವುಕ್ಕಿತು.

ಈ ಮೇಲಿನ ಸಂಭಾಷಣೆಯ ಶೈಲಿ, ಭಾಷಾ ಶೈಲಿ, ತುಂಬಾ ಸರಳವಾದುದಾಗಿದೆ.

ಪತ್ತೇದಾರ ಒಂದೊಂದೇ ಪ್ರಶ್ನೆಯನ್ನು ಕೇಳುತ್ತಾ ಮಾಹಿತಿಯನ್ನು ಕೆದಕುತ್ತಾ ಹೋಗುವ ಸನ್ನಿವೇಶ ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಮಂಡ್ಯ-ಬೆಂಗಳೂರು ಗ್ರಾಮಾಂತರದಲ್ಲಿ ಬಳಕೆ ಮಾಡುವ ಭಾಷೆ ಕಾದಂಬರಿಯಲ್ಲಿ ವ್ಯಕ್ತಗೊಂಡಿದೆ. ಕೆಲವು ಕಡೆ ಚಿಕ್ಕಮಗಳೂರಿನ ಭಾಷೆಯ ಗಾಳಿ ಬೀಸಿರುವ ಸಂದರ್ಭಗಳು ಕಾದಂಬರಿಯಲ್ಲಿ ಕಾಣಬಹುದಾಗಿದೆ. ಕೆಲವು ಬಾರಿ ಪತ್ತೇದಾರ ಶುದ್ಧ ಬೆಂಗಳೂರಿನ ಕನ್ನಡದಲ್ಲೇ ಮಾತನಾಡುವುದನ್ನು ಸಂಭಾಷಣೆಯಲ್ಲಿ ಗೊತ್ತಾಗಿದೆ. ಕಾದಂಬರಿ ಬರುವ ವಿಚಾರಣೆಯು ನಾಟಕದ ರೀತಿಯಲ್ಲಿ ವ್ಯಕ್ತಗೊಂಡಿದೆ. ಕೆಲವು ಬಾರಿ ಓದುಗರಿಗೆ "ಏನಪ್ಪ ನಾಟಕವನ್ನು ನಾವು ಓದುತ್ತಿದ್ದೇವೆಯೋ" ಎನ್ನುವ ಅನುಭವವಾಗುತ್ತದೆ.

'ಬೀದಿಯ ಪಾರಿವಾಳ' ಕಾದಂಬರಿಯಲ್ಲಿ ಪಾಪಣ್ಣ ಎನ್ನುವ ಗಂಡು ತನ್ನ ಹೆಂಡತಿಯಾದ ರಾಜಾಮಣಿಯನ್ನು ಮುನಿಲಿಂಗಯ್ಯ ಎನ್ನುವ ಶ್ರೀಮಂತನಿಗೆ ವೇಶ್ಯಾವೃತ್ತಿಗೆ ದೂಡುವ ಸ್ಥಿತಿಯ ಸಂದರ್ಭದಲ್ಲಿ ಹೆಣ್ಣಿನ ಸ್ಥಿತಿಯ ನಿರೂಪಣೆ ಈ ಕೆಳಕಂಡಂತಿದೆ.

ರಾಜಾಮಣಿಯ ತಲೆಯ ಮೇಲೆ ಆಕಾಶವೇ ಕಳಚಿ ಬಿದ್ದಂತಾಯಿತು. ತನ್ನ ಪತಿಯ ಮಾತಿನಂತೆ ನಡೆಯಬೇಕಾದರೆ ಸತಿ ಸೂಳೆಯಾಗಿ ಬಾಳಬೇಕಾಗುತ್ತದೆ. ಆತನ ಅಪ್ಪಣೆಯನ್ನು ತಿರಸ್ಕರಿಸಿ ತೌರೂರಿಗೆ ಹೋದರೆ ಕೆಲವು ದಿನಗಳ ಮಟ್ಟಿಗೆ ಪ್ರೀತಿ ವಿಶ್ವಾಸದಿಂದ ನೋಡುವರು. ಅನಂತರ ಉದಾಸೀನ ತೋರುವರು. ಗಂಡನಿಂದ ತಿರಸ್ಕರಿಸಲ್ಪಟ್ಟಿರುವಳೆಂದರೆ ಪ್ರಾರಂಭದಿಂದಲೇ ಅಲಕ್ಷ್ಯಭಾವನೆ ತೋರುವರು. ಆಳನ್ನು ಕಂಡಂತೆ ಕಾಣುವರು ತಮ್ಮ ಮಕ್ಕಳ ಮೇಲೆ ಮತ್ತು ಬೇರೆಯವರ ಮೇಲೆ ಹಾಕಿ ಆಕೆಯನ್ನು ನಿಂದಿಸುವರು.

ತಾಯಿಗೆ ಮಗಳೆಂಬ ಅಭಿಮಾನವಿದ್ದರೂ, ಮನೆಯಲ್ಲಿ ಆಕೆಯ ಅಧಿಕಾರವಿದ್ದರೆ ಮಗಳ ಮನನೋಯದಂತೆ ಉಪಚರಿಸುವಳು. ಆಕೆಯ ಮಕ್ಕಳ ಅಧೀನದಲ್ಲಿದ್ದರೆ ಮಗಳನ್ನು ಪ್ರೀತಿಸಿದರೂ, ಉಪಚರಿಸಲು ಸಾಧ್ಯವಾಗದು. ಅಣ್ಣನು ನನ್ನನಂತಿರಬಹುದಾದರೂ, ಅತ್ತಿಗೆಯ

ನನ್ನವಳಾಗಲಾರಳೆಂಬ ಆರ್ಯನೀತಿಯು ಸುಳ್ಳಾಗದು. ದಂಪತಿಗಳಲ್ಲಿ ವೈಮನಸ್ಸುಂಟಾದರೆ, ಬೇಕಾದ ಸುಖಸಂಪತ್ತಿದ್ದರೂ ಆ ಸಂಸಾರದಲ್ಲಿ ಹಾಲಾಹಲವು ಬೆರೆತಿರುತ್ತದೆ.

ಸತಿಪತಿಗಳೊಂದಾದ ಭಕ್ತಿ
ಹಿತವಾಗಿಪ್ಪುದು ಶಿವಗಂಗೆ
ಸತಿಪತಿಗಳೊಂದಾಗದ ಭಕ್ತಿ
ಅಮೃತದೊಳು ವಿಷವ ಬೆರಸಿದಂತೆ ಕಾಣಾ ರಾಮನಾಥ
(ದೇವರದಾಸಿಮಯ್ಯ)

ಈ ಮೇಲಿನ ಪ್ರಸಂಗದಲ್ಲಿ ರಾಜಾಮಣಿ ಎನ್ನುವ ಹೆಣ್ಣಿನ ದುಃಸ್ಥಿತಿಯನ್ನು ವಚನದಲ್ಲಿ ಉದಾಹರಣೆ ಕೊಡುವುದಲ್ಲದೆ ಹೆಣ್ಣು ತನ್ನ ಗಂಡನ ಮನೆ ಬಿಟ್ಟರೆ ಯಾವ ದುಃಸ್ಥಿತಿಗೆ ಗುರಿಯಾಗಬಹುದೆಂಬ ಹೆಣ್ಣಿನ ಮುಂದಿನ ಸ್ಥಿತಿಯ ಬಗೆಗಿನ ಆಲೋಚನಾ ವಿಧಾನ ಮನಮುಟ್ಟುವಂತೆ ಇದೆ.

ಮುನಿಲಿಂಗಯ್ಯ ಒಂದು ಬಾರಿ ರಾಜಾಮಣಿಯಿಂದ ಕಾಮರುಚಿಯನ್ನು ಬಲತ್ಕಾರವಾಗಿ ಪಡೆದ ಮೇಲೆ ಪುನಃ ಅವಳನ್ನು ಆಸೆ ಪಡುವ ಪ್ರಸಂಗವನ್ನು ಸರ್ವಜ್ಞ ಪದ್ಯದಲ್ಲಿ ಕಾದಂಬರಿಕಾರರು ನಿರೂಪಿಸಿದ್ದಾರೆ.

ಹೆಣ್ಣು ಹೊನ್ನುಗಳನ್ನು ಹಣ್ಣಾದ ಫಲಗಳನು।
ಕಣ್ಣಿನಿಂದ ನೋಡಿ ಭ್ರಮಿಸಿದ
ಅಣ್ಣಗಳ ಯಾರು? ಸರ್ವಜ್ಞ

ಗಂಡಿನ ಕಾಮದ ಉತ್ಕಟಾಸೆ ವ್ಯಕ್ತಗೊಂಡಿರುವ ರೀತಿಯನ್ನು ತಿಳಿಸುವುದಲ್ಲದೆ ಇಂತಹ ಸಂಬಂಧದಲ್ಲಿ ಮನುಷ್ಯನ ವಿಕೃತ ಮನೋಭಾವ ಅನಾವರಣ ಗೊಂಡಿರುವುದನ್ನು ತಿಳಿಸಿದ್ದಾರೆ.

೫.೧ ಕಥಾಶೈಲಿ ಮತ್ತು ಸಂಭಾಷಣಾ ಸನ್ನಿವೇಶ:

ಎನ್. ನರಸಿಂಹಯ್ಯನವರ ಪತ್ತೇದಾರಿ ಕಥಾಶೈಲಿಯೂ ನಿಗೂಢವಾದ ರಹಸ್ಯವಾದ ಮೂಲದಿಂದ ಪ್ರಾರಂಭವಾಗಿ ಕೊನೆಯ ಕಥಾನಕದವರೆವಿಗೂ ಕುತೂಹಲ ಭರಿಸುವ ವಿಚಾರಣೆಯುಕ್ತವಾದ ಶೈಲಿ ಕಾದಂಬರಿಗಳಲ್ಲಿ ಕಂಡುಬರುತ್ತದೆ. ಕೆಲವು ಬಾರಿ ಸಂಭಾಷಣಾ ಶೈಲಿ ಪೊಲೀಸ್ ಮತ್ತು ಪತ್ತೇದಾರನ ನಡುವೆ ನಡೆಯುವ ಈ ವಿಷಯವನ್ನು "ಭಯಂಕರ ಭೈರಾಗಿ" ಕಾದಂಬರಿಯಲ್ಲಿ ತಿಳಿಸಿರುವುದು ಇಲ್ಲಿದೆ.

ಪುರುಷೋತ್ತಮನ ನಗುವನ್ನು ನೋಡಿದ ವಿಶ್ವನಾಥನ ಮನಸ್ಸಿಗೆ ಕಸಿವಿಸಿಯಾಯಿತು.

"ಪತ್ತೇದಾರರೇ ! ಏಕೆ ನಗುವಿರಲ್ಲ, ನಗುವಂತಹ ವಿಷಯವೇನಿದೆ ?"

ನಗದೆ ಅಳಬೇಕೆ?"

"ಕೊಲೆ ಮಾಡಿರುವುದಲ್ಲದೆ ಕಾಗದವನ್ನೂ ಬರೆದಿಟ್ಟು ತನ್ನ ಸಾಹಸವನ್ನು ತೋರಿಸಿಕೊಂಡಿರುವನು"

"ಹೌದು"

"ನಿಮ್ಮ ಅಂತರಾಳಕ್ಕೆ ಹೇಗೆ ಹೊಳೆಯುತ್ತದೆ?"

"ಈ ಕಾಗದದಲ್ಲಿ ಹಲವಾರು ವಿಷಯಗಳು ಅಡಗಿರುವುದೆಂದು ಹೇಳಬಲ್ಲೆ".

"ಈ ಮನುಷ್ಯನ್ಯಾರಿರಬಹುದು ?"

"ಮೊದಲೇ ತಿಳಿಸಿರುವೆನಲ್ಲ, ಬಹುಶಃ ಇದ್ದರೆ ಕೊಲೆಗಾರನಿಗೆ ಸಂಬಂಧ ಪಟ್ಟವನಿರಬಹುದು "

"ಈ ಕಾಗದದಲ್ಲಿ ಬರೆದ ಪ್ರಕಾರವೇ ಮುಂದೆ ನಡೆಯಿಸಬಹುದೇ?"

"ಕಳ್ಳ ಕೊಲೆಪಾತಕರಿಗೆ ದಯಾದಾಕ್ಷಿಣ್ಯವೇ ಇಲ್ಲವೆಂದ ಬಳಿಕ ಅವರು ನಡೆಯಿಸಲು ಹಿಂಜರಿಯುತ್ತಾರೆಯೇ? ಅಕಸ್ಮಾತ್ ಅವರ ಕೈಗೆ ಸಿಕ್ಕಿಬಿದ್ದರೆ ನಿರ್ದಯೆಯಿಂದ ಸಂಹರಿಸಿ ಬಿಡುತ್ತಾರೆ. ಅಲ್ಲದೆ ಕಾಗದದಲ್ಲಿ ತಿಳಿಸಿದಂತೆ ಕೊಲೆಗಾರನು ಒಬ್ಬನಿಲ್ಲ ಹಲವಾರು ಜನರಿರುವರು ಎಂದು ತೋರುತ್ತದೆ.

"ಅದು ಹೇಗೆ ಗೊತ್ತಾಯಿತು ".

ಈ ಸಂಭಾಷಣೆಯು ಸಾಮಾನ್ಯರು ಮಾತನಾಡುವ ಭಾಷೆಯಂತೆ ಇದೆ. ಇದನ್ನು ಓದಲು ಯಾವುದೇ ರೀತಿಯಾದ ಕ್ಲಿಷ್ಟತೆಯೂ ಇಲ್ಲ ಅಲ್ಲದೆ ಕಥಾಶೈಲಿಯೂ ಕೂಡಾ ಅರ್ಥಗರ್ಭಿತವಾಗಿದೆಂದು ಕಾದಂಬರಿಯಿಂದ ತಿಳಿದುಬರುತ್ತದೆ.

ಇವರ ಕಾದಂಬರಿಯಲ್ಲಿ ಪ್ರಮುಖವಾಗಿ ನಿರೂಪಣಾ ವಿಧಾನ ಸಂಭಾಷಣೆಯೂ ಈ ಕೆಳಕಂಡ ಕೆಲವು ಸಾಮಾನ್ಯ ಅಂಶಗಳನ್ನು ಗುರ್ತಿಸಬಹುದು.

೧) ಕಾದಂಬರಿ ಪ್ರಾರಂಭವಾಗುವ ಸನ್ನಿವೇಶವು ಯಾವುದೇ ವಿಚಾರದೊಂದಿಗೆ ಪ್ರಾರಂಭವಾಗುತ್ತದೆ. ಅಂದರೆ ಸಣ್ಣ ವಿಶ್ಲೇಷಣೆಯೊಂದಿಗೆ ಪ್ರಾರಂಭವಾಗುತ್ತದೆ.

೨) ಮೊದಲ ಸನ್ನಿವೇಶಕ್ಕೆ ಹೆಣೆದುಕೊಂಡ ಇನ್ನಿತರ ತತ್ವರಹಿತ ಪ್ರಸಂಗಗಳು ಬೆರಕೆಯಾಗುತ್ತದೆ.

೩) ಮಾತಿನ ಸಂಭಾಷಣೆಯೂ ಪುಸ್ತಕದ ಬಂಡವಾಳವಾಗಿದೆ.

೪) ಪತ್ತೇದಾರನ ವಿಚಾರಣೆ ಸಾಮಾನ್ಯವಾಗಿ ಎಲ್ಲಾ ಕಾದಂಬರಿಗಳಲ್ಲಿ ಎದ್ದು ಕಾಣುತ್ತದೆ.

೫) ಪೊಲೀಸ್ ವ್ಯಕ್ತಿಯೊಂದಿಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪತ್ತೇದಾರನು ನಡೆಸುವ ವಿಶ್ಲೇಷಣೆ ಸ್ವಾರಸ್ಯಕರವಾಗಿ ಪ್ರತಿ ಕಾದಂಬರಿಯಲ್ಲಿ ಮೂಡಿ ಬಂದಿರುತ್ತದೆ. ಹೀಗೆ ನಿರೂಪಣಾ ವಿಧಾನ ಮೂಡಿ ಬರುತ್ತದೆ.

೬) ಪತ್ತೇದಾರ ಪ್ರಕರಣವನ್ನು ಪತ್ತೆ ಹಚ್ಚಿದ ಮೇಲೆ ಎಲ್ಲಾ ಜನರು, ಪೊಲೀಸ್ ಇಲಾಖೆ ಎಲ್ಲರೂ ಸಂತೋಷದಿಂದ ಪತ್ತೇದಾರರನ್ನು ಮೆಚ್ಚಿಕೊಳ್ಳುತ್ತಾರೆ.

೭) ಕಾದಂಬರಿಯಲ್ಲಿ ಬರುವ ಸನ್ನಿವೇಶವನ್ನು ವಿಶ್ಲೇಷಣಾತ್ಮಕವಾಗಿ ಹೇಳುವಾಗ ಪ್ರಸ್ತುತ ಸಮಸ್ಯೆಗೆ ಹಿಂದಿನ ಪರಿಸ್ಥಿತಿ ಈಗಿನ ಪರಿಸ್ಥಿತಿಯೊಂದಿಗೆ ಎಲ್ಲವನ್ನು ಸೋದಾ ಹರಣೆಯ ಮೂಲಕ ವಿವರಿಸಿದ್ದಾರೆ.

೮) ಕೆಲವು ಸಂದರ್ಭಗಳಲ್ಲಿ ಸರ್ವಜ್ಞ ಕವಿ, ವಚನಕಾರರು, ದಾಸರು, ನಾಣ್ಣುಡಿಯ ಮೂಲಕ ಕಾದಂಬರಿಯ ನಿರೂಪಣೆಯು ಸಾಗಿದೆ. ಇದರಿಂದ ಓದುಗರಿಗೆ ಒಂದು ರೀತಿಯಲ್ಲಿ ಬುದ್ಧಿವಾದವನ್ನು ಕಲ್ಪಿಸುವುದನ್ನು, ತಿಳಿ ಹೇಳುವುದನ್ನು ಮಾಡಿದ್ದಾರೆ.

೯) ಪ್ರೇಮದ ಪ್ರಕರಣಗಳಲ್ಲಿ ಕಾಮದ ಅಭೀಷ್ಟೆಯನ್ನು ಸ್ವಾರಸ್ಯಕರವಾಗಿ ಓದುಗನ ಮನಸ್ಸನ್ನು ಕೇಂದ್ರೀಕರಿಸಿರುವುದನ್ನು ಕಾಣಬಹುದಾಗಿದೆ.

ಎನ್.ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿಗಳಲ್ಲಿ ಕೆಲವು ಬಾರಿಗೆ ಎಲ್ಲಾ ವಿಷಯಗಳು ಮತ್ತು ವಿಚಾರಗಳು ಸಾಮಾನ್ಯವಾಗಿ ನುಸುಳಿ ಹೋಗುತ್ತವೆ. ಬೇರೆ ವಿಷಯಗಳೂ ಇರಬಹುದು. ಅದೂ ಏನೇ ಇರಲಿ ೧೯೫೦-೬೦ರ ದಶಕದಲ್ಲಿ ಓದುಗರ ಮೆಚ್ಚುಗೆ ಪಾತ್ರರಾಗಿದ್ದರು. ಅದೂ ಅಲ್ಲದೆ ಸಾಹಿತ್ಯದ ಕಡೆಗೆ ಜನರ ಮನಸ್ಸನ್ನು ವಾಲಿಸಿದವರು, ಜನ ಮೆಚ್ಚುಗೆಗೆ ಪತ್ತೇದಾರನ ವಿಚಾರಣೆಯೇ ಕಾದಂಬರಿ ನಿರೂಪಣಾ ವಿಧಾನದಲ್ಲಿ ಹೆಚ್ಚು ಬೆಲೆಯನ್ನು ಪಡೆದುಕೊಂಡಿದೆ. ಮತ್ತೆ ಇವರು ಸರ್ವಜ್ಞ ಕವಿಯ ತುಣುಕುಗಳನ್ನು ಪ್ರತಿ ಕಾದಂಬರಿಯ ಮೊದಲು ಹಾಗೂ ಕಾದಂಬರಿಯ ಕೊನೆಯಲ್ಲಿ ಹೇಳುವುದು ಇವರ ಇನ್ನೊಂದು ಶೈಲಿಯ ಲಕ್ಷಣವಾಗಿದೆ.

ತಲ್ಲಿಯರಲೊಲ್ಲದೆ ಬಲ್ಲಿದರೆ ಮೊರೆ ಬಿದ್ದು ।
ಕಲ್ಲುಮಾಳಿಗೆಯ ಒಳಗಿರಲು ವಿಧಿ ತಾನು ।
ಕೊಲ್ಲದೇ ಬಿಡನು ಸರ್ವಜ್ಞ ॥

(ನೀಲಿ ಬಣ್ಣದ ಕೋಟು ಕಾದಂಬರಿಯ ಕೊನೆಯವರೆಗಿನ ಸರ್ವಜ್ಞನ ಪದ್ಯ)

ಬಲಹೋದ ಕಾಲಕ್ಕೆ ನೆಲವೆದ್ದು ಬಡಿಯುವುದು ।
ಕುಳ, ಫಲ, ಕಲಹ, ಸಿರಿಯು, ಸಂಗ್ರಾಮಗಳು,।
ಬಲವಿರುವತನಕ ಸರ್ವಜ್ಞ ॥

(ಜಾದುಗಾರ ಜಗದೀಶ ಕಾದಂಬರಿಯ ಕೊನೆಯಲ್ಲಿ ಬರೆದ ಸರ್ವಜ್ಞನ ಪದ್ಯ)

ಆಡದೆ ಮಾಡುವನು ರೂಢಿಯೊಳಗುತ್ತಮನು ।
ಆಡಿ ಮಾಡುವವನು ಮಧ್ಯ ಅಥವಾ ತಾ ॥
ನಾಡಿ ಮಾಡದವ ಸರ್ವಜ್ಞ ॥

(ಬೀದಿ ಪಾರಿವಾಳ ಕಾದಂಬರಿ ಮೊದಲು ಬರೆದ ಸರ್ವಜ್ಞನ ಪದ್ಯ)

ಹೆಣ್ಣಿನ ಪರಿಸ್ಥಿತಿಯನ್ನು ಕುರಿತು ಹೊನ್ನಮ್ಮ ಪದ್ಯವನ್ನು ಮೆಲುಕು ಹಾಕಿದ ಸನ್ನಿವೇಶ ಬೀದಿಯ ಪಾರಿವಾಳ ಕಾದಂಬರಿಯಲ್ಲಿ ವ್ಯಕ್ತವಾಗಿದೆ.

ಪೆಣ್ಣಲ್ಲವೇ ತಮ್ಮನ್ನೆಲ್ಲ ಪಡೆದ ತಾಯಿ।
ಪೆಣ್ಣಲ್ಲವೇ ಪೊರೆದವಳು॥
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು।
ಕಣ್ಣು ಕಾಣದ ಗಾವಿಲರು॥

ಪಾಪಣ್ಣ ಹೆಂಡತಿಯನ್ನು ಕೆಟ್ಟ ಕೆಲಸಕ್ಕೆ ದೂಡುವಾಗ ಹೆಣ್ಣಿನ ಮಹತ್ವ ಕುರಿತು ಹೇಳಿದ ಮಾತನ್ನು ಅರ್ಥೈಸಿದ್ದಾರೆ. ಹೀಗೆ ಇವರ ಸಂಭಾಷಣಾ ಶೈಲಿ ಕಂಡುಬಂದಿದೆ.

ಈ ಮೇಲಿನ ಪದ್ಯಗಳಲ್ಲಿ ನೀತಿಯ ಸಂದೇಶದ ಜೊತೆಗೆ ಕಾದಂಬರಿಗೆ ಒಂದು ಮಹತ್ವ ಬರಲಿ ಎನ್ನುವ ಉದ್ದೇಶದಿಂದ ಸರ್ವಜ್ಞನ ಕವಿಯ ಪದ್ಯಗಳನ್ನು ಬರೆದಿದ್ದಾರೆ. ಅಲ್ಲದೆ ಇವರ ಪ್ರತಿಯೊಂದು ಕಾದಂಬರಿಯು ಕೊನೆಯಲ್ಲಿ ತತ್ವ , ನೀತಿ, ಸಾರವನ್ನು ಸರ್ವಜ್ಞನ ಪದ್ಯದ ಮೂಲ ಮನದಟ್ಟು ಮಾಡಿದ್ದಾರೆ.

ಕಥಾಶೈಲಿ:

ಎನ್.ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿಗಳನ್ನು ಓದಲು ಓದುಗರಲ್ಲಿ ಆಸಕ್ತಿ ಮೂಡಿಸಲು ಒಂದು ಕಾದಂಬರಿ ಕೊನೆಯ ಪುಟದಲ್ಲಿ ಜಾಹೀರಾತಿನಂತೆ ನೀಡಿ ಕಾದಂಬರಿಯ ಕಥಾಶೈಲಿಯನ್ನೇ ಚಿಕ್ಕದಾಗಿ ತಿಳಿಸುವ ಇವರ ವಿವರಣಾ ಶೈಲಿ ಉತ್ತಮವಾಗಿದೆ.

ಉದಾ: ಮಂಗಳೂರು ಮೋಹಿನಿ ಎಷ್ಟು ಮೋಹಕವಾದ ಹೆಸರು ! ಅವಳು ನಿಜವಾಗಿ ಮೋಹಿನಿಯೇ ಹೌದು. ಅವಳ ಮೋಹದ ಬಲೆಗೆ ಬಿದ್ದವರು ಎಷ್ಟೋ ಮಂದಿ. ಆ ದೇಹದ ಸಹವಾಸಕ್ಕಾಗಿ ಹಾತೊರೆದವರು ಹಲವರು ಅವರಿಗೆಲ್ಲ ಅವಳು ಒಲಿದಳು ನಿಜ. ಮೊದಲು ಮೋಹಿನಿಯಾಗಿ ಆಮೇಲೆ ಮೋಹಿನಿಯಾಗಿ ರಕ್ಕಸಿಯಾಗಿ, ನುಂಗಿ ನೀರು ಕುಡಿದಳು. ಮೂವರು ಶ್ರೀಮಂತರು ಅವಳಿಗೆ ಬಲಿಯಾದರು.

ಮೋಹಿನಿ ಡಾಕಿನಿಯಾಗಿ, ಡಕಾಯಿತಿಯಾಗಿ ಎಲ್ಲರನ್ನು ನಡುಗಿಸಿದಳು. ಅವಳು ಹುಟ್ಟಿದ್ದು ಕಾರವಾರದಲ್ಲಿ, ವಿದ್ಯಾಭ್ಯಾಸಕ್ಕೆ ಸೇರಿದ್ದು ಉಡುಪಿಯಲ್ಲಿ, ಕಾಮಲೀಲಾ ವಿನೋದಗಳನ್ನಾಡಿದ್ದು ಮಂಗಳೂರಿನಲ್ಲಿ, ದರೋಡೆ ಕೃತ್ಯಗಳನ್ನು ಪ್ರಾರಂಭದಲ್ಲಿ ನಡೆಯಿಸಿದ್ದು ರಾಜನಗರದಲ್ಲಿ, ಕೊನೆಗೆ ಮೃತ್ಯುವನ್ನಪ್ಪಿದ್ದು ಮಾದನಹಳ್ಳಿಯಲ್ಲಿ, ದಹನವಾದುದು ಕಾಂಚೀನಗರದಲ್ಲಿ.

ಇದೋ ನೋಡಿ!

ಇದಷ್ಟು "ಮಂಗಳೂರು ಮೋಹಿನಿ" ಪತ್ತೇದಾರಿ ಕಾದಂಬರಿಯ ಸಂಕ್ಷಿಪ್ತ ಕಥಾಶೈಲಿಯಾಗಿದೆ. ಕೆಲವು ಬಾರಿ ಬರಹಗಾರನ ಬಿನ್ನಹದಲ್ಲಿ ಕಾದಂಬರಿಯ ಕಥಾಸಾಗರ ಏನು ಎನ್ನುವುದನ್ನು ತಿಳಿಸುವುದು. ಇವರ ಇನ್ನೊಂದು ವಿಧಾನ. ಹೀಗೆ ಇವರ ಕಾದಂಬರಿಯ ಕಥಾಶೈಲಿ ಓದುಗರಲ್ಲಿ ಕುತೂಹಲ ಮೂಡಿಸುವುದು. ಉತ್ತಮ ಬರವಣಿಗೆಯ ವಿಧಾನಕ್ಕೆ ಕೈಗನ್ನಡಿಯಾಗಿದೆ. ಪ್ರತಿಯೊಂದು ಪತ್ತೇದಾರಿ ಕಾದಂಬರಿಗಳಲ್ಲಿ ಬರಹಗಾರನ ಬಿನ್ನಹ ಇದ್ದೇ ಇರುತ್ತದೆ. ಅದರಲ್ಲಿ ಇಡೀ ಕಾದಂಬರಿಯ ಒಂದು ಕಥಾ ತುಣುಕನ್ನು ಎಸೆದು ಉಳಿದ ವಿಷಯಗಳನ್ನು ಮುಚ್ಚಿಟ್ಟಿರುವ ರೀತಿ ಮನಮೋಹಕವಾಗಿದೆ. ಮತ್ತೇ ಇವರು ಬರೆದು ಬರೆದು ಕಾಲ್ಪನಿಕ ಜಗತ್ತಿನ ಒಳಗೆ ಸಹೃದಯನನ್ನು ಮುಳುಗಿಸಿ ಬಿಡುತ್ತಾರೆ. ಎಷ್ಟೋ ಕಾದಂಬರಿಗಳಲ್ಲಿ ಪ್ರಾರಂಭಿಕ ಕಥೆಯು ರೌದ್ರರಸದಿಂದ ಕೂಡಿರುತ್ತದೆ. ಕೊನೆಗೆ ಶೋಕರಸ ಬಿಂಬಿಸಿರುವುದನ್ನು ಕಾಣಬಹುದಾಗಿದೆ.

ಎನ್. ನರಸಿಂಹಯ್ಯನವರು ಎಂದರೆ ಎಷ್ಟೋ ಮಂದಿ ಇವರನ್ನು 'ಕತೆಗಾರ ಚನ್ನಯ್ಯ' ಎಂದು ಕರೆಯಲು ಕಾರಣ ಆ ರೀತಿ ಕಥಾ ಶೈಲಿ ನಿರ್ಮಿಸಿ ಕಥೆ ರಚನೆ ಮಾಡತೊಡಗಿದ್ದನ್ನು ಓದುಗರು ಅವರ ಮನಸ್ಥಿತಿಯನ್ನು ಅರಿತೇ ಈ ಮೇಲಿನ ಹೆಸರನ್ನು ನೀಡಿದ್ದಾರೆ. ಕೆಲವು ಸಂದರ್ಭಗಳಲ್ಲಿ ಕಾದಂಬರಿ ವಿಷಯಗಳು ಮನಸ್ಸನ್ನು ವಿಕೃತಗೊಳಿಸುತ್ತವೆ. ಏಕೆಂದರೆ

ಸಮಾಜದ ಘಾತುಕ ಸನ್ನಿವೇಶಗಳನ್ನು ಯಥವತ್ತಾಗಿ ಕಾದಂಬರಿಯಲ್ಲಿ ತಿಳಿಸುವುದರಿಂದ ಓದುಗನ ಮನಸ್ಸು ವಿಚಲಿತವಾಗುತ್ತದೆ. ಆ ರೀತಿಯಲ್ಲಿ ಕಥಾಶೈಲಿ ಸುವ್ಯಕ್ತಗೊಂಡಿದೆ. ಇವರು ಎಷ್ಟೇ ವಿಚಾರಗಳನ್ನು ತಿಳಿಸಿದರೂ, ಇವರ ಶೈಲಿಯೂ ಕುತೂಹಲಕ್ಕೆ ನಾಂದಿ ಎನ್ನುವುದನ್ನು ಕಾಣಬಹುದಾಗಿದೆ.

ಅಧ್ಯಾಯ–೬

ಎನ್.ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿ ಮತ್ತು ಪಾಶ್ಚಾತ್ಯ ಪತ್ತೇದಾರಿಗಳ ನಡುವಿನ ಸಂಬಂಧ

ಕನ್ನಡ ಪತ್ತೇದಾರಿ ಕಾದಂಬರಿಗಳಲ್ಲಿ ದಾಖಲೆ ನಿರ್ಮಿಸಿದ ಎನ್.ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿ ಮತ್ತು ಪಾಶ್ಚಾತ್ಯ ಪತ್ತೇದಾರಿ ಕಾದಂಬರಿಗಳಲ್ಲಿ ಸಾಮಾನ್ಯವಾಗಿ ನಾವು ಗಮನಿಸಬಹುದಾದ ಸಂಬಂಧದ ಬಗ್ಗೆ ಈ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

೬.೧ ಬ್ರಿಟಿಷ್ ಪತ್ತೇದಾರಿ ಕಾದಂಬರಿಕಾರರ ಕಾದಂಬರಿಯಲ್ಲಿ ಬರುವ ಸಾಮಾನ್ಯ ಅಂಶಗಳು:

ಪತ್ತೇದಾರಿ ಕಾದಂಬರಿಗಳ ಜನನಿ ಎಂದು ಹೆಸರು ಮಾಡಿರುವ ದೇಶವೇ ಇಂಗ್ಲೆಂಡ್. ಮೊಟ್ಟ ಮೊದಲಿಗೆ ಇಂಗ್ಲೆಂಡ್ ದೇಶದಲ್ಲೇ ಪತ್ತೇದಾರಿ ಕಾದಂಬರಿ ಜನ್ಮ ತಾಳಿತು. ಅತಿ ಹೆಚ್ಚು ತನ್ನದೇ ಆದ ವಿಶಿಷ್ಠತೆಯನ್ನು ಹೊಂದಿರುವ ಬ್ರಿಟೀಷ್ ಪತ್ತೇದಾರಿ ಕಾದಂಬರಿಗಳೂ ಇಡೀ ವಿಶ್ವಕ್ಕೆ ಹೆಸರುವಾಸಿ ಹಾಗೂ ಜನಪ್ರಿಯವಾದವು. ಪತ್ತೇದಾರಿ ಕಾದಂಬರಿಗಳ ಪಿತಾಮಹನೆಂದು 'ಎಡ್ಗರ್ ಅಲೆನ್ ಪೂ' ರನ್ನು ಕರೆಯುತ್ತಾರೆ. ಇವರು ಮೊದಲಿಗೆ ಪತ್ತೇದಾರಿ ಕಾದಂಬರಿಯನ್ನು ರಚನೆ ಮಾಡಿದವನು. ಈ ಬ್ರಿಟಿಷ್ ದೇಶದ ಪತ್ತೇದಾರಿ ಕಾದಂಬರಿಗಳನ್ನು ಅನುಕರಣೆ ಮಾಡಿ ವಿಶ್ವದಾದ್ಯಂತ ಅನೇಕ ಭಾಷೆಗಳಲ್ಲಿ ಪತ್ತೇದಾರಿ ಕಾದಂಬರಿಯು ಜನ್ಮ ತಳೆಯಿತು. ಪತ್ತೇದಾರಿ ಕಾದಂಬರಿಗಳಲ್ಲಿ ಹೆಚ್ಚು ಪ್ರಖ್ಯಾತಿ ಗಳಿಸಿರುವ ಬ್ರಿಟಿಷ್ ಪತ್ತೇದಾರಿ ಕಾದಂಬರಿಗಳ ಕೆಲವು ಪ್ರಮುಖ ಸಾಮಾನ್ಯ ಅಂಶಗಳನ್ನು ಗುರ್ತಿಸಬಹುದು.

೧. ಬ್ರಿಟಿಷ್ ಪತ್ತೇದಾರಿ ಕಾದಂಬರಿಗಳಲ್ಲಿ ಬರುವ ವಿಷಯವಸ್ತುಗಳು ಅಂತರ ರಾಷ್ಟ್ರೀಯ ಮಟ್ಟದ್ದಾಗಿರುತ್ತವೆ ಹಾಗೂ ಕಾವ್ಯಾತ್ಮಕವಾಗಿ ಕೂಡಿರುತ್ತವೆ.

೨. ಬ್ರಿಟಿಷ್ ಪತ್ತೇದಾರಿ ಕಾದಂಬರಿಗಳಲ್ಲಿ ಬರುವ ಪತ್ತೇದಾರ ವಿವಿಧ ವೇಷ ಭೂಷಣಗಳಿಂದ ಗುರ್ತಿಸಲು ಅಸಾಧ್ಯವಾಗದ ರೀತಿಯಲ್ಲಿ ಕಾಣಿಸಿಕೊಳ್ಳುತ್ತಾನೆ. 'ಡೆತ್ ಆನ್ ದ ನೈಲ್ ' ಕೃತಿಯಲ್ಲಿ ಬರುವ "ಪತ್ತೇದಾರ ಅನೇಕ ವಿಧದ ಬಟ್ಟೆಗಳನ್ನು ತೊಟ್ಟು ಎಲ್ಲರೊಳಗಡೆ ಯಾವಾಗಲೂ ಇರುತ್ತಾನೆ"[೧].

1. Death on the Nile By Agatha Christie. Page 53

೩. ಬ್ರಿಟಿಷ್ ಪತ್ತೇದಾರಿ ಕಾದಂಬರಿಗಳಲ್ಲಿ ಪ್ರಾಣಿಗಳಿಂದ ಕೂಡಿದ ಹಾಗೂ ಪ್ರಾಣಿಗಳ ಹೆಸರಿನಿಂದ ಕೂಡಿದ ಕಾದಂಬರಿಗಳು ಯತ್ಛೇಚವಾಗಿ ಕಂಡುಬರುತ್ತವೆ.

೪. ಆಂಗ್ಲ ಪತ್ತೇದಾರಿ ಕಾದಂಬರಿಗಳಲ್ಲಿ ಅತಿ ನಿಗೂಢತೆಯನ್ನು ಹೊಂದಿರುವ ಕಥಾಹಿನ್ನೆಲೆ ಹೆಚ್ಚಾಗಿ ಕಂಡುಬರುತ್ತವೆ.

೫. ಬ್ರಿಟಿಷ್ ಪತ್ತೇದಾರಿ ಕಾದಂಬರಿಗಳಲ್ಲಿ ಪತ್ತೇದಾರ ತನ್ನ ಕೆಲಸವಾದ ಪತ್ತೇದಾರಿ ಪತ್ತೇಹಚ್ಚುವಿಕೆಯನ್ನು ಕೇವಲ ಏಕಾಂಗಿಯಾಗಿ ಕೈಗೊಳ್ಳುತ್ತಾನೆ.

೬. ಪತ್ತೇದಾರಿ ಕಾದಂಬರಿಯಲ್ಲಿ ಬರುವ ಪತ್ತೇದಾರ ತನ್ನ ಎಲ್ಲಾ ಮಾಹಿತಿ ಸಂಗ್ರಹಿಸಿ ಪ್ರಕರಣಕ್ಕೆ ಸಂಬಂಧಿಸಿದ ವಿಚಾರಗಳನ್ನು ವಿಶ್ಲೇಷಿಸಿ ತೀರ್ಮಾನ ಕೈಗೊಂಡ ಮೇಲೆ ಪೋಲೀಸರಿಗೆ ತಿಳಿಸಿ ಪತ್ತೇದಾರಿಕೆಯನ್ನು ಕೊನೆಗೊಳಿಸುತ್ತಾನೆ.

೭. ಈ ಕಾದಂಬರಿಗಳಲ್ಲಿ ಹೆಚ್ಚು ಭೂತಕ್ಕೆ ಸಂಬಂಧಿಸಿದಂತಹ ಹೆಚ್ಚು ವಿಷಯವಸ್ತುಗಳು ಕಾಣಿಸಿಕೊಳ್ಳುತ್ತವೆ.

೮. ಸಾಮಾನ್ಯವಾಗಿ ಕನ್ನಡದ ಪತ್ತೇದಾರಿ ಕಾದಂಬರಿಯಲ್ಲಿ ಕಂಡುಬರುವಂತೆ ಅತಿಯಾದ ಹೆಣ್ಣಿನ ಖಳನಾಯಕತ್ವದ ಬ್ರಿಟಿಷ್ ಪತ್ತೇದಾರಿ ಕಾದಂಬರಿಗಳಲ್ಲಿ ಕಂಡು ಬರುವುದಿಲ್ಲ.

೯. ಬ್ರಿಟಿಷ್ ಪತ್ತೇದಾರಿ ಕಾದಂಬರಿಗಳಲ್ಲಿ ಅತಿಯಾದ ಪ್ರಾಕೃತಿಕ ಅಂದರೆ, ಸನ್ನಿವೇಶದ ವಾತಾವರಣದ ನಿಗೂಢತೆಯ ಬಗ್ಗೆ ಹೆಚ್ಚಿನ ಅಂಶಗಳು ಕಂಡುಬರುತ್ತವೆ.

೧೦. ಈ ಕಾದಂಬರಿಗಳಲ್ಲಿ ಕಂಡು ಬರುವ ಸಾಮಾನ್ಯ ಮೂಲಾಂಶಗಳು ಕನ್ನಡದ ಪತ್ತೇದಾರಿ ಕಾದಂಬರಿಗಳಲ್ಲಿ ಸಾಮ್ಯತೆಯನ್ನು ಹೊಂದಿವೆ.

048877

೬.೨ ಪಾಶ್ಚಾತ್ಯ ಪತ್ತೇದಾರಿ ಕಾದಂಬರಿಗಳು ಮತ್ತು ಎನ್.ನರಸಿಂಹಯ್ಯನವರ ಕಾದಂಬರಿಗಳಲ್ಲಿ ಗುರ್ತಿಸಲಾಗುವ ಹೋಲಿಕೆ:

ಬ್ರಿಟಿಷ್ ಮತ್ತು ಕನ್ನಡ ಇವೆರಡು ಕಾದಂಬರಿಗಳಲ್ಲಿ ಕಂಡು ಬರುವ ಸಾಮಾನ್ಯ ಹೋಲಿಕೆ / ವ್ಯತ್ಯಾಸವನ್ನು ಈ ಕೆಳಗಿನ ಅಂಶಗಳಿಂದ ತಿಳಿದುಕೊಳ್ಳಬಹುದು.

೧) ಪತ್ತೇದಾರನ ಪತ್ತೆ ಹಚ್ಚುವಿಕೆಯ ವಿಧಾನ:

ಕನ್ನಡ ಮತ್ತು ಬ್ರಿಟಿಷ್ ಪತ್ತೇದಾರಿ ಕಾದಂಬರಿಗಳೆರಡರಲ್ಲೂ ಪತ್ತೇದಾರನು ಚಾಣಾಕ್ಷತೆಯಿಂದ ಪತ್ತೇ ಹಚ್ಚುವ ಕಾರ್ಯವನ್ನು ಮಾಡುತ್ತಾನೆಯೋ ಅದೇ ರೀತಿ ಬ್ರಿಟಿಷ್ ಕಾದಂಬರಿಯಲ್ಲಿಯೂ ಪತ್ತೇದಾರನು ತನ್ನ ಪತ್ತೆಹಚ್ಚಿಕೊಳ್ಳುವಿಕೆಯಲ್ಲಿ ವಿವಿಧ ವೇಷ-

ಭೂಷಣಗಳನ್ನು ತೊಟ್ಟು ಕಾಣಿಸಿ ಕೊಳ್ಳುತ್ತಾನೆ. ಆದರೆ ಎನ್. ನರಸಿಂಹಯ್ಯ ಪತ್ತೇದಾರ ಕಾದಂಬರಿಯಲ್ಲಿ ಬರುವ ಪತ್ತೇದಾರ ಯಾವಾಗಲೂ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತಾನೆ.

೨. ಪಾತ್ರ ನಿರ್ಮಾಣ ಶೈಲಿ:

ಬ್ರಿಟಿಷ್ ಪತ್ತೇದಾರಿ ಕಾದಂಬರಿಗಳಲ್ಲಿ ಬರುವ ಪತ್ತೇದಾರ ಇತರ ಪಾತ್ರಗಳ ಕನ್ನಡದ ಎನ್. ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿಗಳಿಗಿಂತ ವಿಶೇಷವಾದುದಾಗಿದೆ. ಬ್ರಿಟಿಷ್ ಪತ್ತೇದಾರಿ ಕಾದಂಬರಿಯಲ್ಲಿ ಪತ್ತೇದಾರನ ವಿಧಾನವು ಯಾರಿಗೂ ಅರಿವಿಲ್ಲದಂತೆ ನಡೆಯುತ್ತದೆ. ಆದರೆ ಎನ್.ನರಸಿಂಹಯ್ಯನವರ ಕಾದಂಬರಿಗಳಲ್ಲಿ ಪತ್ತೇದಾರ ಯಾವಾಗಲೂ ಪೋಲೀಸರೊಂದಿಗೆ ಚರ್ಚಿಸಿ ಆನಂತರ ತೀರ್ಮಾನ ಕೈಗೊಂಡ ಪ್ರಸಂಗ ಹೆಚ್ಚಾಗಿವೆ. ಇಲ್ಲಿಯೂ ಕೂಡಾ ೧) ಪತ್ತೇದಾರಿ, ೨) ಖಳನಾಯಕ /ಖಳನಾಯಕಿ, ೩) ಜನಸಾಮಾನ್ಯ, ೪) ಪಾತ್ರಧಾರಿಗಳು, ಕಂಡುಬರುತ್ತವೆ.

೩. ವಸ್ತು ವಿಷಯ ವ್ಯಾಪ್ತಿ:

ಬ್ರಿಟಿಷ್ ಪತ್ತೇದಾರಿ ಕಾದಂಬರಿಗಳ ಕಥಾವಸ್ತು ವಿಷಯದ ವ್ಯಾಪ್ತಿ ಅಂತರರಾಷ್ಟ್ರೀಯ ಮಟ್ಟದ್ದಾಗಿರುತ್ತದೆ. ಆದರೆ ಎನ್.ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿಯ ಕಥಾ ವಿಷಯ ವಸ್ತು ಕೇವಲ ರಾಜ್ಯಮಟ್ಟದಾಗಿರುವುದನ್ನು ಕಾಣಬಹುದಾಗಿದೆ. ಅಂತರರಾಷ್ಟ್ರೀಯ ವಿಷಯಗಳ ಬಗ್ಗೆ ಹೆಚ್ಚು ಗಮನಸೆಳೆಯುವ ವಸ್ತುವ್ಯಾಪ್ತಿ ಬ್ರಿಟಿಷ್ ಪತ್ತೇದಾರಿ ಕಾದಂಬರಿಗಳಲ್ಲಿ ವಿಶಾಲವಾಗಿರುತ್ತದೆ. ಆದರೆ ಸ್ಥಳೀಯ ಸಮಸ್ಯೆಗಳ ಬಗ್ಗೆ ಹೆಚ್ಚು ಕುರಿತದನ್ನು ಎನ್. ನರಸಿಂಹಯ್ಯನವರ ಕಾದಂಬರಿಗಳಲ್ಲಿ ಕಾಣುತ್ತೇವೆ.

೪. ಭಾಷಾ ಶೈಲಿ ಮತ್ತು ನಿರೂಪಣಾ ವಿಧಾನ:

ಬ್ರಿಟಿಷ್ ಪತ್ತೇದಾರಿ ಕಾದಂಬರಿಗಳ ಭಾಷಾಶೈಲಿ ಬ್ರಿಟಿಷ್ ಇಂಗ್ಲೀಷಿನಿಂದ ವಿವರಿಸಲಾಗಿರುತ್ತದೆ. ಸಾಮಾನ್ಯವಾಗಿ ಎನ್. ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿಗಳ ಭಾಷಾಶೈಲಿ ಸ್ಥಳೀಯ ಕನ್ನಡ ಭಾಷೆಯಿಂದ ಕೂಡಿದೆ. ಆದರೆ ನಿರೂಪಣಾ ವಿಧಾನ ಎರಡು ಕಾದಂಬರಿಗಳಲ್ಲಿ ಒಂದೇ ರೀತಿಯದಾಗಿ ವ್ಯಕ್ತಗೊಂಡಿದೆ.

೫. ಭಾನಾಮತಿ ಪ್ರಸಂಗ:

ಪಾಶ್ಚಾತ್ಯ ಪತ್ತೇದಾರಿ ಕಾದಂಬರಿಯಲ್ಲಿ ಭಾನಾಮತಿ ಪ್ರಸಂಗ ತುಂಬಾ ಸ್ವಾರಸ್ಯಕರವಾಗಿ ಮೂಡಿಬಂದಿದೆ. 'ಹ್ಯಾರಿ ಪಾಟರ್' ಹೆಸರಿನ ಅನೇಕ ಕಾದಂಬರಿಗಳು ಅತಿ ಹೆಚ್ಚು ನಿಗೂಢತೆ, ಭಾನಾಮತಿಗೆ ಹೆಸರುವಾಸಿಯಾಗಿದೆ. ಎನ್.ನರಸಿಂಹಯ್ಯ ಕಾದಂಬರಿಯಲ್ಲಿ ಅಷ್ಟೇನೂ ನಿಗೂಢತೆ ಸ್ಥಳೀಯ ಮಟ್ಟಕ್ಕೆ ಅವರದೇ ಆದ ನಿಗೂಢತೆಯನ್ನು ತಿಳಿಸಿದ್ದಾರೆ. ಜೆ.ಕೆ. ರೋಲಿಂಗ್ ಬ್ರಿಟಿಷ್ ಪತ್ತೇದಾರಿ ಕಾದಂಬರಿಗಳಲ್ಲಿ ಅತಿ ಹೆಚ್ಚು ಪ್ರಸಿದ್ಧಿ ಪಡೆದಿರುವ ಪ್ರಸ್ತುತರಾಗಿದ್ದಾರೆ. ಇವರ ತಮ್ಮ ಕಾದಂಬರಿಯ ನಾಯಕನಾಗಿ ಹ್ಯಾರಿ ಪಾಟರ್‌ನಲ್ಲಿ ಅನೇಕ ಕಾದಂಬರಿಗಳಲ್ಲಿ ಬರೆದಿರುವುದಲ್ಲದೆ ಹೆಚ್ಚು ಜನಪ್ರಿಯತೆಯನ್ನು ಹೊಂದಿವೆ. ಇವು ಜಗತ್ತಿನ ಹೆಚ್ಚಿನ ಭಾನಾಮತಿಗೆ ಹೆಸರುವಾಸಿಯಾದ ಕಾದಂಬರಿಯಾಗಿವೆ. ಎನ್. ನರಸಿಂಹಯ್ಯನವರ ಕಾದಂಬರಿಗಳಾದ 'ಭಯಂಕರ ಬೈರಾಗಿ', 'ಸ್ಮಶಾನ ಬೈರಾಗಿ'ಗಳಲ್ಲಿ ಸಿಗುವ ಭಾನಾಮತಿ ನಿಗೂಢತೆಯನ್ನು ತಿಳಿಸಿದರು. ನಿಗೂಢತೆಯ ಆಳಕ್ಕೆ ಇಳಿದಿಲ್ಲವೇನೋ ಎಂಬಂತೆ ತಿಳಿದುಬರುತ್ತದೆ.

೬. ಮಾನವೀಯತೆ ಮತ್ತು ಅಮಾನವೀಯತೆ:

ಪಾಶ್ಚಾತ್ಯ ಮತ್ತು ಕನ್ನಡದ ಪತ್ತೇದಾರಿ ಕಾದಂಬರಿಗಳಲ್ಲಿ ಮಾನವೀಯ ಮತ್ತು ಅಮಾನವೀಯ ಸಂಬಂಧಗಳು ಎರಡರಲ್ಲಿಯೂ ವ್ಯಕ್ತವಾಗಿವೆ. ಅದರಲ್ಲಿಯೂ ಎನ್. ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿಗಳಲ್ಲಿ ಬರುವ ಖಳನಾಯಕರು ತುಂಬಾ ಕ್ರೂರಿಯಾಗಿರುತ್ತಾರೆಂಬುದನ್ನು ನಾವು ಕಾಣಬಹುದು.

೭. ಕಥಾಸನ್ನಿವೇಶ ವಾತಾವರಣ:

ಪಾಶ್ಚಾತ್ಯ ಪತ್ತೇದಾರಿ ಕಾದಂಬರಿಗಳಲ್ಲಿರುವ ಕಥಾಸನ್ನಿವೇಶದ ವಾತಾವರಣ ಹೆಚ್ಚು ನಿಗೂಢತೆ, ಕಾಲ್ಪನಿಕತೆ, ಭಯಂಕರತೆ, ಸ್ವಾರಸ್ಯಕತೆಯಿಂದ ಕೂಡಿವೆ. ಇದಕ್ಕೆ ಸೂಕ್ತ ಎನ್ನುವಂತೆ ಎನ್. ನರಸಿಂಹಯ್ಯ ಕಾದಂಬರಿಗಳಲ್ಲಿಯೂ ಇವುಗಳನ್ನು ನೋಡಬಹುದಾಗಿದೆ. ಆದರೆ ಇವರ ಹೆಚ್ಚು ಕಾದಂಬರಿಗಳು ಸಮಾಜದ ಕ್ರೂರಕೃತ್ಯ ಹೆಚ್ಚು ಬಿಂಬಿಸುವ ಕಥಾ ಸನ್ನಿವೇಶದ ಜೊತೆಗೆ ಹೆಚ್ಚಿನ ವೇಶ್ಯಾವೃತ್ತಿಯನ್ನು ತಿಳಿಸಲಾಗಿದೆ.

ಹೀಗೆ ಮೇಲಿನ ಕೆಲವು ಅಂಶಗಳಲ್ಲಿ ವ್ಯತ್ಯಾಸ ಹೋಲಿಕೆಗಳು ಕಂಡುಬಂದರೆ ಉಳಿದಂತೆ ಇವೆರಡರ ಕಾದಂಬರಿಗಳಲ್ಲಿ ಸಾಮಾನ್ಯವಾಗಿ ಒಂದೇ ರೀತಿಯದಾದ ಅಂಶಗಳು ಕಂಡು ಬರುತ್ತವೆ.

ಅಧ್ಯಾಯ-೭

ಎನ್.ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿ ಮತ್ತು ಪಾಶ್ಚಾತ್ಯ ಪತ್ತೇದಾರಿ ಸಿನಿಮಾ ನಡುವಿನ ಸಂಬಂಧ

ಸಾಮಾನ್ಯವಾಗಿ ಸಿನಿಮಾ ಕ್ಷೇತ್ರದಲ್ಲಿ ಬರುವ ಬಹುಪಾಲು ಕಥೆಗಳು-ಪತ್ತೇದಾರಿ ಆಧಾರಿತವಾಗಿ ರಚನೆಯಾಗಿವೆ. ಅದರಲ್ಲಿಯೂ ಬ್ರಿಟಿಷ್ ಸಿನಿಮಾಗಳು ಹೆಚ್ಚು ಪತ್ತೇದಾರಿ ಕಥೆಯಿಂದ ಬಹು ಪ್ರಖ್ಯಾತಿಗಳಿಸಿವೆ. ಅಲ್ಲದೆ ಇದರಿಂದ ಹೆಚ್ಚು ಹಣಗಳಿಸುವ ಮೂಲವನ್ನು ನಿರ್ಮಾಪಕರುಗಳು ಕಂಡು ಕೊಂಡಿದ್ದಾರೆ. ಇದರಿಂದಾಗಿ ಒಂದು ಒಳ್ಳೆಯ ಸಿನಿಮಾ ರೂಪುಗೊಳ್ಳಲು ಅಲ್ಲಿನ ಅಂದರೆ ಬ್ರಿಟಿಷ್ ಪತ್ತೇದಾರಿಗಳ ಕಥೆ ಹಚ್ಚು ಕಾರಣವಾಗಿವೆ.

ಪಾಶ್ಚಾತ್ಯ ಪತ್ತೇದಾರಿ ಸಿನಿಮಾ ಶೈಲಿ ಜೊತೆಗೆ ಪತ್ತೇದಾರಿ ಕಾದಂಬರಿಗಳ ಸಮ್ಮಿಳಿತ ಪಾಶ್ಚಾತ್ಯ ಪತ್ತೇದಾರಿ ಸಿನಿಮಾಗಳೂ ಹೆಚ್ಚು ಪ್ರಖ್ಯಾತಿ ಗಳಿಸಲು ಬ್ರಾಂಡೆಡ್ ಶೈಲಿಯಲ್ಲಿ ರಚನೆಗೊಳ್ಳುತ್ತವೆ. 'ಜೇಮ್ಸ್ ಬಾಂಡ್' ಹೆಸರಿನ ವ್ಯಕ್ತಿಯು ಪಾಶ್ಚಾತ್ಯ ಪತ್ತೇದಾರಿ ಸಿನಿಮಾಗಳಲ್ಲಿ ಪ್ರಮುಖ ನಾಯಕನಾಗಿ ಹೆಸರನ್ನು ಗಳಿಸಿವೆ. ಅಲ್ಲದೆ ಈ ನಾಯಕನಿಗೆ '೦೦೭' ಎಂಬ ಸಂಕೇತವನ್ನು ನೀಡಲಾಗಿದೆ. ಪಾಶ್ಚಾತ್ಯ ಪತ್ತೇದಾರಿ ಸಿನಿಮಾಗಳಲ್ಲಿ ಹೆಚ್ಚು ಪ್ರಖ್ಯಾತಿ ಗಳಿಸಿದ ಸಿನಿಮಾಗಳೆಂದರೆ,

೧.	ಡಾಕ್ಟರ್ ನೋ	–	Doctor No
೨.	ದ ವರ್ಲ್ಡ್ ಈಸ್ ನಾಟ್ ಎನಫ್	–	The world is not Enough
೩.	ಕ್ಯಾಸಿನೋ ರಾಯಲ್	–	Kyasino Royal
೪.	ಟುಮಾರೋ ನೇವರ್ ಡೇ	–	Tomorrow never day
೫.	ಡೈಮಂಡ್ ಫಾರೆವರ್	–	Daimond Forever
೬.	ಫಾರ್ ಯುವರ್ ಐಸ್ ಓನ್ಲೀ	–	Four your Ice Only
೭.	ದ ಫ್ಲೆಕ್ಸ್ ಊ ಲೌಡ್ ಮಿ	–	The Flex who loud me
೮.	ಕ್ಲಾನ್‌ಟಂ ಸ್ವಾಲೈಸ್	–	Clontom Swalise
೯.	ಸ್ಕೈ ಫಾಲ್	–	Sky Fall
೧೦.	ಡೈ ಅನದರ್ ಡೇ	–	Dai Another day
೧೧.	ಆನ್ ಹರ್ ಮೆಸೆಸ್ಟಿಸ್ ಸೀಕ್ರೆಟ್ ಸರ್ವೀಸ್	–	On her Mesestis secret Service

ಇನ್ನೂ ಮುಂತಾದ ಪತ್ತೇದಾರಿ ಆಧಾರಿತ ಸಿನಿಮಾಗಳಲ್ಲಿ ಹೆಚ್ಚು ಪತ್ತೇದಾರಿ ಆಧಾರಿತ ಕಾದಂಬರಿಗಳ ಕಥಾವಸ್ತುವನ್ನೇ ಇಟ್ಟು ರಚನೆಗೆ ತೊಡಗಿರುತ್ತಾರೆ. ಆದರೆ ಯಾವ ವಿಚಾರಕ್ಕೋಸ್ಕರ ಪತ್ತೇದಾರಿ ಕಾದಂಬರಿಯನ್ನೇ ಆಯ್ಕೆ ಮಾಡುತ್ತಾರೆಂದರೆ ಓದುಗರಲ್ಲಿ ಕುತೂಹಲ ಮತ್ತು ಆಸಕ್ತಿಯನ್ನು ಕೆರಳಿಸುವ ಸಾಹಿತ್ಯವೆಂದು ಅಲ್ಲದೆ ಹೆಚ್ಚು ಇದನ್ನೇ ಅನುಕರಿಸುತ್ತಾರೆ/ಇಷ್ಟಪಡುತ್ತಾರೆ. ಈ ರೀತಿಯಲ್ಲಿ ಈ ವಿಧಾನವನ್ನೇ ತೊಡಗುತ್ತಾರೆ. ಈ ಪತ್ತೇದಾರಿ ಕಾದಂಬರಿಯಲ್ಲಿ ಪತ್ತೇದಾರಿ ಸಿನಿಮಾ ಹೇಗೆ ಸಮ್ಮಿಳಿತಗೊಂಡಿದೆ ಎಂದರೆ,

- ಕಥಾವಸ್ತುವಿನ ಆಸಕ್ತಿದಾಯಕ ನಡೆ ಇರುವುದರಿಂದ
- ಬ್ರಿಟಿಷ್ ಪತ್ತೇದಾರಿ ಸಾಹಿತ್ಯ ಹೆಚ್ಚು ಜನಸಾಮಾನ್ಯರು ಇಷ್ಟ ಪಡುವುದರಿಂದ
- ಕೆಲವು ಘಟನೆಗಳ ವಿಶ್ಲೇಷಣೆ ಒಳಗೊಂಡಿರುವುದರಿಂದ
- ಗಾಂಭೀರ್ಯದ ಪ್ರಕರಣಗಳು ಮನಸ್ಸಿಗೆ ಮನರಂಜನೆ ನೀಡುವುದರಿಂದ
- ಸಿನಿಮಾದವರಿಗೆ ಹೆಚ್ಚು ಲಾಭ ಮಾಡುವ ಉದ್ದೇಶವಿರುವುದರಿಂದ

ಹೀಗೆ ಮೊದಲಾದ ಅನೇಕ ಅಂಶಗಳ ಅನುಕೂಲತೆ ಇರುವುದರಿಂದ ನಿರ್ಮಾಪಕರುಗಳೆಲ್ಲ ಪತ್ತೇದಾರಿ ಕಾದಂಬರಿಗಳಲ್ಲಿ ಕಂಡುಬರುವ ಕಥಾನಕಗಳನ್ನು ತನ್ನ ಸಿನಿಮಾದ ಆಧಾರ ವಸ್ತುವನ್ನಾಗಿಟ್ಟು ಕೊಂಡು ರಚಿಸತೊಡಗುತ್ತಾರೆ.

ಪಾಶ್ಚಾತ್ಯ ಪತ್ತೇದಾರಿ ಸಿನಿಮಾಕ್ಕೂ, ಎನ್.ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿಗಳಿಗೂ ತುಂಬಾ ವ್ಯತ್ಯಾಸವಿದೆ. ಪಾಶ್ಚಾತ್ಯ ಪತ್ತೇದಾರಿ ಸಿನಿಮಾದಲ್ಲಿ ಅತಿಯಾದ ಕ್ರೂರತೆ ಕಂಡು ಬರುವುದಿಲ್ಲ. ಆದರೆ ಎನ್. ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿಗಳಲ್ಲಿ ಅತಿಯಾದ ಕ್ರೂರತೆ ಕಾಣುತ್ತೇವೆ. ಕೆಲವು ಬಾರಿ ನೇರವಾಗಿ ಕೃತ್ಯಗಳನ್ನು ವರ್ಣಿಸ ಹೊರಟಿದ್ದಾರೆ. ಇದರಿಂದ ಓದುಗರ ಮೇಲೆ ಅಡ್ಡಪರಿಣಾಮಗಳಾಗುತ್ತವೆ. ಇವರ ಎಷ್ಟೋ ಕಾದಂಬರಿಗಳು ಪೋಲೀಸ್ ಕ್ರೈಂನಲ್ಲಿ ಪ್ರಕಟಗೊಳ್ಳುತ್ತಿದ್ದ ಕಾರಣ ಅದೇ ಸಂಪ್ರದಾಯವನ್ನು ಯಥಾವತ್ತಾಗಿ ಕಾದಂಬರಿಯಲ್ಲಿ ಅಳವಡಿಸಲಾಗಿದೆ. ಪಾಶ್ಚಾತ್ಯ ಪತ್ತೇದಾರಿ ಸಿನಿಮಾ ಅತಿಯಾದ ನಿಗೂಢತೆ ಅಂದರೆ ಪ್ರಕರಣ ಯಾವ ರೀತಿಯಲ್ಲಿ ದಾಟು ಹೋಗುತ್ತಿತ್ತೆಂದು ಹೇಳಲಾಗದು. ಆದರೆ ಎನ್.ನರಸಿಂಹಯ್ಯನವರ ಕಾದಂಬರಿ ಪ್ರಕರಣ ಸಾಮಾನ್ಯವಾಗಿ ಕುಟುಂಬದಲ್ಲಿಯೇ ನಡೆದು ಹೋಗಿದೆ. ಪತ್ತೇದಾರಿ ಸಿನಿಮಾಗಳಲ್ಲಿ ಬರುವ ಪತ್ತೇದಾರ ವೈವಿಧ್ಯವಾದ ವೇಷ-ಭೂಷಣಗಳಿಂದ ನಿಗೂಢವಾಗಿ ಕಾಣಿಸುತ್ತಾನೆ. ಆದರೆ ಇವರ ಕಾದಂಬರಿಗಳಲ್ಲಿ ಪತ್ತೇದಾರ

ವಿವಿಧ ವೇಷ-ಭೂಷಣಗಳಿಂದ ಬರುತ್ತಾನೆ ಎನ್ನುವ ಪ್ರಸ್ತಾಪ ಕಾದಂಬರಿಯಲ್ಲಿ ಯಾವ ಪ್ರಸ್ತಾಪ ಯಾವ ಕಾದಂಬರಿಯಲ್ಲಿಯೂ ಕಂಡುಬರುವುದಿಲ್ಲ.

೭.೨ ಎನ್.ನರಸಿಂಹಯ್ಯನವರ ಕಾದಂಬರಿ ಮತ್ತು ಸಿನಿಮಾ ಕಥಾಸಾಹಿತ್ಯ

ಕನ್ನಡ ಚಲನಚಿತ್ರಗಳಲ್ಲಿ ಅತಿ ತೀರಾ ಕಡಿಮೆಯದಾದಂತಹ ಪತ್ತೇದಾರಿ ಸಿನಿಮಾಗಳು ಕಂಡು ಬರುತ್ತವೆ. ಇತ್ತೀಚೆಗೆ ಪತ್ತೇದಾರಿ ಸಿನಿಮಾಗಳು ಯಾವುದೇ ಯಶಸ್ಸನ್ನು ಕಂಡಿಲ್ಲ. ಆದರೆ ಹಿಂದಿನ ಡಾ॥ ರಾಜ್ ಕುಮಾರ್ ರವರ ಸಿ.ಐ.ಡಿ. ೯೯೯, ಆಪರೇಷನ್ ಡೈಮಂಡ್ ರಾಕೆಟ್ ಮುಂತಾದ ಸಿನಿಮಾಗಳು ಸಿನಿಪ್ರಿಯರಿಗೆ ಹೆಚ್ಚು ಜನಪ್ರಿಯವಾದ ಸಿನಿಮಾಗಳಾದವು. ಇವು ಕೂಡಾ ಪತ್ತೇದಾರಿ ಕಥಾವಸ್ತುವಿನ ಪತ್ತೇದಾರಿ ಸಿನಿಮಾ ಆಗಿವೆ.

ಎನ್.ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿ ಆಧಾರಿತ ಪತ್ತೇದಾರಿ ಸಿನಿಮಾ ಇಂದಿಗೂ ಒಂದು ರಚನೆಗೊಂಡಿಲ್ಲ. ಆದರೆ ಇವರ ಪತ್ತೇದಾರಿ ಕಾದಂಬರಿಗಳಲ್ಲಿ ಬರುವ ಕೆಲವು ಕಥಾ ತುಣುಕುಗಳನ್ನು ಆಯ್ಕೆ ಮಾಡಿ ಸಿನಿಮಾಗಳಲ್ಲಿ ಹಾಕಿಕೊಂಡಿರುವ ಸನ್ನಿವೇಶಗಳ ಕಾದಂಬರಿಯನ್ನು ಓದಿದರೆ ತಿಳುವಳಿಕೆ ಬರುತ್ತವೆ.

ಕನ್ನಡದ ಚಲನಚಿತ್ರಗಳಲ್ಲಿ ಪತ್ತೇದಾರಿ ಸಿನಿಮಾಗಳು ಬೇಕಾದಷ್ಟು ಇವೆ. ಎನ್.ನರಸಿಂಹಯ್ಯನವರ ಆದರೆ ಸಾಹಿತ್ಯ ಯಾವುದೇ ಪತ್ತೇದಾರಿ ಕಾದಂಬರಿಯನ್ನು ಯಥವತ್ತಾಗಿ ತೆಗೆದುಕೊಂಡು ಸಿನಿಮಾ ಮಾಡಿಲ್ಲ. ಆದರೆ ಕೆಲವು ಪತ್ತೇದಾರಿ ಕಾದಂಬರಿಗಳ ಸ್ವಲ್ಪ ಭಾಗಗಳನ್ನು ಆಯ್ದುಕೊಂಡು ಸಿನಿಮಾ ಮಾಡಲಾಗಿದೆ. ಎನ್. ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿಗಳು ಯಥೇಚ್ಛವಾಗಿ ಸನ್ಯಾಸಿಗಳ, ಭಾನಾಮತಿಯ ಸನ್ನಿವೇಶವನ್ನು ಹೊಂದಿರುವುದರಿಂದ ಇವುಗಳ ಕಥಾವಸ್ತುವನ್ನೇ ಸಿನಿಮಾವನ್ನಾಗಿ ಮಾಡಲು ಸಾಧ್ಯವಿಲ್ಲ. ಕೇವಲ ಕುಟುಂಬದಲ್ಲಿ ಜರುಗಿದ ಯಾವುದೋ ಒಂದು ಘಟನೆಯನ್ನೇ ಕುರಿತು ಕಾದಂಬರಿ ಇರುವುದರಿಂದ, ಇದನ್ನೇ ಸಿನಿಮಾವನ್ನಾಗಿ ಸೃಷ್ಟಿಸಲು ಸಾಧ್ಯವಿಲ್ಲವೆಂದು ನಿರ್ದೇಶಕರುಗಳು ಕೆಲವು ಪ್ರಸಂಗಗಳನ್ನು ಮತ್ತು ಘಟನೆಗಳನ್ನು ಮಾತ್ರ ಆಯ್ಕೆ ಮಾಡಿರುತ್ತಾರೆ. ಅಲ್ಲದೆ ಅನೇಕ ವಿಚಾರಗಳನ್ನು ಹೆಣೆದು ಅದರಲ್ಲಿ ಇವುಗಳನ್ನು ಜೋಡಿಸಿರುತ್ತಾರೆ. ಆದಕಾರಣ ಒಂದು ರೀತಿಯಲ್ಲಿ ಪತ್ತೇದಾರಿ ಕಾದಂಬರಿಗಳು ಸಿನಿಮಾ ಕಥಾ ಸಾಹಿತ್ಯಕ್ಕೆ ತನ್ನದೇ ಆದ ಕಾರ್ಯವನ್ನು ನಿರ್ವಹಿಸಿರುತ್ತವೆ. ಯಾವುದೇ ಸಿನಿಮಾ ರಚಿಸಬೇಕಾದರೆ ಸಾಹಿತ್ಯ ಸೊಗಡು ಚಿತ್ರ ಕಥಾಕಾರರಿಗೆ ಇರಲೇಬೇಕು. ಎಲ್ಲಾ ರೀತಿಯ ಸಾಹಿತ್ಯದಲ್ಲಿ ಕೆಲವು ಅಂಶಗಳು ಮಾತ್ರ ಒಂದು ನಿರ್ದಿಷ್ಟ

ಕಾದಂಬರಿ ರಚಿಸಲು ಸಹಾಯಕವಾಗುತ್ತವೆ. 'ಬೊಂಬಾಯಿ ದಗಾ ಕೋರ' ಕಾದಂಬರಿಯಲ್ಲಿ ಬರುವ ಕೆಲವು ತುಣುಕುಗಳು 'ನಾನೊಬ್ಬ ಕಳ್ಳ' ಸಿನಿಮಾದಲ್ಲಿ ಸೇರಿಸಲಾಗಿದೆ. 'ಬೀದಿಯ ಪಾರಿವಾಳ' ಕಾದಂಬರಿಯ ಕೆಲವು ತುಣುಕನ್ನು 'ನಾಗರಹಾವು' ಸಿನಿಮಾಕ್ಕೆ ಸೇರಿಸಲಾಗಿದೆ. ಅಲಮೇಲುವಿನ ಗಂಡ ಹೇಗೆ ಹೆಂಡತಿಯನ್ನು ಹಣದ ಆಸೆಗಾಗಿ ವೇಶ್ಯಾವೃತ್ತಿಗೆ ದೂಡುತ್ತಾನೆಯೇ ಹಾಗೆಯೇ ಬೀದಿಪಾರಿವಾಳದಲ್ಲಿ ಪಾಪಣ್ಣ ರಾಜಾಮಣಿಯನ್ನು ಮುನಿಯಯ್ಯನ ಕಾಮದ ಕೂಪಕ್ಕೆ ತಳುತ್ತಾನೆ. ಇದೊಂದು ಸಿನಿಮಾ ಕಥಾ ಸಾಹಿತ್ಯಕ್ಕೆ ಅತ್ಯುತ್ತಮ ನಿದರ್ಶನವಾಗಿದೆ. ಇಲ್ಲಿ ನಾವು ತಿಳಿಯಬೇಕಾದ ಅಂಶವೆಂದರೆ ನಾಗರಹಾವು ಸಿನಿಮಾ ಮತ್ತು ಬೀದಿಯ ಪಾರಿವಾಳ ಕಾದಂಬರಿಯೂ ೧೯೭೦ ರ ದಶಕದಲ್ಲಿ ಎರಡೂ ಬಂದಿವೆ. ಆದಕಾರಣ ಇಲ್ಲಿ ಯಾವುದನ್ನು ಅನುಕರಿಸಿ ಬಂದಿವೆಂದು ಹೇಳಲು ದ್ವಂದ್ವದ ಸನ್ನಿವೇಶ ಉಂಟಾಗುತ್ತದೆ. ಎಷ್ಟೋ ವಿಚಾರಗಳ ಬಗ್ಗೆ ವಿಶ್ಲೇಷಣೆ ಮಾಡಿದರೂ ಒಂದು ರೀತಿಯಲ್ಲಿ ಸಾಹಿತ್ಯ ರಾಶಿಗೆ ಕೊಡುಗೆ ನೀಡಿದ ಎನ್. ನರಸಿಂಹಯ್ಯ ಕಾದಂಬರಿಗಳು ತಮ್ಮದೇ ಆದ ಕೊಡುಗೆ ನೀಡಿದೆ. ಇಲ್ಲಿ ಸಿನಿಮಾದವರಿಗೆ ಅನುಕೂಲವಾಗಿದೆಯೋ ಅಥವಾ ಜನಸಾಮಾನ್ಯರ ಮನರಂಜನೆಗೆ ನಾಂದಿಯಾಗಿದೆಯೋ ಒಟ್ಟಿನಲ್ಲಿ ಇದರಿಂದ ಅದರದೇ ಅದರ ಕೊಡುಗೆ ಇದೆಯೆಂದು ತಿಳಿಯಬಹುದು.

ಅಧ್ಯಾಯ–೮

ಎನ್. ನರಸಿಂಹಯ್ಯ ಕಾದಂಬರಿಗಳಲ್ಲಿ ಬರುವ ಪತ್ತೇದಾರಿ ವಿಧಾನದಲ್ಲಿ ಬರುವ ಕೆಲವು ತಂತ್ರಗಳು

ಎನ್.ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿಗಳ ಮೂಲಾಂಶಗಳನ್ನು ಪರಿಶೀಲಿಸಿದಾಗ ಕೆಲವು ಪತ್ತೇಹಚ್ಚುವಿಕೆ ತಂತ್ರಗಳನ್ನು ನನ್ನದೇ ಆದ ಸಂಶೋಧನಾ ರೀತಿಯಲ್ಲಿ ಸಾದರಪಡಿಸಿದ್ದೇನೆ. ಪತ್ತೇದಾರ ಪ್ರತಿ ಪ್ರಕರಣವನ್ನು ಭೇದಿಸಬೇಕಾದರೆ ತನ್ನದೇ ಆದ ತಂತ್ರಗಳನ್ನು ಬಳಸುತ್ತಾನೆ. ಅಲ್ಲದೆ ಅನುಮಾನಕ್ಕೆ ಬರುವ ಎಲ್ಲಾ ಜನರನ್ನು ವಿಚಾರಣೆಗೆ ಒಳಪಡಿಸುತ್ತಾನೆ. ವಿಚಾರಣೆ ಸಮಯದಲ್ಲಿ ವ್ಯಕ್ತಿ ವರ್ತಿಸುವ ರೀತಿ, ನೀಡುವ ಉತ್ತರ, ಅವರ ಹಾವಭಾವಗಳನ್ನು ಮುಂತಾದ ಎಲ್ಲಾ ಮಾಹಿತಿಗಳನ್ನೆಲ್ಲವನ್ನು ವ್ಯವಸ್ಥಿತವಾಗಿ ವಿಶ್ಲೇಷಣೆ ಮಾಡುವುದಲ್ಲದೆ ಅದರಿಂದ ದೊರಕಿದ ವಿಚಾರಕ್ಕೆ ಒಂದುರೀತಿಯಾದ ಮಾಹಿತಿಗಳ ಸಂಬಂಧವನ್ನು ಗುರುತಿಸಿ ಅಂತಿಮ ತೀರ್ಮಾನಕ್ಕೆ ಬರುವ ಅಥವಾ ಇವನಿಂದಲೇ ಈ ಕೃತ್ಯ ಜರುಗುತ್ತಿದೆ ಎಂದು ತಿಳಿಯುವ ಸಂದರ್ಭದಲ್ಲಿ ಅನೇಕ ತಂತ್ರಗಳನ್ನು ಬಳಸಬೇಕಾಗುತ್ತದೆ. ಅದನ್ನೇ ಈ ಅಧ್ಯಾಯದಲ್ಲಿ ಮೂರು ರೀತಿಯಲ್ಲಿ ವಿಂಗಡಿಸಿ ತಿಳಿಸಲಾಗಿದೆ. ಅವುಗಳೆಂದರೆ,

೧) ಹೊರನೋಟದ ತಂತ್ರಗಳು

೨) ಒಳನೋಟದ ತಂತ್ರಗಳು

೩) ತಾಳೆ ನೋಡುವಿಕೆ ತಂತ್ರಗಳು

೧) ಹೊರ ನೋಟದ ತಂತ್ರಗಳು:

ಒಂದು ಪ್ರಕರಣವನ್ನು ಭೇಧಿಸುವಾಗ ಪತ್ತೇದಾರ ಇಡೀ ಪ್ರಕರಣದ ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸಿ ಹೊರನೋಟದ ಮಾಹಿತಿಗಳನ್ನು ಒಂದು ಕಡೆಗೆ ಸಂಗ್ರಹಿಸಿ ಆ ಪ್ರಕರಣಕ್ಕೆ ಬೇರೆ ಬೇರೆ ಅಂದರೆ ಉದಾ: ಒಂದು ಮನೆಯಲ್ಲಿ ನಡೆದ ಕೊಲೆಯ ಬಗ್ಗೆ ಇರಬಹುದು ಅಥವಾ ಒಂದು ಅತ್ಯಾಚಾರಕ್ಕೆ ಸಂಬಂಧಿಸಿದ ವಿಷಯ ಇರಬಹುದು, ಒಂದು ಅಂಗಡಿಯಲ್ಲಿ ನಡೆದ ಕಳ್ಳತನ ಇರಬಹುದು, ಬ್ಯಾಂಕಿನಲ್ಲಿ ನಡೆದ ದರೋಡೆ ಇರಬಹುದು, ಹೆಣ್ಣಿನ ಮೋಸದ ಜಾಲ ಇರಬಹುದು, ಇವೆಲ್ಲ ಪ್ರಕರಣಗಳಿಗೆ ಹೊರನೋಟಕ್ಕೆ ಕಾಣುವ ಮಾಹಿತಿಯನ್ನು ಸಂಗ್ರಹಿಸಿ, ನಂತರ

೧) ಪ್ರಕರಣ ಸಂಬಂಧಿಸಿದವರು ಹೊರಗಿನವರ ನಡುವೆ ಸಂಪರ್ಕವಿದೆಯೋ?

೨) ಪ್ರಕರಣವು ಆಕಸ್ಮಿಕವಾಗಿ ಸಂಭವಿಸಿದೆಯೋ?

೩) ಹೊರಗಿನವರ ಸಾಕ್ಷಿಗಳು ಪ್ರಕರಣಕ್ಕೆ ಸಂಬಂಧಿಸಿದೆಯೋ?

೪) ಬೇರೆಯವರಿಂದ ಅಪರಾಧ ಸಂಭವಿಸಿದೆಯೋ?

೫) ಬೇರೆಯವರ ದ್ವೇಷಕ್ಕೆ ಬಲಿಯಾದ ಪ್ರಕರಣವೇ ?

೬) ಒಳಗಿನವರು ಹೊರಗಿನವರಿಂದ ಮಾಡಿಸಿದ ಪ್ರಕರಣವೇ?

೭) ಹೊರಗಿನವರ ದುರಾಸೆಗೆ ಬಲಿಯಾದ ಪ್ರಕರಣವೇ?

೮) ಹೊರಗಿನ ವಿಚಾರಕ್ಕೆ ನಡೆದ ಕೃತ್ಯವೇ?

೯) ಹೊರಗಿನ ಅಂದರೆ ಕುಟುಂಬವನ್ನು ಹೊರತುಪಡಿಸಿ ನಡೆದ ಪ್ರಕರಣವೇ?

೧೦) ಅಪರಾಧ ನಡೆದ ಸ್ಥಳ ಆತನ ವಾಸಕ್ಕಿಂತ ದೂರ, ಹೊರಗಿನ ಪ್ರದೇಶದಲ್ಲಿಯೇ?

ಮೇಲ್ಕಂಡ ಎಲ್ಲಾ ಮಾಹಿತಿಗಳನ್ನು ಹೊರಗಿನ ಮಾಹಿತಿಗಳೆಂದು ವರ್ಗೀಕರಿಸಿ ಪ್ರಕರಣಕ್ಕೆ ಸಂಬಂಧಿಸಿದ ತೀರ್ಮಾನವನ್ನು ಕೈಗೊಳ್ಳಬೇಕಾದರೆ ಆ ಪ್ರಕರಣಕ್ಕೆ ಹೊರಗಿನ ಮಾಹಿತಿಗಳೆಲ್ಲ ಎಷ್ಟು ಹತ್ತಿರ ಸಂಬಂಧವನ್ನು ತಿಳಿಸುತ್ತವೆಂದು ಸೂಕ್ಷ್ಮವಾಗಿ ಪತ್ತೇದಾರ ನೋಡುತ್ತಾನೆ. ಕೆಲವು ಬಾರಿ ಎಷ್ಟೋ ಪ್ರಕರಣಗಳಲ್ಲಿ ಈ ಹೊರಗಿನ ತಂತ್ರಗಳ ಪ್ರಕರಣದಲ್ಲಿ ಪ್ರಮುಖ ಪಾತ್ರವಹಿಸಬಹುದು, ಅಲ್ಲದೆ ಯಾವುದೇ ಪಾತ್ರವಹಿಸದೇ ಇರಬಹುದು. ಒಟ್ಟಿನಲ್ಲಿ ಪ್ರಕರಣ ಭೇದಿಸುವಿಕೆಯಲ್ಲಿ ಹೊರ ನೋಟದ ತಂತ್ರಗಳು ತನ್ನದೇ ಆದ ಪಾತ್ರವನ್ನು ವಹಿಸುತ್ತವೆ.

ಈ ಮೇಲಿನ ಎಲ್ಲಾ ತಂತ್ರಗಳ ಮೂಲಕ, ಯೋಚನೆಗಳ ಮೂಲಕ ಪತ್ತೇದಾರ ತನ್ನ ಪತ್ತೇದಾರಿಯ ಪ್ರಸಂಗವನ್ನು ಪತ್ತೇಹಚ್ಚುವ ವಿಧಾನವನ್ನು ಕಾದಂಬರಿಗಳಲ್ಲಿ ಪ್ರಧಾನವಾಗಿವೆ.

೨) ಒಳನೋಟದ ತಂತ್ರಗಳು:

ಪತ್ತೇದಾರಿ ಕಾದಂಬರಿಗಳಲ್ಲಿ ಬರುವ ನಾಯಕನಾದ ಪತ್ತೇದಾರ ಪ್ರಕರಣವನ್ನು ಬೇಧಿಸುವಾಗ ಒಳನೋಟ ತಂತ್ರಗಳು ಅಂದರೆ, ಆ ಪ್ರಕರಣದ ಸುತ್ತ ಅಲ್ಲಿರುವ ಸಂಬಂಧದ ಒಳಗಡೆನೇ ಪತ್ತೇ ಮಾಡುವ ತಂತ್ರಗಳೇ ಒಳನೋಟ ತಂತ್ರಗಳು ಅವುಗಳೆಂದರೆ,

೧) ಪ್ರಕರಣದ ಸಂಬಂಧಿಕರ ಬಗ್ಗೆ ಕೂಲಂಕಷ ವಿಚಾರಣೆ

೨) ಪ್ರಕರಣ ಹತ್ಯೆಯ ಸ್ನೇಹಿತರ ಒಳಗಡೆನೇ ಕೂಲಂಕಷ ವಿಚಾರಣೆ

೩) ಮನೆಯ ವಾತಾವರಣದ ಮೇಲೆ ವಿಚಾರಣೆ

೪) ಹತ್ಯೆಯ / ಮೋಸಕ್ಕೊಳಗಾದ ವ್ಯಕ್ತಿಯ ಸ್ಥಳ ವ್ಯವ್ಯಹಾರದ ಒಳಗಡೆ ವಿಚಾರಣೆ

೫) ವ್ಯಕ್ತಿಯ ಅಕ್ಕ – ಪಕ್ಕದವರೊಡನೆ ವಿಚಾರಣೆ

೬) ಕೃತ್ಯಕ್ಕೆ ಒಳಗಾದ ವ್ಯಕ್ತಿಯ (ನಡತೆಯ ಮಾನಸಿಕ) ಚಲನ–ವಲನಗಳ ಮೇಲೆ ಮಾಹಿತಿ ಸಂಗ್ರಹ

೭) ಪ್ರಕರಣಕ್ಕೆ ಅಪರಾಧ ಹೊರಿಸಿದ ವ್ಯಕ್ತಿಯನ್ನೇ ವಿಚಾರಣೆ ನಡೆಸುವುದು

೮) ಆತ್ಮಹತ್ಯೆಯೋ ಅಥವಾ ಸ್ವತಹ ಹರಣ ಮಾಡಿಕೊಳ್ಳುವ ಬಗ್ಗೆ ಮಾಹಿತಿ ತಿಳಿಯುವುದು.

೯) ಬೇರೊಬ್ಬ ಅಚಾತುರ್ಯಕ್ಕೆ ಬಲಿಯಾದ ಪ್ರಕರಣವೋ ಎಂಬ ಬಗ್ಗೆ ವಿಶ್ಲೇಷಿಸುವುದು.

೧೦) ಅಪಘಾತಕ್ಕೆ ಒಳಗಾಗಿ ಅದರಿಂದುಂಟಾದ ಭಯಕ್ಕೆ ಕೊಲೆಗೈದ ಬಗ್ಗೆ ವಿಶ್ಲೇಷಿಸುವುದು.

ಈ ಮೂಲಕ ಒಳನೋಟದ ತಂತ್ರಗಳು ಒಬ್ಬ ವ್ಯಕ್ತಿಯ ಸುತ್ತಲಿನ ವಾತಾವರಣದಲ್ಲಿ ನಡೆಯುವ ತನಿಖೆಯಾಗಿರುತ್ತದೆ. ಅಪರಾಧ ನಡೆಯುವ ಪ್ರಕರಣಗಳಲ್ಲಿ ಸುಮಾರು ಅರ್ಧಕ್ಕಿಂತ ಹೆಚ್ಚಿಗೆ ಇಂತಹ ಕೃತ್ಯಗಳೇ ನಡೆಯುವುದೆಂದು ಕಾದಂಬರಿಕಾರರು ಹೇಳಿದ್ದಾರೆ. ಅಸೂಯೆ, ದ್ವೇಷ, ಕುಟುಂಬದ ಕಲಹಕ್ಕೆ ಇಂತಹ ಪ್ರಕರಣಗಳು ನಡೆಯುತ್ತವೆ. ಮೇಲ್ಕಂಡ ತಂತ್ರಗಳಲ್ಲಿ ವಿಚಾರಣೆ ನಡೆದರೆ ತಕ್ಷಣ ಅಪರಾಧಿ ಸಿಕ್ಕಿಕೊಳ್ಳುವುದರಲ್ಲಿ ಎರಡು ಮಾತಿಲ್ಲವೆಂದು ಪತ್ತೇದಾರ ಪೋಲೀಸ್‌ನವರೊಡನೆ ಮಾತನಾಡಿದ ಪ್ರಸಂಗಗಳು ಕಾದಂಬರಿಯಲ್ಲಿ ವ್ಯಕ್ತವಾಗಿವೆ. ಪ್ರಕರಣವನ್ನು ಭೇದಿಸುವಿಕೆಯಲ್ಲಿ ಒಳನೋಟದ ತಂತ್ರಗಳು ಅತಿ ಹೆಚ್ಚುಪಾತ್ರ ನಿರ್ವಹಿಸುತ್ತವೆ. ಏಕೆಂದರೆ ಆ ಪ್ರಕರಣದ ಪೂರ್ಣ ನಡತೆ ಇದರಿಂದಲೇ ಗೊತ್ತಾಗುತ್ತದೆ. ಪ್ರತಿಯೊಂದು ಪ್ರಕರಣವನ್ನು ಪತ್ತೇದಾರ ಭೇದಿಸುವಾಗ ತಳಹದಿಯಾಗಿ ವ್ಯಕ್ತಿಯ ತಳದಿಂದ ವಿಚಾರಿಸುತ್ತಾ ಹೋಗುತ್ತಾರೆ. ಆದಕಾರಣ ಒಳನೋಟದ ತಂತ್ರಗಳು ಪ್ರಕರಣಕ್ಕೆ ತುಂಬಾ ಸಹಾಯಕ ಪಾತ್ರ ನಿರ್ವಹಿಸುತ್ತವೆ.

೩) ತಾಳೆ ನೋಡುವಿಕೆಯ ತಂತ್ರಗಳು

ಪತ್ತೇದಾರ ಹೊರನೋಟ ಮತ್ತು ಒಳನೋಟ ಎರಡು ತಂತ್ರಗಳ ಬಗ್ಗೆ ಕೂಲಂಕಷವಾಗಿ ದೀರ್ಘವಾಗಿ ಯೋಚಿಸಿ ತೀರ್ಮಾನ ತೆಗೆದುಕೊಳ್ಳುವ ತಂತ್ರವೇ ತಾಳೆ ನೋಡುವಿಕೆ ತಂತ್ರಗಳು ಎನ್ನುತ್ತಾರೆ. ಈ ಬಗ್ಗೆ ತೀರ್ಮಾನ ಕೈಗೊಳ್ಳಬೇಕಾದರೆ ಪತ್ತೆದಾರ ಎಲ್ಲಾ ಮಜಲುಗಳಲ್ಲಿ ತಾಳೆ ನೋಡುವ ತಂತ್ರವನ್ನು ಅನುಸರಿಸಬೇಕಾಗುತ್ತದೆ. ಕೆಲವು ಬಾರಿ ಎರಡು ತಂತ್ರಗಳು ಕೈಕೊಟ್ಟಾಗ ತನ್ನ ವಿಶ್ಲೇಷಣಾ ಶಕ್ತಿಯಿಂದ ಪತ್ತೇ ಹಚ್ಚುವಿಕೆಯೇ ಅಂತಿಮವಾದ ಮಾರ್ಗವಾಗಿರುತ್ತದೆ. ಕೆಲವು ತಾಳೆ ನೋಡುವಿಕೆಯ ತಂತ್ರಗಳೆಂದರೆ,

೧. ಪ್ರಕರಣ ಹೊರ ಮತ್ತು ಒಳನೋಟದ ತಂತ್ರಗಳಿಗೆ ಪ್ರಕರಣ ಸಾಮ್ಯತೆ ಇದೆಯೇ?

೨. ಕೇವಲ ಕುಟುಂಬದಲ್ಲಿನ ಕೈವಾಡದಿಂದಲೇ ಅಪರಾಧ ಜರುಗಿದೆಯೇ?

೩. ದೂರದವರ ಕುತಂತ್ರಕ್ಕೆ ಗುರಿಯಾದ ಪ್ರಕರಣವೇ?

೪. ಹೊರ ಮತ್ತು ಒಳನೋಟ ತಂತ್ರ ಕೂಡಿಸಿದರೆ ಒಂದು ಕಥೆ ಸೃಷ್ಟಿಯಾಗುತ್ತದೆಯೇ?

೫. ಪ್ರಾಕೃತಿಕ ಸಂಬಂಧಕ್ಕೆ ಬಲಿಯಾದುದೇ?

೬. ಎರಡು ತಂತ್ರಗಳ ನಡುವೆ ಗೊಂದಲವಿದೆಯೇ?

ಮೇಲಿನ ಅಂಶಗಳು ಕೊನೆಗೆ ಪತ್ತೇದಾರಿ ಪ್ರಕರಣ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ವರ್ಗೀಕರಿಸಿ ಅಂತಿಮವಾಗಿ ತೀರ್ಪು ಕೈಗೊಳ್ಳುವ ಅಥವಾ ತೀರ್ಮಾನ ಕೈಗೊಳ್ಳುವಾಗ ಸೂಕ್ಷ್ಮವಾಗಿ ಮಾಹಿತಿಗಳನ್ನು ನೋಡುವುದಲ್ಲದೆ ಎಳೆ-ಎಳೆಯಾಗಿ ಬಿಡಿಸಿ ಗುರ್ತಿಸಬೇಕಾಗುತ್ತದೆ. ಪತ್ತೇದಾರ ಪೂರ್ಣ ಬುದ್ಧಿವಂತಿಕೆ ತಿಳಿಯುವುದೇ ಈ ಒಂದು ಹಂತದಲ್ಲಿ ಮಾತ್ರ. ಪೋಲೀಸ್ ವ್ಯವಸ್ಥೆಯಲ್ಲಿಯೂ ಪ್ರಕರಣವನ್ನು ಭೇದಿಸುವಾಗ ಬಂದ ಮಾಹಿತಿಗೆ ತೀರ್ಮಾನ ಕೈಗೊಳ್ಳುವುದೇ ಪ್ರಮುಖ ಪಾತ್ರ ವಹಿಸುತ್ತದೆ.

ಇಡೀ ಪ್ರಕಣರವನ್ನು ಸುಲಭವಾಗಿ ಗುರ್ತಿಸುವುದೇ ಈ ತಾಳೆ ನೋಡುವಿಕೆಯ ತಂತ್ರದಿಂದ ಮಾತ್ರ ಸಾಧ್ಯವಾಗುತ್ತದೆ. ಲಭ್ಯವಿದ್ದ ಎಲ್ಲಾ ಮಾಹಿತಿಗಳನ್ನು ಹಂತ-ಹಂತವಾಗಿ ವಿಶ್ಲೇಷಿಸಿ ತನ್ನದೇ ಆದ ಒಂದು ತೀರ್ಮಾನ ಕೈಗೊಳ್ಳಬೇಕಾಗುತ್ತದೆ. ಕೆಲವು ಪ್ರಕರಣಗಳಲ್ಲಿ ದೂರದ ಅಪರಾಧಿಗಳಾದರೆ, ಮತ್ತೆ ಕೆಲವು ಪ್ರಕರಣಗಳಲ್ಲಿ ಹತ್ತಿರದವರೇ ಅಪರಾಧಿಗಳಾಗಿರುತ್ತಾರೆ.

ಹೀಗೆ ಮೇಲಿನ ಎಲ್ಲಾ ತಂತ್ರಗಳನ್ನು ಎನ್. ನರಸಿಂಹಯ್ಯ ಕಾದಂಬರಿಯಲ್ಲಿ ಬರುವ ಪತ್ತೇದಾರ ಬಹಳ ಚಾಣಾಕ್ಷತೆಯಿಂದ ಎಲ್ಲಾ ಪ್ರಕರಣಗಳಲ್ಲಿ ಗೆಲ್ಲುವ ಪ್ರಸಂಗವನ್ನು ಪ್ರತಿ ಕಾದಂಬರಿಯಲ್ಲಿ ಕಾಣುತ್ತೇವೆ. ಒಟ್ಟಿನಲ್ಲಿ ಇವರ ಕಾದಂಬರಿಯಲ್ಲಿ ಬರುವ ಪತ್ತೇದಾರಿಕೆಯ ತಂತ್ರಗಳನ್ನು ನನ್ನ ಸಂಶೋಧನಾ ಮಟ್ಟಿಗೆ ಹೇಳ ಹೊರಟಿದ್ದೇನೆ.

ಅಧ್ಯಾಯ–೯

ಉಪಸಂಹಾರ

ಕನ್ನಡ ಪುಸ್ತಕಗಳೆಂದರೆ ಮೂಗು ಮುರಿಯುತ್ತ ಇದ್ದ ಕಾಲದಲ್ಲಿ ಒಂದು ಪೀಳಿಗೆಯ ಜನರನ್ನು ಓದುವ ಹವ್ಯಾಸಕ್ಕೆ ತೊಡಗಿಸಿದ "ಪತ್ತೇದಾರಿ ಕಾದಂಬರಿಗಳ ಚಕ್ರವರ್ತಿ ಎನ್.ನರಸಿಂಹಯ್ಯನವರ ಕಾದಂಬರಿಗಳ ಒಂದು ಅಧ್ಯಯನ" ಅನೇಕ ಅಂಶಗಳನ್ನು ಹೊರಚೆಲ್ಲುತ್ತದೆ. ಇವರು ಕಡಿಮೆ ಓದಿದ್ದರೂ (ಳನೇ ತರಗತಿ) ನೂರಾರು ಪತ್ತೇದಾರಿ ಕಾದಂಬರಿಗಳನ್ನು ಬರೆದಿರುವ ಹಲವು ದಶಕಗಳ ಸಾಮಾನ್ಯರಿಗೆ ಓದುವ ಗೀಳನ್ನಂಟಿಸಿದ ಮತ್ತು ಅವರಲ್ಲಿ ಅನೇಕರನ್ನು ಬರಹಗಾರರನ್ನಾಗಿ ರೂಪಿಸಿದ, ಅದೂ ಅಕ್ಷರ ಸೌಲಭ್ಯ ವಂಚಿತ ದಲಿತ ಕುಟುಂಬದಿಂದ ಬಂದಿರುವ, ಇವರ ಅಸಂಖ್ಯಾತ ಕಾದಂಬರಿಗಳು ನಮ್ಮಲ್ಲಿ ವಾಚನಾಭಿರುಚಿಯನ್ನು ಬೆಳೆಸಿವೆ, ಬೇರೆ ಬೇರೆ ಕ್ಲಾಸಿಕ್ ಕೃತಿಗಳ ಕಡೆ ವಾಲುವಂತೆ ಮಾಡಿದ ಪ್ರಪ್ರಥಮ ಸೋಪಾನ ಶ್ರೇಯಸ್ಸು ನಿಸ್ಸಂದೇಹವಾಗಿ ಎನ್.ನರಸಿಂಹಯ್ಯವರಿಗೆ ಸಲ್ಲಬೇಕು. ಇವರ ಎಲ್ಲಾ ಕಾದಂಬರಿಗಳು ಸರಳ, ಸುಂದರ, ಒಮ್ಮೆ ಓದಲೆತ್ನಿಸಿಕೊಂಡರೆ ಕೆಳಗಿಡಲಿಕ್ಕಾಗದಷ್ಟು ಕುತೂಹಲಕಾರಿಯಾದವುಗಳು, ಅಹಂಕಾರ ಬದಿಗೊತ್ತಿ ಓದಿದವರಿಗೆ ಇವು ಕೊಡುವ ಥ್ರಿಲ್ಲು. ಅನುಭವ ಅನನ್ಯ ರೀತಿಯದು ಖಂಡಿತ. ಈ ಕಾದಂಬರಿಗಳಿಗೆ ಪುಸ್ತಕ ಪ್ರೀತಿಗೆ ಪುನರ್ಜನ್ಮ ನೀಡುವಂಥ ಅಗಾಧ ತಾಕತ್ತಿದೆ. ಹಲವಾರು ಸಾಮಾಜಿಕ ಸಮಸ್ಯೆಗಳನ್ನೆತ್ತಿಕೊಂಡು ಅವುಗಳನ್ನು ದಿಟ್ಟತನದಿಂದಲೂ ಧೈರ್ಯದಿಂದಲೂ ಕಾದಂಬರಿಗಳಲ್ಲಿ ವಿಶ್ಲೇಷಿಸುವುದು ತುಂಬಾ ಮೆಚ್ಚುಗೆಯಾದ ಅಂಶವಾಗಿದೆ.

ಕನ್ನಡದ ಸುಪ್ರಸಿದ್ಧ ಕಾದಂಬರಿಕಾರರಿಗಿಂತಲೂ ಎನ್.ನರಸಿಂಹಯ್ಯನವರ ಕಾದಂಬರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟವಾಗಲು ಇವರ ಕಥಾಶೈಲಿ, ನಿರೂಪಣಾ ವಿಧಾನ, ಸಂಭಾಷಣಾ ವಿಧಾನ, ಕುತೂಹಲ ವಿಧಾನದಿಂದ ಹೆಚ್ಚು ಸಾಧ್ಯವಾಗಿದೆ. ಇವರು ತನ್ನದೇ ಆದ ಓದುಗ ಅಭಿಮಾನಿಗಳ ದಂಡನ್ನು ಹೊಂದಿದ್ದರು. ಆ ರೀತಿಯಲ್ಲಿ ಎನ್.ನರಸಿಂಹಯ್ಯನವರು ಹೆಚ್ಚು ಪ್ರಸಿದ್ಧಿ ಪಡೆದಿದ್ದರು.

ಇವರ ಕಾದಂಬರಿಯಲ್ಲಿ ಪತ್ತೇದಾರ ತನ್ನ ಚಾಣಾಕ್ಷತನದಿಂದ ಪ್ರಕರಣವನ್ನು ಪತ್ತೇ ಮಾಡುವ ವಿಧಾನ ಹೆಚ್ಚು ಆಧುನಿಕವಾದುದು. ಅಲ್ಲದೆ ಅಳವಡಿಸಿಕೊಳ್ಳಬಲ್ಲ ತಂತ್ರವಾಗಿದೆ. ಕೆಲವು ಬಾರಿ ಎಲ್ಲರಿಂದಲೂ ಕಲಿಯುವಂತಹ ಗುಣಗಳಿರುತ್ತವೆಯಂತೆ, ಇವರ ಕಾದಂಬರಿಗಳಲ್ಲಿ

ವ್ಯಕ್ತಗೊಂಡಿರುವ ಪತ್ತೇ ಹಚ್ಚುವಿಕೆ ತಂತ್ರವಿರಬಹುದು, ಕುತೂಹಲ ಹುಟ್ಟಿಸುವ ವಿಧಾನ ವಿರಬಹುದು, ಸಹೃದಯ ತರ್ಕಬದ್ಧವಾಗಿ ಸೋದಾಹರಣವಾಗಿ ವಿವರಿಸುವುದಿರಬಹುದು, ಮಾನವ ಸಾಮಾನ್ಯ ಪ್ರಜ್ಞೆಯನ್ನು ಎಚ್ಚರಗೊಳಿಸುವ ವಿಧಾನವಿರಬಹುದು, ಇವೆಲ್ಲವೂ ಕಾದಂಬರಿಯಲ್ಲಿ ಸುವ್ಯಕ್ತವಾಗಿ ತಿಳಿಸಿರುವ ಶ್ಲಾಘನೀಯ ವಿಚಾರವಾಗಿವೆ.

ಒಟ್ಟಿನಲ್ಲಿ ಈ ಸಂಶೋಧನಾ ವಿಷಯದಲ್ಲಿ ಇವರ ಕಾದಂಬರಿಗಳ ಒಂದು ಸಂಕ್ಷಿಪ್ತವಾದ ನೋಟವನ್ನು ತಿಳಿಸುತ್ತಾ ಇವರ ಅಧ್ಯಯನದ ಮಹತ್ವವನ್ನು ಸಮಾಜದ ವಿಧಾನವನ್ನು ವಿಶ್ಲೇಷಣಾತ್ಮಕವಾಗಿ ಅಧ್ಯಯನಿಸಲಾಗಿದೆ.

ಪತ್ತೇದಾರಿ ಕಾದಂಬರಿಗಳ ಸಂಶೋಧನೆ ಒಂದು ರೀತಿಯ ರೋಚಕ ಅನುಭವ ಅಂದರೆ ಕಾದಂಬರಿಕಾರರ ವೈಯಕ್ತಿಕ ವಿಚಾರಗಳ ಬಗ್ಗೆ ತಾವು ಕಂಡು-ಉಂಡ ವಿಚಾರಗಳನ್ನು ತಿಳಿಸಲಾಗಿದೆ. ಸಾಮಾನ್ಯವಾಗಿ ಕುಟುಂಬದಲ್ಲಿ ಸಂಭವಿಸುವ ಘಟನೆಯನ್ನು ಇಲ್ಲಿ ತಿಳಿಸಿದ್ದಾರೆ. ಇದರಿಂದ ನಮಗೆ ತಿಳಿಯುವ ಸಂಗತಿ ಎಂದರೆ ಸಮಾಜದ ಅತ್ಯಂತ ಚಿಕ್ಕ ಘಟಕವಾದ ಕುಟುಂಬದಲ್ಲಿ ನಡೆಯುವ ಘಟನೆಗಳು ಮಾನಸಿಕ ನೆಮ್ಮದಿಯನ್ನು ಹಾಳು ಮಾಡುತ್ತದೆಂಬುದನ್ನು ಕೆಲವು ಸಂದರ್ಭಗಳಲ್ಲಿ ತುಂಬಾ ಅರ್ಥಗರ್ಭಿತವಾಗಿ ತಿಳಿಸಿದ್ದಾರೆ.

ಪತ್ತೇದಾರಿ ಕಾದಂಬರಿಗಳಲ್ಲಿ ಪತ್ತೇದಾರನಿಗೆ ಎಷ್ಟು ಪ್ರಾಮುಖ್ಯತೆ ನೀಡಿದ್ದಾರೆಂದರೆ ಯಾವ ಕಾದಂಬರಿಯಲ್ಲಿಯೂ, ಪತ್ತೇದಾರನಿಗೆ ಸಾವು ಬಂದು ಅವನ ನಂತರ ಬೇರೆ ಪತ್ತೇದಾರ ಬಂದ ಪ್ರಸಂಗ ಯಾವುದು ಇಲ್ಲ. ಆದರೆ ನಿಜ ಜೀವನದಲ್ಲಿ ಕೇಂದ್ರ ತನಿಖಾ ತಂಡ (CBI) ಆಂತರಿಕ ಭದ್ರತೆ (IB), ಅಪರಾಧ ತನಿಖಾ ಇಲಾಖೆ(CID), ಬರುವ ಪತ್ತೇದಾರ ನಡೆಸುವ ತನಿಖೆಯಲ್ಲಿ ಕೆಲವು ಬಾರಿ ಅನಾಹುತ ನಡೆದು, ಪತ್ತೇದಾರಿ ಸಾಯುತ್ತಾನೆ. ಆದರೆ ಪತ್ತೇದಾರಿ ಕಾದಂಬರಿಯಲ್ಲಿ ಈ ರೀತಿ ಬರುವುದಿಲ್ಲ. ಪತ್ತೇದಾರ ಅದಮ್ಯ ಸನ್ನಿವೇಶಗಳನ್ನು ಎದುರಿಸಿ ನಡೆಯುವ ಸನ್ನಿವೇಶವನ್ನು ಕಾಣುತ್ತೇವೆ.

ಮತ್ತೆ ಪತ್ತೇದಾರ ಕಾದಂಬರಿಯಲ್ಲಿ ನಡೆಸುವ ವಿಚಾರಣೆ ಹಾಗೂ ಪತ್ತೇ ಹಚ್ಚುವ ವಿಧಾನಗಳ ಕೆಲವು ತುಣುಕುಗಳು ಪೊಲೀಸ್ ವ್ಯವಸ್ಥೆಗೆ ಅನುಕೂಲವಾಗಬಹುದು.

ಪತ್ತೇದಾರಿ ಸಾಹಿತ್ಯವೆಂದರೆ ಸಾಹಿತ್ಯವೇ ಅಲ್ಲ ಎಂಬ ಧ್ವನಿ ಎಲ್ಲೆಲ್ಲೂ ಕೇಳಿಬರುತ್ತಿದೆ. ಈ ಸಾಹಿತ್ಯದಲ್ಲಿ ಕಳ್ಳತನ, ಕೊಲೆ-ಸುಲಿಗೆ, ಮೋಸಗಾರಿಕೆ, ವೇಶ್ಯಾವೃತ್ತಿ ಮುಂತಾದ ಘೋರ ಕೃತ್ಯಗಳ ಬಗ್ಗೆ, ಅಶ್ಲೀಲಗಳ ಬಗ್ಗೆ ಮಾತ್ರ ಚಿತ್ರಿಸಿರುತ್ತಾರೆ. ಇವು ಓದುಗರ ಮನಸ್ಸನ್ನು

ವಿಕೃತಗೊಳಿಸುತ್ತವೆ. ಈ ಸಾಹಿತ್ಯದ ಅವಶ್ಯಕತೆ ಬೇಕಾಗಿಲ್ಲ, ಅಲ್ಲದೆ ಪತ್ತೇದಾರಿ ಕಾದಂಬರಿಕಾರರನ್ನು ಮೂಲೆಗೆ ತಳ್ಳುವ, ಪ್ರವೃತ್ತಿ, ಸಾಹಿತ್ಯದಲ್ಲಿ ಕೇಳಿ ಬರುತ್ತಿದೆ. ಈ ಸಾಹಿತಿಗಳಿಗೆ ಸರಿಯಾದ ರೀತಿಯಲ್ಲಿ ಪ್ರೋತ್ಸಾಹ- ಪ್ರಶಸ್ತಿಗಳು ದೊರಕುತ್ತಿಲ್ಲ. ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ನಗೆ ಸಂಕಲನ, ಕವನ, ತತ್ವ, ಲಾವಣಿಗಳಿಗೆಲ್ಲಾ ಮಾನ್ಯತೆ ಇದೆ. ಪತ್ತೇದಾರಿಗೆ ಮಾತ್ರ ಮಾನ್ಯತೆ ಇಲ್ಲ. ಇಂಗ್ಲೆಂಡ್-ಅಮೇರಿಕಾ-ಜಪಾನ್-ಜರ್ಮನಿ ದೇಶಗಳಲ್ಲೆಲ್ಲಾ ಪತ್ತೇದಾರಿ ಸಾಹಿತ್ಯಕ್ಕೆ ಮಾನ್ಯತೆ ಇದೆ. ಆದರೆ ನಮ್ಮ ನಾಡಿನಲ್ಲಿ ಮಾತ್ರ ಮಾನ್ಯತೆ ಇಲ್ಲ. ಪತ್ತೇದಾರಿ ಸಾಹಿತ್ಯದ ಮೇಲೆ ವಿಷಕಾರುವವರು ಎಷ್ಟೋ ಮಂದಿ ಇದ್ದಾರೆ. ಅಲ್ಲದೆ ಆ ಸಾಹಿತ್ಯವನ್ನು ಕೆಟ್ಟದಾಗಿ ನೋಡುವ ದೃಷ್ಟಿ ಜನರ ಮಾನಸದಿಂದ ಇನ್ನೂ ದೂರವಾಗಿಲ್ಲ. ಈ ಎಲ್ಲಾ ದೃಷ್ಟಿಕೋನ ದೂರಾಗಬೇಕು. ಸಾಹಿತ್ಯದ ಎಲ್ಲಾ ಪ್ರಕಾರದಲ್ಲಿಯೂ ವಿಶ್ವಾಸ, ನಂಬಿಕೆ, ಪ್ರೀತಿ ಇದ್ದರೆ ಸಾಹಿತ್ಯ ವೃದ್ಧಿಯಾಗಿ ಕನ್ನಡ ಸಾಹಿತ್ಯ ವಿಶ್ವಕ್ಕೆ ಪರಿಚಯವಾಗುವುದಲ್ಲದೆ ಖ್ಯಾತಿ ಗಳಿಸುತ್ತದೆ.

ಪ್ರತಿಯೊಂದು ಪತ್ತೇದಾರಿ ಕೃತಿಗಳಲ್ಲಿ ಮನುಷ್ಯ ಬದುಕುವ ರೀತಿಯಲ್ಲಿ ಉಂಟಾಗುವ ತಪ್ಪುಗಳನ್ನು ತೋರಿಸಲಾಗಿದೆ. ಇದರಿಂದ ಇಂತಹ ತಪ್ಪುಗಳಾದಾಗ ಎಚ್ಚರದಿಂದ ಬದುಕನ್ನು ಸಾಗಿಸಿದರೆ ಜೀವನ ಸಾರ್ಥಕತೆಯನ್ನು ಪಡೆಯುತ್ತದೆ. ನಾವು ಎಲ್ಲಾ ಕಡೆಯಿಂದ ಕಲಿಯಬೇಕಾದ ವಿಚಾರ/ವಿಷಯ ಇರುತ್ತದೆ. ಪುಲಿಗೆರೆ ಸೋಮನಾಥಕವಿ ತನ್ನ ಕೃತಿಯಾದ ಸೋಮೇಶ್ವರ ಶತಕದಲ್ಲಿ ಹಲುಬಿದ ಪದ್ಯ ಈ ರೀತಿ ಇದೆ.

ಕೆಲವಂ ಬಲ್ಲವರಿಂದ ಕಲ್ತು, ಕೆಲವಂ ಶಾಸ್ತ್ರಂಗಳಂ ಕೇಳುತಂ,
ಕೆಲವಂ ಮಾಳ್ಪವರಿಂದ ಕಂಡು, ಕೆಲವಂ ಸುಜ್ಞಾನದಿಂದ ನೋಡುತಂ
ಕೆಲವಂ ಸಜ್ಜನ ಸಂಗದಿಂದರಿಯಲ್ ಸರ್ವಜ್ಞನಪ್ಪಂ ನರಂ
ಪಲವುಂ ಪಳ್ಳ ಸಮುದ್ರವೈ ಹರಹರಾ ಶ್ರೀ ಚೆನ್ನ ಸೋಮೇಶ್ವರಾ

ಸಾಮಾನ್ಯ ಮನುಷ್ಯ ಸರ್ವಜ್ಞನಾಗಲು ಎಲ್ಲಾ ಮೂಲಗಳಿಂದ ಜ್ಞಾನ ಪಡೆದಾಗ ಮಾತ್ರ ಸರ್ವಜ್ಞನಾಗುತ್ತಾನೆನ್ನುವುದನ್ನು ಈ ಪದ್ಯದ ಬಾವಾರ್ಥ ತಿಳಿಸುತ್ತದೆ. ಅದೇ ರೀತಿ ಪತ್ತೇದಾರಿ ಸಾಹಿತ್ಯದಲ್ಲಿ ಬರುವ ಎಲ್ಲಾ ವಿಚಾರಗಳನ್ನು ತಿಳಿದುಕೊಂಡಾಗ, ಬದುಕುವಿಕೆಯ ಹಾದಿ ಸುಗಮವಾಗಿರುತ್ತದೆಂದು ಈ ಅಧ್ಯಯನ ಮೂಲ ಉದ್ದೇಶವಾಗಿದೆ.

ಅಲ್ಲದೆ ಸಮಾಜದಲ್ಲಿ ಬದುಕುವಾಗ ಎಚ್ಚರಿಕೆಯಿಂದ ಇರಬೇಕು. ಇಲ್ಲದೆ ಹೋದರೆ ಸಾಮಾಜಿಕ ಅನಾಹುತಗಳು ನಮ್ಮನ್ನು ಕಮರಿ ಹಾಕಲು ಹೊಂಚು ಹಾಕುತ್ತಾ ಕುಳಿತಿರುತ್ತವೆ. ಡಿ.ವಿ.ಜಿ.ಯವರು ತಮ್ಮ ಕೃತಿಯಾದ ಮಂಕುತಿಮ್ಮನ ಕಗ್ಗ ಕೃತಿ ಈ ರೀತಿ ಹೇಳಿದ್ದಾರೆ.

ನಗುಮನದಿ ಲೋಗರ ವಿಕಾರಂಗಳನು ನೋಡಿ
ಬಿಗಿ ತುಟಿಯ ದುಡಿವಂದು ನೋವ ಪಡುವಂದು
ಪೋಗು ವಿಶ್ವಜೀವನದ ಜೀವಾಂತರಂಗದಲಿ
ನಗುನಗುತಾ ಬಾಳ್ ತೆರಳು ಮಂಕುತಿಮ್ಮ

ಲೋಕದಲ್ಲಿ ಬಾಳುವಾಗ ಸಾಮಾನ್ಯರ ತಪ್ಪುಗಳನ್ನು ನೋಡಿ ಮನದಲ್ಲಿ ನಗಬೇಕೇ ಹೊರತು, ಟೀಕಿಸಬಾರದು. ದುಡಿಯುವಾಗ, ಕಷ್ಟಪಡುವಾಗ ತನ್ನ ನೋವನ್ನು ತಾನೇ ನುಂಗಿಕೊಂಡು ವಿಶ್ವಜೀವನದಲ್ಲಿ ನಗುನಗುತ್ತಾ ಬಾಳಬೇಕು. ನಾನು ಏಕೆ ಈ ವಿಚಾರವನ್ನು ನಿದರ್ಶನವಾಗಿ ನೀಡಿದನೆಂದರೆ ಎನ್.ನರಸಿಂಹಯ್ಯನವರು ತಮ್ಮ ಕಾದಂಬರಿಗಳಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿ ಸುಖಜೀವನ ನಡೆಸಲು ಡಿ.ವಿ.ಜಿ.ಯವರ ಮಾತನ್ನೇ ಉಲ್ಲೇಖಿಸಿದ್ದಾರೆ.

ಅಧ್ಯಾಯ–೧೦

ಗ್ರಂಥ ಋಣ

I. ಆಕರ ಗ್ರಂಥಗಳು :

೧. ಭಯಂಕರ ಭೈರಾಗಿ : ೧೯೭೩, ೨೦೧೦ ಮರು ಮುದ್ರಣ ಸ್ವಪ್ನ ಬುಕ್ ಹೌಸ್ ಬೆಂಗಳೂರು

೨. ಪತ್ತೇದಾರ ಮಧುಸೂದನ

೩. ಮಂತ್ರಗಾರ ಮರಿಯಣ್ಣ

೪. ಬೊಂಬಾಯಿ ದಗಾಕೋರ

೫. ವಿಚಿತ್ರ ವಿಲಾಸಿನಿ

೬. ನಾಲ್ವರೂ ನಪುಂಸಕರೇ?

೭. ಮಾಯಾಂಗನೆಯ ಮರ್ಮ : ೧೯೬೯, ೨೦೧೦ ಮರು ಮುದ್ರಣ

೮. ಧನ ಪಿಶಾಚಿಯ ಢಾಕು : ಬುರ್ಕ್ ಮಾರ್ಕ್ ಬೆಂಗಳೂರು

೯. ಸ್ಮಶಾನ ಭೈರಾಗಿ

೧೦. ಪ್ರಣಯ ಪುಂಡಾಟ

೧೧. ಪ್ರಚಂಡ ಚೋರ

೧೨. ಎಂಟು ಕೊಲೆಯ ಭಂಟ

೧೩. ರಾಗಿಣಿಯ ರಂಗಾಟ

೧೪. ಪ್ರತಿಹಿಂಸೆ ಪಿಶಾಚಿ

೧೫. ಅನುರಾಗದ ಅಂಬುಜ

೧೬. ಜಾದೂಗಾರ ಜಗದೀಶ : ೧೯೬೦, ಟಿ ನಾರಾಯಣ ಅಯ್ಯಂಗಾರ್ ಬೆಂಗಳೂರು

೧೭. ಪ್ರೇತವನದ ಪುಷ್ಪ

೧೮. ಕತ್ತಲಲ್ಲಿ ಕಾಮಿನಿ

೧೯. ಮಾಯಾವಿನಿಯ ಮರ್ಮ

೨೦. ಮೋಹಿನಿ ವಿಲಾಸ ಭಾಗ-೧ : ೧೯೬೧, ಟಿ ನಾರಾಯಣ ಅಯ್ಯಂಗಾರ್, ಬೆಂಗಳೂರು

೨೧. ಹುಚ್ಚನ ರಹಸ್ಯ

೨೨. ವಿನೋದ ವಿಲಾಸಿನಿ

೨೩. ಕುಂಕುಮದ ಭರಣಿ

೨೪. ಮಾರ್ಜಾಲ ಮಾಯ

೨೫. ವಿಲಕ್ಷಣ ವಾರಾಂಗನೆ

೨೬. ಕೆರಳಿದ ಕೇಸರಿ

೨೭. ಮಂಗಳೂರು ಮೋಹಿನಿ : ೧೯೫೮, ವಿನಾಯಕ ಪ್ರಕಾಶನ ಮೈಸೂರು

೨೮. ಮಾಯಾವಿ ಮಧುಸೂದನ

೨೯. ನೀಲಿಬಣ್ಣದ ಕೋಟು

೩೦. ಲಕೋಟೆಯ ರಹಸ್ಯ

೩೧. ಪ್ರೇಮದ ಪರಿಣಾಮ

೩೨. ಮಾರ್ಕೆಟ್ ಮೋಹಿನಿ

೩೩. ಆಕಸ್ಮಿಕ ಅಪರಾಧ : ೧೯೭೫ ರಲ್ಲಿ ಶ್ರೀ ಗಣೇಶ ಪ್ರಕಾಶನ ಮೈಸೂರು

೩೪. ಭಾನಾಮತಿ ಪ್ರಸಂಗ

೩೫. ಬೀದಿಯ ಪಾರಿವಾಳ : ಮೊದಲ ಮುದ್ರಣ ೧೯೬೫ ಶಶಿ ಪ್ರಕಾಶನ
ಎರಡನೆ ಮುದ್ರಣ ೧೯೬೭ ಬೆಂಗಳೂರು

೩೬. ವಿಚಿತ್ರ ಚೋರ

೩೭. ಪ್ರೇತವನದ ಪುಷ್ಪ

೩೮. ಪಂಜರದ ಪಿಶಾಚಿ

೩೯. ಭಯಂಕರ ಭೂತ

೪೧. ಹತ್ಯಾರಹಸ್ಯ

೪೨. ಮೋಹದ ಮಡದಿ

೪೩. ಮಂತ್ರಗಾರ ಮರಿಯಣ್ಣ

೪೪. ಪ್ರೇಮವಿಲ್ಲದ ಪಕ್ಷಿ

೪೫. ನನ್ನ ನೋವು ನಲಿವು ಭಾಗ-೯ : ೨೦೦೧
ಆತ್ಮಕಥನ ಅಳಿಲು ಸೇವಾಸಂಸ್ಥೆ, ಬೆಂಗಳೂರು

೪೬. ಕಾಳರಾತ್ರಿಯ ಖದೀಮ

೪೭. ಪ್ರತೀಕಾರದ ಘಟಿಂಗ

೪೮. ಪಂಚರಂಗಿ ಪದ್ಮಿನಿ (೨ ಭಾಗ)

೪೯. ಕೊಲೆಯ ರಹಸ್ಯ

೫೦. ದರೋಡೆ ಚಕ್ರವರ್ತಿ

II. ಪರಾಮರ್ಶನ ಗ್ರಂಥಗಳು

೧) ಕನ್ನಡ ಸಾಹಿತ್ಯ ಚರಿತ್ರೆ : ರಂ.ಶ್ರೀ ಮುಗಳಿ

೨) ಸಾಹಿತ್ಯ ಪ್ರವೇಶ : ಸಿ.ಪಿ.ಕೆ ೧೯೯೮ ಚೇತನ ಬುಕ್ ಹೌಸ್, ಮೈಸೂರು

೩) ಮುಯ್ಯಿಗೆ ಮುಯ್ಯಿ : ಎನ್. ಗುಂಡಾಶಾಸ್ತ್ರಿ

೪) ರಾಣಿಮಹಲ್ ರಹಸ್ಯ : ಪುಲಿಕೇಶಿ

೫) ಶೇರೆಗಾರನ ಹೆಂಡತಿ : ಶ್ರೀನಿವಾಸ ಉಡುಪ.

೬) ಒಳಸಂಚು : ೧೯೩೦ ಎಸ್. ಆರ್. ಪ್ರಕಾಶನ ಬೆಂಗಳೂರು

೭) ಸೇಡಿನ ಸ್ವರೂಪ : ಸುಧಾಕರ್, ೧೯೯೯ ಪ್ರಥಮ ಮುದ್ರಣ,
ಪ್ರಕಾಶ ಸಾಹಿತ್ಯ ಬೆಂಗಳೂರು.

೮) ಬೋಗಸ್ ಡಾಕ್ಟರ್ : ಬಿ.ಎಸ್. ಕೃಷ್ಣಮೂರ್ತಿ ೧೯೬೯ ಪ್ರಥಮ ಮುದ್ರಣ, ಓಂ ನಾರಾಯಣ ಅಯ್ಯಂಗಾರ್ ಬೆಂಗಳೂರು.

೯) ಪಯಣದ ಕೊನೆ : ಟಿ.ಕೆ.ರಾಮರಾವ್, ಪ್ರಥಮ ಮುದ್ರಣ ೧೯೮೬ ನಂತರ ೨೦೧೦
ಧೃತಿ ಪ್ರಕಾಶನ, ಬೆಂಗಳೂರು.

III. ಸಂದರ್ಶನ ಮತ್ತು ಫೋಟೋಗಳು : ಬಂಧು ಬಾಂಧವರನ್ನು ಭೇಟಿ ಮಾಡಿ ಸಂಗ್ರಹಿಸಿದ ಮಾಹಿತಿ

IV. ಪತ್ರಿಕೆಗಳು

೧) ಪ್ರಜಾವಾಣಿ ಪತ್ರಿಕೆ : ಡಿಸೆಂಬರ್ ೨೬

೨) ಸುಧಾ : ೨೦೧೨ರ ಸಂಚಿಕೆ

V ಇಂಗ್ಲೀಷ್ ಡಿಟೆಕ್ಟಿವ್ ಕಾದಂಬರಿಗಳು

1. The complete Sherlock Holmes : Arthur Conan Doyle
2. And then there were None : Agatha Christie
3. Death on the Nile : (Hercules poirot, # 17)
   By Agatha Christie
4. The Hound of the Baskervilles : (Sherlock Holmes #.5)
   Arthur Conan Doyle
5. The Moonstone : Willkie Collins
6. Gaudy Night : (Lord peter Wimpey # 1
   Dotothy, L. Sayers)
7. Black Dog : (Ben cooper and Diane try # 1)
   By Stephen Booth (Good ReadsAuthor)
8. The woman in white : By Willkie Collins
9. Cover her face : (Adam dallies, #1)
   By Elizabeth George.

6. English detective scholar web resources

1. A guide to classic mystery and detection

   http://life members.aol.com/mg4273/clasics.htm

2. The life and times of Ngai marsh

   http://www.unc.edu/bell/path finder/ngaio.html

3. The mysterious homepage

   http://www.webfic.com/mysthome.htm

4. mystery reader's journal

   http://ww.mysterreaders.org/

AKSHARA GRANTHALAYA
ACC.NO. 048877

048877